ಆಗಸ್ಟ್ 19,1990. ರೂ.1.50

ಐಕ್ಯರಂಗ

ಸಂಪುಟ 12 ಸಂಚಿಕೆ 33

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಜನತಾ ದಳದ ಮುಖಂಡರೇ ಎಚ್ಚೆತ್ತುಕೊಳ್ಳಿ

ಜನರ ಬೇಸರ ಸಿಟ್ಟಾಗಿ ಏರಗ ಬಹುದು

ಅಮೆರಿಕಾದ ಉದ್ರೇಕಕಾರಿ ವರ್ತನೆ: ಸಿ.ಪಿ.ಐ. (ಎಂ) ಖಂಡನೆ

ಕುವೈತ್‌ನ್ನು ಆಕ್ರಮಿಸಿಕೊಳ್ಳುವ ಇರಾಕೀ ಕಾರ್ಯಾಚರಣೆಯನ್ನು ಅಂತರಾಷ್ಟ್ರೀಯ ಸಮುದಾಯದ ಎಲ್ಲಾ ವಿಭಾಗಗಳೂ ಖಂಡಿಸಿವೆ. ಆಗಸ್ಟ್ 9 ರಂದು ನಡೆದ ವಿಶ್ವ ಸಂಸ್ಥೆಯ ಭದ್ರತಾ ಮಂಡಳಿಯ ಸಭೆ ಕುವೈತ್‌ನ್ನು ಇರಾಕಿನೊಂದಿಗೆ ವಿಲೀನಗೊಳಿಸುವ ಇರಾಕೀ ಕ್ರಮವನ್ನು ಮಾನ್ಯ ಮಾಡಲು ನಿರಾಕರಿಸಿದೆ. ಇದು ಸರಿಯಾಗಿಯೇ ಇದೆ ಎಂದು ಸಿ.ಪಿ.ಐ. (ಎಂ) ಪೊಲಿಟ್ ಬ್ಯುರೋ ಆಗಸ್ಟ್ 10 ರಂದು ನೀಡಿದ ಹೇಳಿಕೆಯೊಂದರಲ್ಲಿ ಅಭಿಪ್ರಾಯಪಟ್ಟಿದೆ.

ಇರಾಕೀ ಆಕ್ರಮಣವನ್ನು ಕೊನೆಗೊಳಿಸುವ ಪ್ರಯತ್ನಗಳನ್ನು ವಿಶ್ವಸಂಸ್ಥೆಯ ಕ್ರಮಗಳ ಹಾಗೂ ಅರಬ್ ದೇಶಗಳು ಒಟ್ಟಾಗಿ ನಿರ್ಧರಿಸುವ ಕಾರ್ಯಾಚರಣೆಯ ಚೌಕಟ್ಟಿನಲ್ಲೇ ನಡೆಸಲಾಗುವುದು ಎಂದು ನಿರೀಕ್ಷಿಸಲಾಗಿತ್ತು. ಆದರೆ ಅಮೆರಿಕಾ ಈ ಹಾದಿಹಿಡಿಯುವ ಬದಲು ತನ್ನ ಸಾರ್ವಭೌಮತೆಯ ರಕ್ಷಣೆಯ ನೆಪಮಾಡಿ ಸೌದಿ ಅರೇಬಿಯಾಕ್ಕೆ, ತನ್ನ 50 ಸಾವಿರ ಸೈನಿಕ ಪಡೆಗಳನ್ನು ಕಳಿಸಿದೆ. ಇದು ಅಲ್ಲಿನ ಸಂಘರ್ಷ ವ್ಯಾಪಕಗೊಳ್ಳುವ ಸಂಭವ ಸೃಷ್ಟಿಸಿದೆ: ಕೊಲ್ಲಿ ಪ್ರದೇಶದಲ್ಲಿ ಶಾಂತಿಗೆ ಅಪಾಯವೊಡ್ಡಿದೆ ಎಂದು ಪಿ.ಬಿ. ಹೇಳಿಕೆ ತಿಳಿಸಿದೆ.

ಅಮೆರಿಕಾದ ಈ ಕ್ರಮ ದುರುದ್ದೇಶದಿಂದ ಕೂಡಿದ್ದು ಎಂಬುದು ಬ್ರಿಟನ್ ಬಿಟ್ಟು ಬೇರಾವ ಪಾಶ್ಚಿಮಾತ್ಯ ದೇಶವೂ ಅದರ ಈ ದಂಡಯಾತ್ರೆಯಲ್ಲಿ ಜತೆಗೂಡಲು ನಿರಾಕರಿಸಿದೆ ಎಂಬ ಸಂಗತಿಯಿಂದಲೇ ಸ್ಪಷ್ಟವಾಗುತ್ತದೆ ಎಂದಿರುವ ಪೊಲಿಟ್‌ಬ್ಯುರೋ ಅಮೆರಿಕಾದ ಈ ಉದ್ರೇಕಕಾರಿ ವರ್ತನೆಯನ್ನು ಬಲವಾಗಿ ಖಂಡಿಸಿದೆ. ಅರಬ್ ದೇಶಗಳ, ವಿಶ್ವ ಸಂಸ್ಥೆಯ ಹಾಗೂ ಅಲಿಪ್ತ ಆಂದೋಲನದ ಪ್ರಯತ್ನಗಳಿಂದಲೇ ಕುವೈತ್ ಮೇಲೆ ಇರಾಕೀ ಆಕ್ರಮಣವನ್ನು ತೆರವು ಮಾಡಲು ಸಾಧ್ಯ. ಅಮೆರಿಕಾದ ಕಾರ್ಯಾಚರಣೆ ಮತ್ತು ಇಸ್ರೇಲಿನ ಯುದ್ಧ ಕೋರ ಹೇಳಿಕೆಗಳು ಸ್ಥಿತಿಯನ್ನು ಇನ್ನಷ್ಟು ಗಂಭೀರ ಗೊಳಿಸುತ್ತದೆಯಷ್ಟೇ. ಅದು ಎಲ್ಲಾ ಅರಬ್ ದೇಶಗಳ ಹಿತಾಸಕ್ತಿಗೆ ಹಾನಿಕಾರಕ ಎಂದು ಪೊಲಿಟ್ ಬ್ಯುರೋ ಹೇಳಿದೆ.

ಜನತಾ ದಳ ಹೆಚ್ಚೆಚ್ಚು ಆತ್ಮಹತ್ಯೆಯ ಪ್ರವೃತ್ತಿ ಬೆಳೆಸಿಕೊಳ್ಳುವಂತೆ ಕಾಣುತ್ತಿದೆ. ಒಂದು ಬಿಕ್ಕಟ್ಟು ಪರಿಹಾರವಾಯಿತು ಎನ್ನುವಷ್ಟರಲ್ಲಿ ಇನ್ನೊಂದು ಎದ್ದು ನಿಲ್ಲುತ್ತದೆ. ಅದನ್ನು ಪರಿಹರಿಸಲು ಪ್ರಯತ್ನಿಸಿದಾಗ ಮತ್ತೊಂದು ಬಿಕ್ಕಟ್ಟು. ನಿರ್ವಹಣೆಯ ಒಂದು ಅನಂತ ಪ್ರಕ್ರಿಯೆಯೇ ಸಾಗಿದಂತಿದೆ. ಆದರೆ ಇದಕ್ಕೂ ಒಂದು ಮಿತಿಯಿದೆ ಯಲ್ಲವೇ? ಅದೂ ದೇಶದಲ್ಲಿನ ಸನ್ನಿವೇಶ ಗಂಭೀರ ಸ್ವರೂಪದಲ್ಲಿದೆ ಎಂದು ಎಲ್ಲರೂ ಒಪ್ಪುವಾಗ ಬೆಲೆಗಳು ಎಲ್ಲಾ ಸಂಕೋಲೆಗಳನ್ನು ತಪ್ಪಿಸಿಕೊಂಡು ಹುಚ್ಚೆದ್ದು ತಾಂಡವವಾಡುತ್ತಿವೆ. ಹಣ ದುಬ್ಬರ ಒಂದಂಕಿಯಿಂದ ಎರಡಂಕಿಗೆ ಪದಾರ್ಪಣ ಮಾಡಿದೆ. ಒಳ್ಳೆ ಬೆಳೆ ಬಂದಿದ್ದರೂ ಆಹಾರಪದಾರ್ಥಗಳ ಬೆಲೆ ಗಗನಕ್ಕೇರಿದೆ.

ನಿರುದ್ಯೋಗ ಏರುತ್ತಲೇ ಇದೆ. ಜತೆಗೆ ಕೈಗಾರಿಕೆಗಳು ಎಂದಿನಂತೆ ರೋಗ ಪೀಡಿತಗೊಂಡು ನಿರುದ್ಯೋಗಿಗಳ ಸೇನೆ ಮತ್ತಷ್ಟು ಬೆಳೆಯುತ್ತಿದೆ. ಬೆಂಕಿಗೆ ತುಪ್ಪ ಸುರಿವಂತೆ ಮೊನ್ನೆ - ಮೊನ್ನೆ ಘೋಷಿಸಿದ ಕೈಗಾರಿಕಾ ಧೋರಣೆ - ಇನ್ನಷ್ಟು ಅರಾಜಕತೆಯ ಕೆಟ್ಟ ಕ್ಷಣಗಳು.

ಪಂಜಾಬ್ ಉರಿಯುತ್ತಲೇ ಇದೆ. ಪರಿಸ್ಥಿತಿಯನ್ನು ಮತ್ತಷ್ಟು ಹದೆಗೆಡಿಸಲು ಇನ್ನಷ್ಟು ಪಿತೂರಿಗಳು ನಡೆಯುತ್ತಿರುವಂತೆ ಕಾಣುತ್ತಿದೆ. ಎಡ ಪಂಥೀಯರು ಬಿಟ್ಟು ಬೇರೆಲ್ಲಾ ರಾಜಕೀಯ ಶಕ್ತಿಗಳು ಅಲ್ಲಿ ನಿಷ್ಕ್ರಿಯಗೊಂಡಿವೆ. ಭಯೋತ್ಪಾದಕರ ಬೇಟೆಯಾಟ ಎಡೆಬಿಡದೆ ಸಾಗಿದೆ. ಕಾಶ್ಮೀರದಲ್ಲಿ ಪರಿಸ್ಥಿತಿ ಹತೋಟಿಗೆ ಬರುವ ಲಕ್ಷಣಗಳಿಲ್ಲ ಮೂಲಭೂತವಾದಿಗಳ, ಪ್ರತ್ಯೇಕತಾವಾದಿಗಳ

ಚಟುವಟಿಕೆಗಳನ್ನು ಬಿಟ್ಟು ಬೇರೆಲ್ಲಾ ರಾಜಕೀಯ ಚಟುವಟಿಕೆಗಳು ಸ್ತಬ್ಧಗೊಂಡಿವೆ. ಆರು ಸಾವಿರ ಯುವಕರು ಪಾಕಿಸ್ತಾನೀ ತರಬೇತಿ ಕೇಂದ್ರಗಳಲ್ಲಿದ್ದಾರೆ. ಬೇಗನೇ ಅವರು ಅಫಘಾನ್ ಮುಜಾಹಿದೀನ್ ಬೆಂಬಲದಿಂದ ನಮ್ಮ ಗಡಿಯ ಮೇಲೆ ಬಂದೆರಗಬಹುದೆಂಬ ಮಾತು ಸರಕಾರೀ ವಲಯದಲ್ಲೇ ಕೇಳಿಬರುತ್ತಿದೆ. ಅಸ್ಸಾಂನಲ್ಲಿ ನಡೆಯುತ್ತಿರುವುದು ಎ.ಜಿ.ಪಿ. ಸರಕಾರದ ಆಡಳಿತವಲ್ಲ - ಉಲ್ಫಾದ ಬೆದರಿಕೆಗಳು, ಕೊಲೆ, ಸುಲಿಗೆಗಳು, ಅಸ್ಸಾಂನಲ್ಲಿ ಬೇರೆ ರಾಜಕೀಯ ಶಕ್ತಿಗಳೆಲ್ಲಾ ನಿಷ್ಕ್ರಿಯಗೊಳ್ಳುವ ಸಂಭವ ಕಾಣುತ್ತಿದೆ. ದಕ್ಷಿಣದಲ್ಲಿ ಶ್ರೀಲಂಕಾ ತಮಿಳರ ಸಮಸ್ಯೆ ಪರಿಹಾರವಾಗದೆ ಆಗಲೇ 60 ಸಾವಿರ ನಿರಾಶ್ರಿತರು ಬಂದಿದ್ದಾರೆ, ಇನ್ನೂ ಬರುತ್ತಲೇ ಇದ್ದಾರೆ.

ವಿ.ಹೆಚ್.ಪಿ., ಬಿ.ಜೆ.ಪಿ. ಮತ್ತಿತರ ಕೋಮುವಾದಿ ಸಂಘಟನೆಗಳು ರಾಮಜನ್ಮ ಭೂಮಿ ಬಾಬ್ರಿ ಮಸೀದಿ ವಿವಾದ ಕೆಡಿಸಿರುವ ವಾತಾವರಣದ ಪೂರ್ಣ ಪ್ರಯೋಜನ ಗಿಟ್ಟಿಸಿದ್ದಾರೆ. ರಾಜಕೀಯ

ಪುಟ 8 ಕ್ಕೆ

> ಅರಮನೆ ಪಿತೂರಿಗಳ ಅಪಾಯಕಾರೀ ಆಟದಲ್ಲಿ ತೊಡಗಿರುವ ರಾಜಕಾರಣಿಗಳಿಗೆ ತಮ್ಮ ಆಟಗಳ ಪರಿಣಾಮದ ಅರಿವಿದೆಯೇ?......
> ಜನರಿಗೆ ಆಶಾಭಂಗವಾಗಿದೆ. ಅವರ ವ್ಯಗ್ರತೆ ಬೆಳೆಯುತ್ತಿದೆ. ಆದರೆ ಅದಿನ್ನೂ ಸರಕಾರದ ವಿರುದ್ಧ ಸಿಟ್ಟಾಗಿ ಪರಿವರ್ತನೆಗೊಂಡಿಲ್ಲ. ಆದರೆ ಈ ನಾಚಿಕೆಗೇಡೀ ಆಟಗಳು ಮುಂದುವರಿದರೆ ಆ ದಿನವೂ ದೂರವಿಲ್ಲ.

ಬೆಲೆಗಳು ಹುಚ್ಚೆದ್ದು ಕುಣಿಯುತ್ತಿವೆ. ಜನರ ಹೊರೆ ಇಳಿಸಲು ದಾರಿಯಿಲ್ಲವೇ?

ಬೆಲೆಯೇರಿಕೆಯ ಹೊರೆ ಅಸಹನೀಯವಾಗುತ್ತಿದೆ. ಸಗಟು ಬೆಲೆ ಸೂಚ್ಯಂಕ ಕಳೆದ ಏಳು ತಿಂಗಳಲ್ಲಿ ನಿರಂತರ ಏರುತ್ತಲೇ ಬಂದಿದೆ. ಡಿಸೆಂಬರ್ 13, 1989 ರಲ್ಲಿ 1664 ಇದ್ದುದು 28.7.90 ರಲ್ಲಿ 178.5 ಕ್ಕೇರಿದೆ. ಜೀವನ ವೆಚ್ಚ ಸೂಚ್ಯಂಕ ಕೂಡಾ ಡಿಸೆಂಬರ್‌ನಲ್ಲಿ 175 ಇದ್ದದ್ದು ಜೂನ್‌ನಲ್ಲಿ 185 ಕ್ಕೇರಿದೆ. ಹಣದುಬ್ಬರ ಒಂದಂಕಿಯಿಂದ ಎರಡಂಕಿಗೆ ಬಂದು ಬಿಟ್ಟಿದೆ. ಇತ್ತೀಚಿನ ವರ್ಷಗಳ ಅತ್ಯಂತ ವೇಗದ ಬೆಲೆಯೇರಿಕೆಯಿದು.

ಇದು ಅಂಕಿ ಅಂಶಗಳ ಮಾತು. ಜನ ತೆರಬೇಕಾದ ಬೆಲೆ ಇನ್ನೂ ಹೆಚ್ಚು. ಅಡಿಗೆ ಎಣ್ಣೆಗಳ ಬೆಲೆ ಪ್ರತೀದಿನ ಎಂಬಂತೆ ಏರುತ್ತಲೇ ಇದೆ. ತರಕಾರಿ , ಅಕ್ಕಿ, ಗೋಧಿ, ಬೇಳೆ ಎಲ್ಲದರ ಬೆಲೆಗಳೂ ಸ್ಪರ್ಧೆನಿಲ್ಲಿಸುವಂತೆ ಕಾಣುತ್ತಿಲ್ಲ. ಬೆಲೆಗಳು ಹತೋಟಿಗೆ ಬರುತ್ತಿವೆ ಎಂಬ ಸರಕಾರದ ಹೇಳಿಕೆ ನಂಬುವಂತಹದ್ದಲ್ಲ.

ರಾಷ್ಟ್ರೀಯ ರಂಗದ ಮೊದಲ ಬಜೆಟ್‌ನಿಂದ ಆರಂಭವಾಗಿ ಕೇಂದ್ರ ಬಜೆಟ್‌ನಲ್ಲಿ ಮುಂದುವರೆದ ತೆರಿಗೆಗಳ ಹೊರೆ, ಮುಖ್ಯವಾಗಿ ಪೆಟ್ರೋಲ್, ಡೀಸಲ್, ಸಾಗಾಣಿಕೆ ದರಗಳ ಏರಿಕೆ ಇಂತಹ ಹಣದುಬ್ಬರಕ್ಕೆ ತುಪ್ಪ ಸುರಿಯಿತು ಎಂಬುದರ ಬಗ್ಗೆ ಯಾರಿಗೂ ಸಂಶಯವುಳಿದಿಲ್ಲ. ಪಶ್ಚಿಮ ಬಂಗಾಳದ ಎಡರಂಗದ ಅಧ್ಯಕ್ಷ ಕಾಂ. ಶೈಲೇನ್‌ದಾಸ್‌ಗುಪ್ತಾ ಪ್ರಧಾನಮಂತ್ರಿಗಳಿಗೆ ಇದೇ ಜುಲೈ 24 ರಂದು ಬರೆದ ಪತ್ರದಲ್ಲಿ ಹೇಳಿರುವಂತೆ ರಾಜೀವ್‌ಗಾಂಧಿ ಸರಕಾರದ ನೀತಿಗಳಿಂದಾಗಿ ಡಿಸೆಂಬರ್ 1989 ರ ಹೊತ್ತಿಗಾಗಲೇ ಬಜೆಟ್ ಕೊರತಾ 13790 ಕೋಟಿ ರೂ. ಗಳಾಗಿತ್ತು. ಆಗಲೇ ಬಜೆಟ್ ಅಭ್ಯಾಸನೆ ನೀಡಿದ್ದ ಮಿತಿಯ ಇಮ್ಮಡಿಯನ್ನು ದಾಟಿತ್ತು ಎಂಬ ಸಂಗತಿಯ ಅರಿವು ನಮಗೆಲ್ಲ ಇದೆ. ಆದರೂ ಆ ಬಜೆಟ್ ಕೊರತಾವನ್ನು ನೀಗಿಸಲು ರಾಷ್ಟ್ರೀಯ ರಂಗ ಸರ್ಕಾರ ಕೈಗೊಂಡ ಕ್ರಮ ಎಂದರೆ ಪೆಟ್ರೋಲ್, ಡೀಸಲ್, ಸಾಗಾಣಿಕೆ ದರ ಏರಿಕೆಯ ಕ್ರಮವನ್ನು ನಾವು ಸಂಪೂರ್ಣವಾಗಿ ವಿರೋಧಿಸಿದ್ದೇವೆ.

ಬೇರೆ ದಾರಿಗಳಿದ್ದವೇ?

ಇದ್ದವು. ಪಶ್ಚಿಮ ಬಂಗಾಳದ ಎಡರಂಗ ಸರ್ಕಾರ ಈ ಬಗ್ಗೆ ತನ್ನ ಸಲಹೆಯನ್ನು ಆಗ ನೀಡಿತ್ತು. ಆ ಸಲಹೆಗಳನ್ನು ಈಗ ನೆನಪಿಸಿಕೊಳ್ಳುವುದು ಒಳ್ಳೆಯದು.

ಪೆಟ್ರೋಲ್, ಡೀಸಲ್ ದರ ಏರಿಕೆಯ ಹಣದುಬ್ಬರಕಾರೀ ಕ್ರಮಗಳ ಬದಲು ಬಜೆಟ್ ಸಂಪನ್ಮೂಲ ಸಂಗ್ರಹಣೆಗೆ ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಬಹುದಿತ್ತು.

(1) ಸಣ್ಣ ಉಳಿತಾಯದ ಗುರಿಯನ್ನು ಹೆಚ್ಚಿಸುವುದು. 1989-90 ರ ಬಜೆಟ್ಟಿನಲ್ಲಿ ಈ ಗುರಿ 7157 ಕೋಟಿ ರೂ. ಇದ್ದರೂ, ಸಣ್ಣ ಉಳಿತಾಯದ ಪ್ರವೃತ್ತಿ ಹೆಚ್ಚುತ್ತಿದ್ದರೂ 1990-91 ರ ಬಜೆಟ್ ಈ ಗುರಿಯನ್ನು 5500 ಕೋಟಿಗೆ ಇಳಿಸಿತು.

(2) ಪ್ರಸ್ತುತ ಕೇಂದ್ರ ತೆರಿಗೆಗಳ ವಸೂಲಿಗೆ ಹೆಚ್ಚಿನ ಪ್ರಯತ್ನ

(3) ಅತೀ ಶ್ರೀಮಂತರಿಂದ ಹೆಚ್ಚಿನ ತೆರಿಗೆ ವಸೂಲಿ.

ಈ ಕ್ರಮ ಅನುಸರಿಸಿದ್ದರೆ ಹಣದುಬ್ಬರ ಜನ ಸಾಮಾನ್ಯರ ಜೇಬನ್ನು ಅಷ್ಟಾಗಿ ತಟ್ಟುತ್ತಿರಲಿಲ್ಲ. ಆದರೆ ರಾಷ್ಟ್ರೀಯ ರಂಗ ಸರ್ಕಾರ ಈ ಸಲಹೆಗಳನ್ನು ಸ್ವೀಕರಿಸಲಿಲ್ಲ. ಬದಲಿಗೆ ಹಳೆಯ ಕಾಂಗ್ರೆಸ್ ವಿಧಾನಗಳನ್ನೆ ಮುಂದುವರೆಸಿತು. ಮೇ 1 ರಿಂದ ಗೋಧಿಯ ಬೆಲೆಯನ್ನು ಹೆಚ್ಚಿಸಿತು. ಜೂನ್ 25 ರಿಂದ ಅಕ್ಕಿಯ ಬೆಲೆ ಏರಿಸಿತು. ಪರಿಣಾಮವಾಗಿ ಸಾರ್ವಜನಿಕ ವಿತರಣಾ ವ್ಯವಸ್ಥೆ ಅಂದರೆ ರೇಶನ್ ವ್ಯವಸ್ಥೆ ಕೂಡಾ ಜನಸಾಮಾನ್ಯರಿಗೆ ನಿಲುಕದಂತಾಗಿದೆ. ಇದರಿಂದ ರೇಶನಿಂಗ್ ವ್ಯವಸ್ಥೆಯೇ ದುರ್ಬಲಗೊಂಡಿದೆ.

ಖಾದ್ಯ ತೈಲಗಳ ಉತ್ಪಾದನೆ ದೇಶದ ಅಗತ್ಯಗಳಿಗೆ ಸಾಕಷ್ಟಿಲ್ಲ ಎಂದು ಮೊದಲೇ ಗೊತ್ತಿದ್ದರೂ ಸೂಕ್ತ ಆಮದಿನ ಬಗ್ಗೆ ಸರಕಾರ ಯೋಜನೆ ಮಾಡಲಿಲ್ಲ. ರಿಫೈಂಡ್ ಸಾಸುವೆ ಎಣ್ಣೆಯ ಆಮದನ್ನು ಕೂಡಾ ಅನಗತ್ಯವಾಗಿ ನಿಲ್ಲಿಸಿತು. ಪಾಮೋಲಿನ್ ವಿತರಣೆ ಹೆಚ್ಚಿಸಲು ಕ್ರಮ ಕೈಗೊಳ್ಳಲಿಲ್ಲ. ಕಡಲೇಕಾಯಿ ಎಣ್ಣೆಯ ಬೆಲೆ ವಿಪರೀತವಾಗಿ ಏರಲಾರಂಭಿಸಿತು.

ಸಿಮೆಂಟ್ ಮೇಲೆ ಲೆವಿಯನ್ನು ಮತ್ತೆ ಹೇರಬೇಕೆಂದೂ ಪಶ್ಚಿಮ ಬಂಗಾಳ ಎಡರಂಗ ಸೂಚಿಸಿತ್ತು. ಹಿಂದಿನ ಸರಕಾರ ಸಿಮೆಂಟ್ ಕಂಟ್ರೋಲ್ ತೆಗೆದುದರಿಂದ ಉಂಟಾದ ನಿರಂತರ ಬೆಲೆ [illegible] ಸಿಮೆಂಟ್ ಉತ್ಪಾದಕರಿಗೆ ಎಷ್ಟು ಮಸವಿ ಮಾಡಿಕೊಂಡರು [illegible] ನಿಷ್ಕ್ರಿಯರಾದರು. ಸರಕಾರ ಅದನ್ನಷ್ಟೇ ಮಾಡಿತು. ಸಕ್ಕರೆಯ [illegible] ಅಷ್ಟೇ.

ಈಗ ದಾರಿ ಯಾವುದು?

ರಾಷ್ಟ್ರೀಯ ರಂಗ ಸರ್ಕಾರದ ತಪ್ಪು ನೀತಿಗಳಿಂದ ಜನರ ಮೇಲೆ [illegible] ವಿಪರೀತ ಭಾರವನ್ನು ತಗ್ಗಿಸಲು ಏನೂ ದಾರಿಯಿಲ್ಲವೆ.

ಖಂಡಿತಾ ಇದೆ. ಅದೆಂದರೆ ಎಡರಂಗ ಸರ್ಕಾರ ಮತ್ತು ಎಲ್ಲಾ ಎಡ [illegible] ಕ್ಷಗಳು ನಿರಂತರವಾಗಿ ಒತ್ತಾಯಿಸುತ್ತಾ [illegible] ಧಾನ್ಯಗಳು (ಅಕ್ಕಿ, ಗೋಧಿ), ಸಕ್ಕರೆ, ಅಡಿಗೆ ಎಣ್ಣೆ, ಉಪ್ಪು, ಬೆಂಕಿಪೊಟ್ಟಣ, ಸ್ಟಾಂಡರ್ಡ್ [illegible] ದ್ವಿದಳ ಧಾನ್ಯಗಳು, ಚಹಾ, ಮಕ್ಕಳ ಆಹಾರ, [illegible], ಉಡುಪು [illegible] ಕೋಕ್ ಮತ್ತು ಸೀಮೆ ಎಣ್ಣೆ), ಸಿಮೆಂಟ್, ಕಾಗದ ಮತ್ತು [illegible] ಈ 14 ಜೀವನಾವಶ್ಯಕ ಸಾಮಗ್ರಿಗಳನ್ನು ಸಾರ್ವಜನಿಕ ವಿತರಣಾ ವ್ಯವಸ್ಥೆ ಅಂದರೆ ಪಡಿತರ ವ್ಯವಸ್ಥೆಯ ಮೂಲಕ ಕಡಿಮೆ ಬೆಲೆಯಲ್ಲಿ ಒದಗಿಸುವುದು.

ನಿಜ, ಇದಕ್ಕೆ ಗಮನಾರ್ಹ ಪ್ರಮಾಣದಲ್ಲಿ ಕೇಂದ್ರದ [illegible] ಅಗತ್ಯ. ಆದರೆ ಜನಸಾಮಾನ್ಯರ ದೃಷ್ಟಿಯಿಂದ ಈ [illegible] ನೀಡುವ ಸಬ್ಸಿಡಿ ಅಥವಾ ಕೃಷಿ ಸಾಲದ [illegible] ಮುಖ್ಯ [illegible] ಯಾಗಿ ಪರಿಗಣಿಸಬೇಕು ಎಂದು ಪಶ್ಚಿಮ ಬಂಗಾಳದ ಎಡರಂಗ ಸರ್ಕಾರ ಒತ್ತಾಯಿಸಿದೆ.

ಎಡರಂಗದ ಅಧ್ಯಕ್ಷ ಕಾಂ. ಶೈಲೇನ್ ದಾಸ್ ಗುಪ್ತಾ [illegible] ನೆನಪಿಸಿರುವಂತೆ ಈ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು [illegible] ಒಂದು ಪ್ರಮುಖ ಹಣದುಬ್ಬರ-ವಿರೋಧಿ ಕ್ರಮ [illegible] ಒಂದು ಪ್ರಮುಖ [illegible] ಪ್ರತಿಷ್ಠೆ. ಇದನ್ನು ಒಂದು ಕ್ರಿಯಾ [illegible]

> **ಪ್ರಿಯ ಪ್ರಧಾನ ಮಂತ್ರಿಗಳೇ,**
> [illegible]
> -ಶೈಲೇನ್ ದಾಸ್ ಗುಪ್ತ.
> ಪಶ್ಚಿಮ ಬಂಗಾಳದ ಎಡರಂಗದ ಅಧ್ಯಕ್ಷ

ರಾಷ್ಟ್ರೀಯ ಸಮಗ್ರತೆಗೆ ಪ್ರತಿಜ್ಞೆ

ಬೆಂಗಳೂರು ಡಿವೈಎಫ್ಐ ನಿಂದ ಮಾನವ ಸರಪಳಿ

ಬೆಂಗಳೂರು, ಆಗಸ್ಟ್ 15: ಸ್ವಾತಂತ್ರ್ಯ ದಿನದಂದು ಕರ್ನಾಟಕದ ರಾಜಧಾನಿಯಲ್ಲಿ ವಿವಿಧ ಕಾರ್ಯಕ್ರಮಗಳು ಏರ್ಪಾಡಾಗಿದ್ದವು. ಸರಕಾರೀ ಕಛೇರಿಗಳಲ್ಲಿ ಧ್ವಜಾರೋಹಣ, ಶಾಲೆಗಳಲ್ಲಿ ಪುಟ್ಟ ಮಕ್ಕಳ ಡ್ರಿಲ್, ... ಹೀಗೆ ಹತ್ತು ಹಲವಾರು. ... ನಡೆದ ನಗರದ ಜನ... ವಿಶೇಷವಾಗಿ ಆಕರ್ಷಿಸಿದ ... ನಡೆಯಿತು. ಅದುವೇ ಮಾನವ ಸರಪಳಿ. ಭಾರತದ ಐಕ್ಯತೆ-ಸಮಗ್ರತೆಯ ರಕ್ಷಣೆಗಾಗಿ ಪ್ರತಿಜ್ಞೆ ತೊಟ್ಟ ಕಾರ್ಯಕ್ರಮ. 1988 ರಲ್ಲಿ ಇದೇ ಉದ್ದೇಶದಿಂದ ಕೇರಳದಲ್ಲಿ 'ಮಾನವ ಗೋಡೆ' ನಿರ್ಮಿಸಿ ದಾಖಲೆ ಮಾಡಿದ ಡಿ.ವೈ.ಎಫ್.ಐ. ಸಂಘಟನೆಯೇ ಇಂದಿನ ಈ ಕಾರ್ಯಕ್ರಮವನ್ನು 44ನೇ ಸ್ವಾತಂತ್ರ್ಯದಿನದ ಅಂಗವಾಗಿ ಸಂಯೋಜಿಸಿತ್ತು.

ಡಿ.ವೈ.ಎಫ್.ಐ. ಬೆಂಗಳೂರು ಜಿಲ್ಲಾ ಸಮಿತಿ ಕರೆಯ ಮೇರೆಗೆ ಟೌನ್ ಹಾಲ್ ಬಳಿ ಬಂದು ಸೇರಿದ ಯುವತಿಯರು, ಪುಟ್ಟ ಮಕ್ಕಳ ಸಹಿತ ನೂರಾರು ಜನರು ಮೆರವಣಿಗೆ ನಡೆಸಿದರು. ಬ್ಯಾನರ್, ಭಿತ್ತಿಪತ್ರ, ಕೆಂಪು ನಕ್ಷತ್ರದ ಶ್ವೇತ ಬಾವುಟಗಳನ್ನು ಹಿಡಿದಿದ್ದ ಮೆರವಣಿಗೆಕಾರರು 'ದೇಶದ ಐಕ್ಯತೆ ಚಿರಾಯುವಾಗಲಿ', 'ಸಾಮ್ರಾಜ್ಯಶಾಹಿಗೆ ಧಿಕ್ಕಾರ', 'ನಮ್ಮಲ್ಲಿಲ್ಲ ಹಿಂದೂ ರಕ್ತ, ನಮ್ಮಲ್ಲಿಲ್ಲ ಮುಸ್ಲಿಂ ರಕ್ತ, ನಮ್ಮಲ್ಲಿಲ್ಲ ಕ್ರೈಸ್ತ ರಕ್ತ, ನಮ್ಮಲ್ಲಿರುವುದು ಮಾನವ ರಕ್ತ', 'ಮಾನವೀಯತೆ ಜಿಂದಾಬಾದ್' ಎಂಬಿತ್ಯಾದಿ ಘೋಷಣೆಗಳನ್ನು ಕೂಗುತ್ತಾ ಕೆ. ಆರ್. ಮಾರ್ಕೆಟ್ ವೃತ್ತವನ್ನು ತಲುಪಿದರು.

ಅಲ್ಲಿ ನಡೆದ ಸಭೆಯಲ್ಲಿ, ಸ್ವಾತಂತ್ರ್ಯ ಹೋರಾಟಗಾರರೂ ಆದ ಸಿ.ಪಿ.ಐ.(ಎಂ) ರಾಜ್ಯ ಸಮಿತಿ ಕಾರ್ಯದರ್ಶಿ ಪಿ. ರಾಮಚಂದ್ರರಾವ್ ಅವರು ಮಾತನಾಡಿ ಭಾರತದ ಸಮಗ್ರತೆಗೆ ಒದಗಿರುವ ಅಪಾಯವನ್ನು ವಿವರಿಸಿದರು. ಜನರ ಒಗ್ಗಟ್ಟೊಂದೇ ಸ್ಥಾಪಿತ ಹಿತಾಸಕ್ತಿಗಳ ಪಿತೂರಿಯನ್ನು ಸೋಲಿಸುವ ಸಾಧನ ಎಂದವರು ನುಡಿದರು. ಇಂಥ ಕಾರ್ಯಕ್ರಮ ಹಮ್ಮಿಕೊಂಡ ಡಿ.ವೈ.ಎಫ್.ಐ.ಯನ್ನು ಅಭಿನಂದಿಸಿದರು.

ಡಿ.ವೈ.ಎಫ್.ಐ. ರಾಜ್ಯ ಸಮಿತಿ ಕಾರ್ಯದರ್ಶಿ ಎಸ್.ಶಿವರಾಂ ಅವರು, ಸ್ವಾತಂತ್ರ್ಯ ಪೂರ್ವದಲ್ಲಿ ಯುವಜನರು ಕೆಚ್ಚಿನಿಂದ ಹೋರಾಟ ನಡೆಸಿದರು.ಆದರೆ ಈಗ ಛಿದ್ರಕಾರಿಗಳ ಬಲೆಗೆ ಬೀಳುತ್ತಿದ್ದಾರೆ ಎಂದು ವಿಷಾದಿಸಿದರು.ಅದನ್ನು ತಪ್ಪಿಸಲು ಡಿ.ವೈ.ಎಫ್.ಐ. ಯುವಜನರ ಉದ್ಯೋಗ, ಶಿಕ್ಷಣ ಮೊದಲಾದ ಪ್ರಶ್ನೆಗಳನ್ನೆತ್ತಿಕೊಂಡು ಹೋರಾಟ ನಡೆಸುತ್ತಿದೆ ಎಂದು ತಿಳಿಸಿದರು.

ಸ್ವಾತಂತ್ರ್ಯ ಬಂದ ದಿನ ನಡೆದ ಸಂಭ್ರಮೋತ್ಸಾಹದಲ್ಲಿ ಮಹಾತ್ಮಾ ಗಾಂಧಿಯವರು ಅವುಗಳಲ್ಲಿ ಪಾಲ್ಗೊಳ್ಳಲಿಲ್ಲ. ಅವರು ಹಾಗೇಕೆ ಮಾಡಿದರು ಎಂಬುದನ್ನು ಇಲ್ಲಿ ನೆನಪಿಸಿಕೊಂಡರೆ ಮಾತ್ರವೇ ಈ ದಿನದ ಆಚರಣೆ ಸಾರ್ಥಕವಾದೀತು ಎಂದು ಕಾಂ.ಜಿ.ಎನ್. ನಾಗರಾಜ್ ಅವರು ಹೇಳಿದರು.

ಡಿ.ವೈ.ಎಫ್.ಐ. ಜಿಲ್ಲಾ ಕಾರ್ಯದರ್ಶಿ ಟಿ.ಶಿವಶಂಕರ್ ರಾಷ್ಟ್ರೀಯ ಸಮಗ್ರತೆ ರಕ್ಷಣೆಯ ಪ್ರತಿಜ್ಞೆ ಬೋಧಿಸಿದರು. ಅನಂತರ ಕಾರ್ಯಕ್ರಮಕ್ಕೆ ಆಗಮಿಸಿದ್ದ ಎಲ್ಲರೂ ಕೈ ಕೈ ಹಿಡಿದು ಮಾನವ ಸರಪಳಿ ರಚಿಸಿ ಘೋಷಣೆಗಳನ್ನು ಪ್ರತಿಧ್ವನಿಸಿದರು. ಜನರು ಕುತೂಹಲದಿಂದ ಈ ಕಾರ್ಯಕ್ರಮವನ್ನು ವೀಕ್ಷಿಸಿದರು.

ಕೊನೆಯಲ್ಲಿ ಕಾಂ.ಮಹದೇವ್ ಕುಮಾರ್‌ರವರು ಧನ್ಯವಾದ ಸಮರ್ಪಿಸಿದರು

ಕಾರಿರುಳಿನ ಛಾಯೆಯಲ್ಲಿ

ಮುಗಿದಿಲ್ಲ, ಕಥೆ.
ಜೋತುಬಿದ್ದಿದೆ ವ್ಯಥೆ
ಕಾರಿರುಳಿನ ಛಾಯೆಯಲ್ಲಿ.
ನೇತಾಡುವ ಕೈಗಳು ಸ್ವಾಹಾಮಾಡಲೆತ್ನಿಸಿದೆ
ನಗ್ನ ಸತ್ಯದ ಕರ್ಮ.
ಸ್ಮಶಾನದಲ್ಲಿ ಅಸ್ಥಿಪಂಜರಗಳೆದ್ದು
ಮಾತನಾಡುತ್ತಿವೆ.
ನಿಟ್ಟುಸಿರ ಉಸಿರಲ್ಲಿ
ರಕ್ತ ಕಣ್ಣೀರು, ಬೆವರಗಳೆಂದು
ರಣಹದ್ದುಗಳ ಸಾಲು.
ಹರಿದೋಗುವ ಬಯಕೆಗಳು
ಬೂದಿ ಮುಚ್ಚಿದ ಕೆಂಡ.
ಯಾತನೆಯ ಅಂಚಿಗೆ,
ಛಾಯೆಯ ನೆರಳಲ್ಲಿ,
ಸ್ವಾರ್ಥ ಪಂಜಿಡಿದು ಹೊರಟ ಭಲ್ಲೂಕಗಳು.
ಮುಗ್ಧತೆಯ ನೆರಳಿಗೆ
ಭಾರೀ ಭಾಷಣಗಳು.
ಹೊಟ್ಟೆಯ ಕುಟ್ಟುವವರಿಲ್ಲ.
ರಾಷ್ಟ್ರ, ಸಂಸ್ಕೃತಿ, ಶ್ರೇಷ್ಠತೆಗಳೆಂದು
ಕೂಪ ಮಂಡೂಕನ ಕರ್ಮ.
ನಲುಗಿ ಕಲುಕಿದ ಉಸಿರುಗಳು
ಕ್ಷೀಣ ದನಿಗಳ . . . . . ಜಾತ್ರೆ!
ಸ್ವಾರ್ಥಯುತ ಹಿಡಿತದಲ್ಲಿ.
ಚಿಂದಿ, ಖಾವಿ, ಕಮಂಡಲುಗಳ
ನಗ್ನ ಸತ್ಯದ ಮರ್ಮ.
ಅಂತ್ಯದ ಮುಖವಾಡದಾಟ
ಉಸಿರುಳಿಸಿಕೊಂಡಿದೆ.
ಅರೆ ಜೀವ ಭಯದಲ್ಲಿ.
ದತ್ತಿ, ಮಂದಿರ, ಪುರಾಣಗಳಲ್ಲಿ
ಈ ನರಸತ್ತ ಎಲುಬುಗಳು.
ಮಾಡಿನ ಸೂರಿನಲ್ಲಿಣುಕುವ ಚಂದ್ರ
ಗೆದ್ದಲು ತಿಣುಕಿ ಅಣಕಿಸುವ ಹಕ್ಕಿ.
ಬೆನ್ನಿನಲ್ಲಿ ಹುದುಗಿ ಸುತ್ತಿರುವ ಕರುಳು.
ಅರ್ಥವಿಲ್ಲದ್ದರೂ ತೊಳಲಾಟದಲ್ಲಿ
ಹೆಣಗಾಟ . . . . . ಉಸಿರುಗಳಿಲ್ಲ!

ರಾಜ್‌ಕುಮಾರ್. ಎಸ್
ಮಂಗಳೂರು

ಸಿ.ಪಿ.ಐ.(ಎಂ) ಕಟ್ಟಡ ನಿಧಿ

'ಐಕ್ಯರಂಗ'ದ ಜುಲೈ 15 ರ ಸಂಚಿಕೆಯಲ್ಲಿ ಪ್ರಕಟವಾದ ಸಂಗ್ರಹ	23,400ರೂ.
ಆಗಸ್ಟ್ 12 ರ ಸಂಚಿಕೆಯಲ್ಲಿ ಪ್ರಕಟವಾದ ಸಂಗ್ರಹ	28,150ರೂ.
ಈಗಾಗಲೇ ಸಂಗ್ರಹವಾದದ್ದು	51,550ರೂ.
ಸಂಗಮ್ ಸಾಲ್ವೆಂಟ್ ಕಾರ್ಖಾನೆಯ ಕಾರ್ಮಿಕರಿಂದ(ಹರಿಹರ)	1657ರೂ
ಬಿಜಾಪುರ ನಗರದ ವ್ಯಾಪಾರಸ್ಥರಿಂದ ಪ್ರಥಮ ಕಂತಿನ ಸಂಗ್ರಹ	4500ರೂ.
ಒಟ್ಟು	57,707ರೂ.

ಸಂಜೆ ಕಾಲೇಜು ವಿದ್ಯಾರ್ಥಿಗಳ ಪಾಸ್ ಸೌಲಭ್ಯ ಹೋರಾಟಕ್ಕೆ ಯಶಸ್ಸು

ಕರ್ನಾಟಕದ ಸಂಜೆ ಕಾಲೇಜಿನ ವಿದ್ಯಾರ್ಥಿಗಳಿಗೆ ಹಿಂದಿನ ಜನತಾ (ದಳ) ಸರಕಾರ ಜಾರಿಗೆ ತಂದಿದ್ದ ಸೌಲಭ್ಯವನ್ನು ಹಠಾತ್ತನೆ ರದ್ದು ಪಡಿಸುವ ವೀರೇಂದ್ರ ಪಾಟೀಲ್ ಸರಕಾರದ ಕ್ರಮದ ವಿರುದ್ಧ ಬೆಂಗಳೂರಿನ ವಿದ್ಯಾರ್ಥಿಗಳು ತೀವ್ರ ಹೋರಾಟ ನಡೆಸಿದ ಸುದ್ದಿ ಈಗಾಗಲೇ ಪ್ರಕಟವಾಗಿದೆ (ಐಕ್ಯರಂಗ, ಆಗಸ್ಟ್5). ಈ ಹೋರಾಟ ಈಗ ಭಾಗಶಃ ಯಶಸ್ಸನ್ನು ಪಡೆದಿರುವ ಬಗ್ಗೆ ವರದಿ ಬಂದಿದೆ.

ಜುಲೈ 30 ರಂದು ರಸ್ತೆ ತಡೆ ಚಳುವಳಿ ನಡೆಸಿದಾಗ ವಿದ್ಯಾರ್ಥಿನಿಯರೂ ಸೇರಿದಂತೆ ಹಲವಾರು ವಿದ್ಯಾರ್ಥಿಗಳು ಪೋಲೀಸರ ಲಾಠಿ ಪ್ರಹಾರಕ್ಕೆ ಒಳಗಾದರು. 31 ರಂದು ಸಾರಿಗೆ ಸಚಿವರು ಕರೆದ ಸಭೆಯಲ್ಲಿ ವಿವಿಧ ಸಂಘಟನೆಗಳ ಹೋರಾಟ ಸಮಿತಿಯ ಪ್ರತಿನಿಧಿಗಳು ಭಾಗವಹಿಸಿದ್ದರು. ಅಲ್ಲಿ ಯಾವುದೇ ಒಪ್ಪಂದಕ್ಕೆ ಬರಲು ಸಾಧ್ಯವಾಗದೇ ಆಗಸ್ಟ್ 7 ಕ್ಕೆ ಸಭೆಯನ್ನು ಮುಂದೂಡಿತು.

ಈ ಮಧ್ಯೆ ಆಗಸ್ಟ್ 6 ರಂದು ನಡೆಸಿದ ಬಹಿರಂಗ ಸಭೆಯಲ್ಲಿ ಸಾವಿರಾರು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಮೊದಲೇ ನಿಗದಿಪಡಿಸಿದ ಸಂಧಾನ ದಿನವಾದ ಆಗಸ್ಟ್ 7 ರಂದು ಈ ಮೇಲಿನ ಸಂಘಟನೆಗಳಲ್ಲದೆ ಇದುವರೆಗೆ ಈ ಚಳುವಳಿಯಲ್ಲಿ ಯಾವುದೇ ಪಾತ್ರವಹಿಸದ ಸರಕಾರದ ಬಾಲಬಡುಕ ಸಂಘಟನೆ ಎನ್.ಎಸ್.ಯು.ಐ (ಐ) ಕೂಡ ಭಾಗವಹಿಸಿತ್ತು. ತಾನು ಮಧ್ಯಸ್ಥಿಕೆ ವಹಿಸಿ ಸಂಧಾನಕ್ಕೆ ಅವಕಾಶ ಒದಗಿಸಿದೆನೆಂಬ ಭಾವನೆ ಬರುವಂತೆ ವರ್ತಿಸಿದ ಈ ಸಂಘಟನೆಗೆ ನಿಜಕ್ಕೂ ವಿದ್ಯಾರ್ಥಿಗಳ ಬಗ್ಗೆ ಕಾಳಜಿ ಇರಲಿಲ್ಲ; ಮಾತುಕತೆ ಮುರಿಯುವುದೇ ಅದರ ಗುರಿಯಾಗಿತ್ತೆನ್ನುವುದು ಸಂಧಾನದ ಕೋಣೆಯ ದೃಶ್ಯಗಳಿಂದ ಸುವ್ಯಕ್ತವಾಗಿದೆ.

ಈ ಮಾತುಕತೆ ವೇಳೆ ಸಾರಿಗೆ ಸಚಿವ ಕೆ.ಜೆ.ಜಾರ್ಜ್ ಮತ್ತು ಹಲವಾರು ಅಧಿಕಾರಿಗಳು ಒರಟು ವಾದಗಳನ್ನೇ ಮುಂದುವರಿಸಿ ಪಾಸ್ ರದ್ದುಪಡಿಸುವ ನಿರ್ಧಾರಕ್ಕೆ ಅಂಟಿಕೊಳ್ಳಲು ಪ್ರಯತ್ನಿಸಿದರು. ಆದರೆ ಹೋರಾಟಗಾರ ವಿದ್ಯಾರ್ಥಿಗಳ ಒತ್ತಡಕ್ಕೆ ಮಣಿದು ಬಸ್ ಪಾಸ್ ಸೌಲಭ್ಯ ಮುಂದುವರಿಸಲು ಒಪ್ಪಿದರು. ಆದರೆ ಇಲ್ಲಿ ಎರಡು ಪ್ರಮುಖ ಅನಾನುಕೂಲಕರ ಷರತುಗಳನ್ನು ಹಾಕಲಾಗಿದೆ. ಸಂಜೆ 4 ರಿಂದ ರಾತ್ರಿ 10 ಗಂಟೆ ತನಕ ಮಾತ್ರ ಪಾಸ್ ಬಳಸಬೇಕು ಮತ್ತು 28 ವರ್ಷ 28 ಮೀರಿದವರಿಗೆ ಈ ಸೌಲಭ್ಯ ನೀಡುವುದಿಲ್ಲ ಎನ್ನುವುದೇ ಈ ಎರಡು ಷರತ್ತುಗಳು.

ಪಾಸ್ ಸೌಲಭ್ಯವನ್ನು ಮುಂದುವರಿಸುವ ಸರಕಾರದ ಕ್ರಮ ವಿದ್ಯಾರ್ಥಿಗಳ ತೀವ್ರ ಹೋರಾಟಕ್ಕೆ ದೊರೆತ ಯಶಸ್ಸು ಆಗಿದೆಯೆನ್ನುವುದರಲ್ಲಿ ಸಂಶಯವಿಲ್ಲ. ಆದರೆ ಇನ್ನೂ ಉಳಿದಿರುವ ಮೇಲಿನ ಕಂಟಕಗಳನ್ನು ತೊಡೆಯಲಿಕ್ಕಾಗಿ ರೆಗ್ಯುಲರ್ ಕಾಲೇಜುಗಳ ವಿದ್ಯಾರ್ಥಿಗಳ ಬೆಂಬಲವನ್ನು ಪಡೆದು ಹೋರಾಟವನ್ನು ತೀವ್ರಗೊಳಿಸಲು ನಿರ್ಧರಿಸಿದ ಮೇರೆಗೆ ಆಗಸ್ಟ್ 8 ರಂದು ಮಲ್ಲೇಶ್ವರಂ ವೃತ್ತ ಮತ್ತು ಮಿನರ್ವ ಸರ್ಕಲ್‌ನಲ್ಲಿ ಬಸ್ ತಡೆ ಚಳುವಳಿ ನಡೆಸಲಾಯಿತು. ಈ ಸಂದರ್ಭದಲ್ಲಿ ಪೋಲೀಸರು ಲಾಠಿ ಪ್ರಹಾರ ನಡೆಸಿದಾಗ ಎಸ್.ಎಫ್.ಐ. ರಾಜ್ಯ ಸಮಿತಿ ಅಧ್ಯಕ್ಷ ಜೆ.ಸಿ. ಬಯ್ಯಾರೆಡ್ಡಿ ಸಹಿತ ಹಲವರು ಗಾಯಗೊಂಡರು. ನೂರಾರು ವಿದ್ಯಾರ್ಥಿಗಳು ಬಂಧನಕ್ಕೊಳಗಾದರು. ನಾಲ್ಕಾರು ಜನರ ಮೇಲೆ ಪೊಲೀಸರು ಮೊಕದ್ದಮೆ ದಾಖಲು ಮಾಡಿಕೊಂಡಿದ್ದಾರೆ.

ನಲ್ವತ್ತನಾಲ್ಕು ವರ್ಷಗಳ ಹಿಂದೆ.............

ಭಾರತವು ಬ್ರಿಟಿಷರ ದಾಸ್ಯದ ನೊಗದಿಂದ ಸ್ವತಂತ್ರಗೊಳ್ಳುವುದಕ್ಕೆ ಮುನ್ನ. ಒಂದು ವರ್ಷ, ಒಂದು ದಿನ, ನಂತರದ ದಿನ....... ಕಲ್ಕತ್ತದ ಬೀದಿಗಳು. ವರ್ಣಿಸಲು ಅಸಾಧ್ಯವಾದ, ಮಾನವೀಯತೆಗೆ ಸವಾಲಾದ ಸನ್ನಿವೇಶಗಳು. ಕಲ್ಲು ಹೃದಯವನ್ನು ಕರಗಿಸುವ ದೃಶ್ಯಗಳು... ಏನು, ಅವೇನು? ಹೆಣಗಳು.... ಹಿಂದೂ-ಮುಸ್ಲಿಮರದ್ದು. ರಕ್ತದ ಹೊಳೆ, ಚೀರಾಟ, ನರಳಾಟ. ಕಾರ್ಮಿಕರ ವಾಸದ ಪ್ರದೇಶಗಳಲ್ಲೂ ಇಂಥದ್ದೇ ದೃಶ್ಯಗಳು. ಬ್ರಿಟಿಷರು ಮತ್ತು ಆಂಗ್ಲೋ-ಇಂಡಿಯನ್ನರಲ್ಲಿ ಮಾತ್ರ ಇಂಥ ಯಾವುದೇ ಸಾವು ನೋವು ಸಂಭವಿಸಲಿಲ್ಲ.

ಈ ಮಧ್ಯೆ, ಅಲ್ಲೆಲ್ಲಾ ಕಂಡು ಬಂದ ಮರುಭೂಮಿಯಲ್ಲಿ ಮರೀಚಿಕೆ ಎಂಬಂತೆ ಆಶಾಜನಕವಾದ ಅಪರೂಪದ ದೃಶ್ಯಗಳು ಕಂಡುಬಂದವು. ಕೆಂಬಾವುಟಗಳನ್ನು ಹಿಡಿದ ಕಮ್ಯುನಿಸ್ಟರು ಗಲ್ಲಿ ಗಲ್ಲಿಗಳಲ್ಲಿ ತಿರುಗಾಡಿ ಕೋಮು-ಸೌಹಾರ್ದತೆ- ಶಾಂತಿ ಕಾಪಾಡುವಂತೆ ಮನವಿ ಮಾಡಿಕೊಳ್ಳುತ್ತಿದ್ದರು. ಡಾ. ಬಿ.ಸಿ.ರಾಯ್ ಅವರ ಮನೆಯ ಮೇಲೆ ಹಲ್ಲೆ ನಡೆದಾಗ ಆಕ್ರಮಣ ಮಾಡದಂತೆ ಕಮ್ಯುನಿಸ್ಟ್ ನಾಯಕ ಮನ್ಸೂರ್ ಹಬೀಬ್ ಮನವಿ ಮಾಡಿದರು.

ಮುಸ್ಲಿಮರು ಹರತಾಳಕ್ಕೆ ಪ್ರಯತ್ನಿಸಿದರು. ಹಿಂದೂಗಳು ಗಲಭೆ ಎಬ್ಬಿಸಲು ಯತ್ನಿಸಿದರು. ಮುಸ್ಲಿಮರ ಮೆರವಣಿಗೆ ಸಾಗುತ್ತಿದ್ದಾಗ ಮನೆಗಳ ಮೇಲಿಲ್ಲಾ ನಿಂತುಕಲ್ಲು ತೂರಾಟ ನಡೆಸಲಾಯಿತು. ಪ್ರತಿದಾಳಿ ಮಾಡಿದ ಮುಸ್ಲಿಮರು ಬೆಂಕಿ ಇಟ್ಟರು, ಲೂಟಿ ಮಾಡಿದರು. ಒಟ್ಟಿನಲ್ಲಿ ಕಲ್ಕತ್ತವೊಂದು ರಣರಂಗದಂತೆ ಕಾಣುತ್ತಿತ್ತು.

ಇಂಥ ಘಟನೆಗಳು ನಡೆಯಬಹುದೆಂಬ ವರದಿ ರಾಜ್ಯ ಸರಕಾರಕ್ಕೆ ಮೊದಲೇ ತಿಳಿದಿತ್ತು. ರಜೆ ಸಾರಿದ್ದರೆ ಗಲಭೆಗಳು ಸಂಭವಿಸುತ್ತಿರಲಿಲ್ಲ. ಮುಸ್ಲಿಮರು ಬ್ರಿಟಿಷರ ವಿರುದ್ಧ ನಿಲ್ಲುವುದಿಲ್ಲ ಎಂದು ಕೆಲವು ಮುಸ್ಲಿಮರು ಕಮ್ಯುನಿಸ್ಟರ ಜತೆ ಹೇಳಿಕೊಂಡರು.

ದುರದೃಷ್ಟವಶಾತ್, ಮ್ಯಾಸಲ್ ಪಾರ್ಕಿನಲ್ಲಿ ಸೇರಿದ್ದ ಕಾಂಗ್ರೆಸ್ ಸಭೆಯಲ್ಲಿ ಕಾಂಗ್ರೆಸ್ ನಾಯಕರು ಪ್ರಚೋದನಕಾರಿ ಹೇಳಿಕೆ ನೀಡಿದರು. ಎಲ್ಲಾ ಹಿಂದೂಗಳ ಮತ್ತು ಮುಸ್ಲಿಮರ ಅಂಗಡಿಗಳು ತೆರೆದಿರಬೇಕು, ಹರತಾಳದಲ್ಲಿ ಭಾಗವಹಿಸಬಾರದು ಎಂದು ಒಂದು ಹಿಂದೂ ಸಂಘಟನೆ ಕರೆ ನೀಡಿತು.

ಈ ಎಲ್ಲವುಗಳ ನಡುವೆ ಸರೋಜ್ ಮುಖರ್ಜಿ ಅವರೂ ಸೇರಿದಂತೆ ಪತ್ರಕರ್ತರಿದ್ದ ವಾಹನವೊಂದರ ಮೇಲೆ ಮುಸ್ಲಿಮರ ಒಂದು ಗುಂಪು ಹಲ್ಲೆ ನಡೆಸಿತು. ಆಕ್ರಮಣಕಾರರ ಜತೆ ಮಾತನಾಡಿ ಅಂತೂ ಇಂತು ಪಾರಾಗಿದ್ದಾಯ್ತು. ಬ್ರಿಟೀಷರ ವಾಹನಗಳನ್ನು ಯಾರೂ ತಡೆಯುತ್ತಿರಲಿಲ್ಲ. ಅಲ್ಲಿಂದ ಪಾರಾಗಿ ಬಂದ ಸರೋಜ್ ಮತ್ತಿತರರು ಭಾರತ ಕಮ್ಯುನಿಸ್ಟ್ ಪಕ್ಷದ ಕಛೇರಿ ತಲುಪಿದರು. ಅಷ್ಟರಲ್ಲಿ ಅಲ್ಲಿಗೆ ಬಂದ ಓರ್ವ ಸಂಗಾತಿ ಮಣಿಕ್‌ತಲೈ ಪ್ರದೇಶದಲ್ಲಿ ಹಿಂದೂ-ಮುಸ್ಲಿಮ್ ಗಲಭೆ ನಡೆಯುತ್ತಿದೆ ಎಂದೂ, ಮುಸ್ಲಿಮರ ಮನೆ, ಬೀಡಿ ಕಂಪನಿಗಳ ಮೇಲೆ ಹಲ್ಲೆಯಾಗುತ್ತಿದೆ ಎಂದೂ ತಿಳಿಸಿದರು. ತಕ್ಷಣವೇ ಔಷಧಿಗಳನ್ನು ಸಂಗ್ರಹಿಸಿ ರೆಡ್‌ಕ್ರಾಸ್ ಚಿಹ್ನೆಯನ್ನು ತಗಲಿಸಿಕೊಂಡು ವಾಹನವೊಂದರಲ್ಲಿ ಸರೋಜ್ ಮತ್ತಿತರರು ಆ ಪ್ರದೇಶದತ್ತ ಧಾವಿಸಿದರು. ಈಗಿನ ಲೆನಿನ್ ಸರಣಿ ರಸ್ತೆ ತಲುಪಿದಾಗ ರಸ್ತೆಯ ಎರಡೂ ಕಡೆ ಹಿಂದೂ-ಮುಸ್ಲಿಮರು ಗಲಭೆಗಳಿಗೆ ಸಿದ್ಧರಾಗಿದ್ದುದು ಕಂಡುಬಂತು.

'ನಮ್ಮದೇ ದೇಶದಲ್ಲಿ ಆಂತರಿಕ ಯುದ್ಧವೊಂದನ್ನು ನೇರವಾಗಿ ಕಂಡದ್ದು ಇದೇ ಮೊದಲು' ಎಂದು ಕಾಮ್ರೇಡ್ ಸರೋಜ್ ಹೇಳಿದ್ದಾರೆ. ರೆಡ್ ಕ್ರಾಸ್ ಚಿಹ್ನೆಯಿದ್ದುದರಿಂದ ಅವರ ವಾಹನಕ್ಕೆ ಯಾವುದೇ ತಡೆಯುಂಟಾಗಲಿಲ್ಲ. ಗಾಯಗೊಂಡ ಇಬ್ಬರು ಮುಸ್ಲಿಮರನ್ನು ಆಸ್ಪತ್ರೆಗೆ ದಾಖಲು ಮಾಡಲಾಯಿತು. ಗಲಭೆಗಳು ನಡೆಯುತ್ತಿದ್ದರೂ ಪೋಲೀಸರು ಅವುಗಳಿಗೆ ಮೂಕಪ್ರೇಕ್ಷಕರಾಗಿದ್ದರು. ನಗರದಲ್ಲಿ ಬಂಗಲೆಗಳಿಗೆ ಬೆಂಕಿ ಹಾಕಲಾಗುತ್ತಿತ್ತು. ಚಿತ್ತರಂಜನ್ ಅವೆನ್ಯೂದಲ್ಲಿದ್ದ ಇಬ್ಬರು ಹಿಂದೂ ಗಾಯಾಳುಗಳನ್ನು ಆಸ್ಪತ್ರೆಗೆ ಸೇರಿಸಲಾಯಿತು. ಆಸ್ಪತ್ರೆ ದಾರಿಯಾಗಿ ಸಾಗುತ್ತಿದ್ದಾಗ ಹೌರಾ ಬ್ರಿಜ್ ಬಳಿ ಮುಸ್ಲಿಂ ಮೆರವಣಿಗೆ ಮೇಲೆ ದಾಳಿಗೆ ಸಿದ್ಧತೆ ನಡೆದಿದ್ದನ್ನು ಕಂಡು ತಕ್ಷಣ ಪಾರ್ಟಿ ಕಛೇರಿಗೆ ಧಾವಿಸಿ ಮುಸ್ಲಿಂ ಲೀಗ್ ಕಛೇರಿಗೆ ಫೋನ್ ಮೂಲಕ ಸುದ್ದಿ ಮುಟ್ಟಿಸಲಾಯಿತು. ಮೆರವಣಿಗೆ ದಾರಿ ಬದಲಿಸದಿದ್ದರೆ ದೊಡ್ಡ ಅನಾಹುತ ಸಂಭವಿಸಬಹುದೆಂದು ತಿಳಿಸಲಾಯಿತು. ಅನಂತರ ಮೆರವಣಿಗೆಯು ಅಂತ್ಯದಲ್ಲಿ ನಡೆದ ಸಭೆಯಲ್ಲಿ ಮುಸ್ಲಿಮರ ಕೈಯಲ್ಲಿ ಲಾಠಿ, ತಲ್ವಾರುಗಳೇ ತುಂಬಿ ತುಳುಕುತ್ತಿತ್ತು. ಅವರೆಲ್ಲ ಸಭೆಗೆ ಬಂದವರೆನ್ನುವುದಕ್ಕಿಂತ ಯುದ್ಧಕ್ಕೆ ತಯಾರಾದಂತಿತ್ತು. ಈ ನಡುವೆ ಓರ್ವ ವಿದ್ಯಾರ್ಥಿಯನ್ನು ರಕ್ಷಿಸಲಾಯಿತು. ಸಭೆಯಲ್ಲಿ ನಾಯಕರು ಸತತವಾಗಿ ಪ್ರಚೋದನಕಾರಿ ಭಾಷಣಗಳನ್ನು ಮಾಡಿದರು.

ಪೋಲೀಸರ ಕೆಲಸ ಗಲಭೆಗಳನ್ನು ನಿಯಂತ್ರಿಸಲಾಗದ ಪೋಲೀಸರು ಹೆಣಗಳನ್ನು ಎತ್ತಿ ಹಾಕುವುದರಿಂದಷ್ಟೇ ತಮ್ಮ ಕರ್ತವ್ಯವನ್ನು ಪೂರೈಸುತ್ತಿದ್ದರು!

ಕಾಂಗ್ರೆಸ್‌ನ ಧೀರೇನ್ ಮುಖರ್ಜಿ, ಮುಸ್ಲಿಂ ಲೀಗಿನ ಸುಹಾರ್ ವರ್ದಿ, ಸಿ.ಪಿ.ಐ. ನ ಭೂಪೇಶ್ ಗುಪ್ತಾ, ಸುರೇಂದ್ರ ನಾಥ ಇವರುಗಳೆಲ್ಲಾ ಬ್ಯಾನರ್ಜಿ ರಸ್ತೆಯಲ್ಲಿ ಶಾಂತಿಗೆ ಯತ್ನಿಸಿದರು. ರಾಜ್ಯದ ವಿವಿಧ ಕಡೆಗಳಲ್ಲೂ ಭಯಾನಕ ಗಲಭೆಗಳು ನಡೆದಿದ್ದು ಅಲ್ಲೆಲ್ಲಾ ಹೋದಾಗ ತಿಳಿಯಿತು.

ಸುಹಾರ್ ವರ್ದಿಯವರು ಹಿಂದೂಗಳನ್ನು ಶಾಂತಿಯತ್ತ ಮನವೊಲಿಸಲು ಯತ್ನಿಸಿದಾಗ ಅವರ ಕಾರನ್ನು ಪುಡಿಗಟ್ಟಲಾಯಿತು. ಆ ನಂತರ ಈ ಎಲ್ಲಾ ಮುಖಂಡರ ನೇತೃತ್ವದಲ್ಲಿ ಸಂಯುಕ್ತ ತಂಡಗಳು ಜನರನ್ನು ಸಮಾಧಾನ ಪಡಿಸುವ ಕಾರ್ಯಾಚರಣೆ ಆರಂಭಿಸಿದವು. ಆದರೂ ಗಲಭೆಗಳ ಶಮನ ನೇತಾರರಿಗೆ ಬಹಳ ಕಷ್ಟದ ಕೆಲಸವಾಗಿತ್ತು.....

ಇತಿಹಾಸ ಪುಟಗಳಿಂದ

-ಕೆ.ಕೆ.ವಿಶ್ವ. ರಾಜನ್

(ಪಶ್ಚಿಮ ಬಂಗಾಳದ ಎಡರಂಗದ ಸಂಚಾಲಕರೂ, ಸಿ.ಪಿ.ಐ.(ಎಂ) ರಾಜ್ಯ ಸಮಿತಿಯ ಕಾರ್ಯದರ್ಶಿ,ಪಾಲಿಟ್‌ಬ್ಯುರೋ ಸದಸ್ಯರೂ ಆಗಿದ್ದ ಕಾಂ. ಸರೋಜ್ ಮುಖರ್ಜಿ ಅವರ 'ಭಾರತೀಯ ಕಮ್ಯುನಿಸ್ಟರು ಮತ್ತು ನಾವು' ಪುಸ್ತಕದಿಂದ ಸಂಗ್ರಹಿತ.)

ಸಂಸತ್ತಿನಲ್ಲಿ ನಮ್ಮವರು

ಮಳೆಗಾಲದ ಅಧಿವೇಶನದ ಮೊದಲವಾರದಲ್ಲಿ

1989 ರ ಚುನಾವಣೆಗಳಲ್ಲಿ ಕಾಂಗ್ರೆಸ್(ಐ) ಸೋತು ರಾಷ್ಟ್ರೀಯ ರಂಗ ಅಧಿಕಾರಕ್ಕೆ ಬಂದ ಮೇಲೆ ಸಂಸತ್ತಿನ ಬಜೆಟ್ ಅಧಿವೇಶನ ನಡೆದಿತ್ತು. ಅದರ ನಂತರ ಈಗ ಉಭಯ ಸದನಗಳ-ಲೋಕಸಭೆ, ರಾಜ್ಯಸಭೆ-ಮಳೆಗಾಲದ ಅಧಿವೇಶನ ಆಗಸ್ಟ್ 7 ರಂದು ಆರಂಭವಾಗಿದೆ.

ಜನರು ನಿರೀಕ್ಷಿಸಿದಂತೆ ಬೆಲೆಯೇರಿಕೆ ತಡೆಯುವಲ್ಲಿ ವಿಫಲವಾದ ಕೇಂದ್ರ ಸರಕಾರ ಸಹಜವಾಗಿಯೇ ಜನಪ್ರತಿನಿಧಿಗಳ ಟೀಕೆಗೆ ಗುರಿಯಾಗಿದೆ. ಸಂಸತ್ತಿನ ಕಲಾಪಗಳ ಅವಲೋಕನದಿಂದ ಅದು ಸ್ಪಷ್ಟ.

ಆಗಸ್ಟ್ 7: ಲೋಕಸಭೆಯಲ್ಲಿ ಮೊದಲ ದಿನ ಸಿ.ಪಿ.ಐ.(ಎಂ) ಸದಸ್ಯ ಬಾಲಾನಂದನ್ ಮಾತನಾಡುತ್ತ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳನ್ನು ಏರಿಸುವ ಸರಕಾರದ ನಿರ್ಧಾರವನ್ನು ಕಟುವಾಗಿ ಟೀಕಿಸಿದರು. ಈ ಏರಿಕೆ ಇತರ ಅವಶ್ಯಕ ವಸ್ತುಗಳ ಬೆಲೆಗಳ ಮೇಲೆ ಕೂಡ ಪರಿಣಾಮ ಬೀರುತ್ತದೆ ಎಂದರು. ಪೆಟ್ರೋಲಿಯಂ ಉತ್ಪನ್ನಗಳ ಒಟ್ಟು ಬಳಕೆಯಲ್ಲಿ ಸಮಾರು 51 ಶೇಕಡ ಪಾಲು ಸರಕಾರದ್ದಾಗಿದ್ದು ಅದರಲ್ಲಿ ಗಣನೀಯ ಕಡಿತವಾಗಬೇಕು ಎಂದು ಬಾಲಾನಂದನ್ ಸಲಹೆ ಮಾಡಿದರು. ಪೆಟ್ರೋಲಿಯಂ ಮಿತಬಳಕೆಗೆ ಸರಕಾರ ಬೇರೆ ಬೇರೆ ಕ್ರಮಗಳನ್ನು ಕೈಗೊಳ್ಳುತ್ತಿರುವುದನ್ನು ಗಮನಿಸಬಹುದಾಗಿದೆ.-

ಅವಶ್ಯಕ ವಸ್ತುಗಳ ಬೆಲೆ ಇತ್ತೀಚಿನ ತಿಂಗಳುಗಳಲ್ಲಿ ತೀವ್ರವಾಗಿ ಏರಿದ್ದು ಜನಜೀವನ ಕಷ್ಟಕರವಾಗಿದೆ. ಸರಕಾರ ತನ್ನ ಅವಶ್ಯಕ ಸಾಮಗ್ರಿಗಳು ಮತ್ತು ಸಾರ್ವಜನಿಕ ವಿತರಣಾ ನೀತಿಯನ್ನು ಪುನರ್‌ಪರಿಶೀಲಿಸಬೇಕು ಎಂದು ಇ.ಬಿ. ಆಗ್ರಹಿಸಿದರು.

ಪಕ್ಷದ ಸದಸ್ಯ ನಿರ್ಮಲ್ ಚಟರ್ಜಿ ಅವರು ಕೂಡ ಸರಕಾರಿ ಇಲಾಖೆಗಳಿಗೆ ಪೆಟ್ರೋಲ್ ಪಡಿತರ ಜಾರಿಗೊಳಿಸುವಂತೆ ತಿಳಿಸಿದರು. ಸಂಸತ್ ಭವನದ ಗೇಟ್ ನಂ.1 ಬಳಿ ನಡೆದ ಮತಪ್ರದರ್ಶನದಲ್ಲಿ ಪ್ರತಿಪಕ್ಷ ಕಾಂಗ್ರೆಸ್(ಐ) ಒಳಗೊಂಡಿತ್ತೆನ್ನಲಾದ ವಿಚಾರವನ್ನು ಲೋಕಸಭೆಯಲ್ಲಿ ಕೆಲವರು ಪ್ರಸ್ತಾಪಿಸಿ ಕಾಂಗ್ರೆ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದಾಗ ಸೋಮನಾಥ ಚಟರ್ಜಿ ಅದಕ್ಕೆ ದನಿಗೂಡಿಸಿದರು.

(ಸಂಸತ್ತಿನ ಆವರಣದೊಳಗೆ; ಅದೂ ಮೈಕ್ ಬಳಸಿ ಪ್ರದರ್ಶನ ನಡೆದಿದ್ದು ಇದೇ ಮೊದಲ ಬಾರಿಯಾಗಿದೆ)

ಪಾಕಿಸ್ತಾನದಲ್ಲಿ ಬೆನಜೀರ್ ಭುಟ್ಟೊ ನೇತೃತ್ವದ ಚುನಾಯಿತ ಸರಕಾರ ವಜಾ ಆಗಿರುವುದನ್ನು ಪ್ರಸ್ತಾಪಿಸಿದ ಸೈಫುದ್ದೀನ್ ಚೌಧರಿ, ಭಾರತದ ಮೇಲೆ ಅದರಿಂದಾಗಬಹುದಾದ ಪರಿಣಾಮ ಮತ್ತು ಆ ದೇಶದೊಂದಿಗಿನ ಸಂಬಂಧಗಳ ಬಗ್ಗೆ ಲೋಕಸಭೆ ಚರ್ಚೆ ನಡೆಸಬೇಕೆಂದು ಸಲಹೆ ಮಾಡಿದರು.

ಆಗಸ್ಟ್ 8: ತ್ರಿಪುರಾದಲ್ಲಿ ನಡೆಯುತ್ತಿರುವ ಹಿಂಸಾಚಾರಗಳು ಲೋಕಸಭೆಯಲ್ಲಿ ಪ್ರಸ್ತಾವಕ್ಕೆ ಬಂದವು. ಆದಿವಾಸಿ ಜನರನ್ನು ಕೊಲ್ಲಲಾಗುತ್ತಿದೆ ಮತ್ತು ಆದಿವಾಸಿ ಮಹಿಳೆಯರ ಮೇಲೆ ಅತ್ಯಾಚಾರ ಎಸಗಲಾಗುತ್ತಿದೆ ಎಂದು ಸಿ.ಪಿ.ಐ(ಎಂ)ನ ಬಸುದೇವ ಆಚಾರ್ಯ ವಿಷಯವನ್ನು ಎತ್ತಿ ಚರ್ಚೆಗಿಟ್ಟರು. ಕಾಂಗ್ರೆಸ್(ಐ) ಸದಸ್ಯರ ಅಡೆತಡೆಗಳ ನಡುವೆಯೂ ಈ ಸಂಗತಿ ತಮ್ಮ ಮಾತು ಮುಂದುವರಿಸಿ ಆ ರಾಜ್ಯದಲ್ಲಿ ಆದಿವಾಸಿಗಳ ಸುರಕ್ಷತೆ ಗೆ ಕೇಂದ್ರ ಸರಕಾರ ಕ್ರಮಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

.. ತ್ರಿಪುರಾ ಗಲಭೆಗಳಿಗೆ ಸಂಬಂಧಿಸಿದ ಬಸುದೇವ ಅವರ ಪ್ರಸ್ತಾವಕ್ಕೆ ಸೈಫುದ್ದೀನ್ ಚೌಧರಿ, ಸೋಮನಾಥ ಚಟರ್ಜಿ, ಸುಭಾಷಿಣಿ ಅಲಿ, ನಿರ್ಮಲ್ ಚಟರ್ಜಿ ಕೂಡ ದನಿಗೂಡಿಸಿದರು. ಒಟ್ಟಿನಲ್ಲಿ ತ್ರಿಪುರಾ ಪ್ರಶ್ನೆ ಸದನದಲ್ಲಿ ಚಕಮಕಿಗೆ ಕಾರಣವಾಯಿತು.

ಮಹಿಳೆಯರ ರಾಷ್ಟ್ರೀಯ ಆಯೋಗ ರಚನೆ ಬಗ್ಗೆ ಮಸೂದೆಯನ್ನು ಸರಕಾರ ಮಂಡಿಸಿದೆ. ಲೋಕಸಭೆಯಲ್ಲಿ ನಡೆದ ಚರ್ಚೆಯಲ್ಲಿ ಭಾಗವಹಿಸಿದ ಸುಭಾಷಿಣಿ ಅಲಿ ಮಸೂದೆಯನ್ನು ಸ್ವಾಗತಿಸಿದರು. ತಮ್ಮ ಹಕ್ಕುಗಳನ್ನು ಪಡೆಯಲು ನೆರವಾಗುವ ಪರಿಣಾಮಕಾರಿ ಸಾಧನವನ್ನು ಮಹಿಳೆಯರು ಬಯಸುತ್ತಿದ್ದಾರೆ ಎಂದು ಹೇಳಿದರು. ಹಿಂದಿನ ಕಾಂಗ್ರೆ ಸರಕಾರ ಮಹಿಳಾ ಸಂಘಟನೆಗಳೊಂದಿಗೆ ಸಮಾಲೋಚಿಸದೆ ಮಹಿಳೆಯರ ಬಗ್ಗೆ ರಾಷ್ಟ್ರೀಯ ಧೋರಣಾ ಯೋಜನೆರೂಪಿಸಿತ್ತು ಎಂದು ಟೀಕಿಸಿದರು. ಅದಕ್ಕೆ ತದ್ವಿರುದ್ಧವಾಗಿ, ಪ್ರಸಕ್ತ ಸರಕಾರ ಈ ಮಸೂದೆಯಲ್ಲಿ ಮಹಿಳಾ ಸಂಘಟನೆಗಳ ಸಲಹೆಗಳನ್ನು ಅಳವಡಿಸಿದೆ ಎಂದು ಶ್ಲಾಘಿಸಿದರು.

ಆಗಸ್ಟ್ 9: ಪಶ್ಚಿಮ ಬಂಗಾಳದ ಬಿರಾತಿ ಮತ್ತು ಬಂಟಾಲಾದಲ್ಲಿ ನಡೆದ ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ಉಪಯೋಗಿಸಿ ಪಕ್ಷದ ಹಾಗೂ ಎಡರಂಗದ ಪ್ರತಿಷ್ಠೆಗೆ ಕುಂದುತರಲು ಕಾಂಗ್ರೆಸ್(ಐ) ಹಾಗೂ ಬಂಡವಾಳಶಾಹಿ ಪತ್ರಿಕೆಗಳು ಪ್ರಯತ್ನಿಸಿದ್ದನ್ನು ನಾವು ಕಂಡಿದ್ದೇವೆ. ರಾಜ್ಯಸಭೆಯಲ್ಲಿ ಕೂಡ ಕಾಂಗ್ರೆ ಸದಸ್ಯರು ಇದನ್ನು ಪ್ರಸ್ತಾಪಿಸಿದಾಗ ನಮ್ಮವರು ವಿರೋಧಿಸಿದರು. ಪಶ್ಚಿಮ ಬಂಗಾಳದಲ್ಲಿ ಚಳವಳಿನಿರತ ಕಾಂಗ್ರೆ ಕಾರ್ಯಕರ್ತರು, ಮಹಿಳೆಯರ ಮೇಲೂ ಸಿ.ಪಿ.ಎಂ. ಕಾರ್ಯಕರ್ತರು ಹಲ್ಲೆ ಮಾಡಿದರೆಂಬ ವರ್ಣನೆ 'ಕಾಗೆ ಗುಬ್ಬಕ್ಕನ ಕತೆ' ಎಂದು ಪಕ್ಷದ ಸದಸ್ಯ ದೀಪೆನ್ ಘೋಷ್ ರಾಜ್ಯಸಭೆಯಲ್ಲಿ ಛೇಡಿಸಿದರು.

ಆಗಸ್ಟ್ 10: ಲೋಕಸಭೆಯಲ್ಲಿ ನ್ಯಾಷನಲ್ ಕಾನ್ಫರೆನ್ಸ್ ಸದಸ್ಯ ಸೈಫುದ್ದೀನ್ ಸೋಜ್ ಜಮ್ಮು-ಕಾಶ್ಮೀರ ಸರಕಾರ ಅಧಿಕಾರ ದುರುಪಯೋಗಪಡಿಸಿಕೊಳ್ಳುತ್ತಿದೆ ಎಂದು ಆರೋಪಿಸಿದಾಗ ಮಧ್ಯಪ್ರವೇಶಿಸಿದ ಸಿ.ಪಿ.ಐ.(ಎಂ) ಸದಸ್ಯರು, ಸೋಜ್ ಒಬ್ಬರೇ ಕಾಶ್ಮೀರದ ಏಕೈಕ ವಕ್ತಾರರೇ ಎಂದು ಪ್ರಶ್ನಿಸಿದರು. ಸೋಜ್‌ರ ನಿಲುವಳಿ ಸೂಚನೆಯನ್ನು ಸ್ಪೀಕರ್ ತಿರಸ್ಕರಿಸಿದ್ದರು (ಉಭಯಸದನಗಳ ಅಧಿವೇಶನ 7 ರಿಂದ 10 ತನಕ ನಡೆದಿದೆ 16 ರಿಂದ ಮತ್ತೆ ಶುರುವಾಗುತ್ತದೆ)

ಏಜೆಂಸಿ ಡಿಪಾಸಿಟ್

ಹೊಸ ಏಜೆಂಸಿಗೆ ಹಾಗೂ ಪ್ರಸ್ತುತ ಏಜೆಂಸಿಯಲ್ಲಿ ಪ್ರತಿಗಳ ಸಂಖ್ಯೆ ಹೆಚ್ಚಿಸಲು ಪ್ರತಿ ಕಾಪಿಗೆ ರೂ 10/-ರಂತೆ ಡಿಪಾಸಿಟ್ ಪಾವತಿ ಮಾಡಬೇಕು. ಇದನ್ನು ನಮ್ಮ ಏಜೆಂಸಿದಾರರು ಗಮನಿಸಬೇಕಾಗಿ ಕೋರಿಕೆ.
ವ್ಯವಸ್ಥಾಪಕರು.

ಮೂರ್ತೆದಾರರ ಸಭೆ

ವಾಮಂಜೂರಿನಲ್ಲಿ 27-7-90 ತಾರಂದು ಕೆ. ಗಂಗಯ್ಯ ಅಮೀನ್‌ರವರ ಅಧ್ಯಕ್ಷತೆಯಲ್ಲಿ, ವಾಮಂಜೂರಿನ ಚೈ ಶಂಕರ ಮಿತ್ರ ಮಂಡಳಿಯಲ್ಲಿ ಮೂರ್ತೆದಾರರ ಸಭೆಯು ನಡೆಯಿತು. ಸಿಪಿಐ(ಎಂ)ನ ಬೆಂಡಂತಿಲ ಶಾಖಾಕಾರ್ಯದರ್ಶಿ ಬಿ. ಗೋಪಾಲ ಅವರು ಸ್ವಾಗತಿಸಿದರು. ನಂತರ ಮಾತನಾಡಿದ ಸಿಪಿಐ(ಎಂ) ಗುರುಪುರ ಫಿರ್ಕ ಕಾರ್ಯದರ್ಶಿ ಕಾಂ। ಯು. ಲೋಕಯ್ಯನವರು, ಮೂರ್ತೆದಾರರ ಸಮಸ್ಯೆಯನ್ನು ಎಳೆಎಳೆಯಾಗಿ ಬಿಡಿ ವಿವರಿಸಿದರು. ಕಾಂ.ಗಂಗಯ್ಯ ಅಮೀನ್ ರವರು ಮಾತನಾಡುತ್ತಾ, ಮೂಲತಃ ಒಂದು ವರ್ಗದ ಕುಲಕಸುಬಾದ ಮೂರ್ತೆದಾರಿಕೆಯನ್ನು ಸರಕಾರ ಹೀನ ದೃಷ್ಟಿಯಿಂದ ನೋಡುವುದನ್ನು ಖಂಡಿಸಿ, ಎಲ್ಲಾ ಮೂರ್ತೆದಾರರು ಸಂಘಟಿತರಾಗಿ ಹೋರಾಡಬೇಕೆಂದು ಕರೆ ಇತ್ತರು. ಸರಕಾರವು ಮೂರ್ತೆದಾರರಿಗೆ ಬದಲಿ ವ್ಯವಸ್ಥೆಯಾಗಿ ಪ್ರತಿ ಲೀಟರಿಗೆ 3 ರೂನಂತೆ ಅವರು ಮಾರುವ ಸ್ಥಳದಿಂದಲೇ ಶೇಂದಿಯನ್ನು ಖರೀದಿಸಬೇಕೆಂದು ಆಗ್ರಹ ಪಡಿಸಿದರು. ಇಲ್ಲವಾದಲ್ಲಿ ಎಲ್ಲಾ ಮೂರ್ತೆದಾರರು ಶೇಂದಿಯನ್ನು ಮಾರಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು. ಈ ಸಭೆಯಲ್ಲಿ 13 ಜನರ ಕಮಿಟಿಯನ್ನು ರಚಿಸಿ, ಅದರ ಅಧ್ಯಕ್ಷರಾಗಿ ವಿಶ್ವನಾಥ ಪೂಜಾರಿ ಬೊಂಡಂತಿಲ, ಕಾರ್ಯದರ್ಶಿಯಾಗಿ ವಾಸು ಪೂಜಾರಿ ಬೊಂಡಂತಿಲ ಅವರನ್ನು ಆಯ್ಕೆ ಮಾಡಲಾಯಿತು. ಕೊನೆಯಲ್ಲಿ ಬಿ. ಕೃಷ್ಣಪ್ಪನವರು ಧನ್ಯವಾದ ಅರ್ಪಿಸಿದರು.

ರೈತರ ಪ್ರತಿಭಟನೆ

ಇಂದಿಗೆ ನೀರು ಬಂದು 20 ದಿವಸಗಳೇ ಕಳೆದರೂ, ತಮ್ಮ ಜಮೀನುಗಳಿಗೆ ನೀರು ತಲುಪಿಲ್ಲವೆಂದು, ಇದರಿಂದ ಈ ವರ್ಷದ ಬೆಳೆಯು ಸಮಯಕ್ಕೆ ಸರಿಯಾಗಿ ಆಗದೇ ಹಿಂದೆ ಬಿದ್ದಿರುವುದೆಂದು ಕೋಪಗೊಂಡ ಗೋಡೆಹಾಳು, ಆಟುರಾಪುರ, ಎತ್ತಿನ ಬೂದಿಹಾಳಿನ ರೈತರು ಟ್ರಾಕ್ಟರುಗಳಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಧ್ವಜದಡಿಯಲ್ಲಿ ನೀರಾವರಿ ಇಲಾಖೆಗೆ ಘೋಷಣೆಗಳೊಂದಿಗೆ ತೆರಳಿ, ಟೇಲ್-ಎಂಡ್ (tale - end) ರೈತರಾದ ತಮಗೆ ಪ್ರತಿ ವರ್ಷವೂ ಇದೇ ರೀತಿಯ ತೊಂದರೆಯುಂಟಾಗುವುದೆಂದೂ, ಈ ಬಗ್ಗೆ ಅಧಿಕಾರಿಗಳು ಸೂಕ್ತ ಗಮನ ಹರಿಸುತ್ತಿಲ್ಲವೆಂದೂ ಪ್ರತಿಭಟನೆ ವ್ಯಕ್ತಪಡಿಸಿ, ನೀರನ್ನು ಸರಿಯಾದ ಸಮಯಕ್ಕೆ ಒದಗಿಸುವ ವ್ಯವಸ್ಥೆ ಮಾಡಬೇಕೆಂಬ ಮನವಿಯನ್ನು ಎಕ್ಸಿಕ್ಯೂಟಿವ್ ಇಂಜಿನಿಯರ್‌ಗೆ ಕೊಟ್ಟಿರುತ್ತಾರೆ. ತಕ್ಷಣ ಸರಿಯಾದ ವ್ಯವಸ್ಥೆಯಾಗದಿದ್ದಲ್ಲಿ ಉಗ್ರವಾದ ಪ್ರತಿಭಟನೆಯನ್ನು ಎದುರಿಸಬೇಕಾಗುತ್ತದೆ ಎಂಬ ಎಚ್ಚರಿಕೆಯನ್ನು ನೀಡಲಾಯಿತು. ಪ್ರಾಂತ ರೈತಸಂಘದ ಜಿಲ್ಲಾಕಾರ್ಯದರ್ಶಿ ಯು.ಬಸವರಾಜ್ ಹಾಗೂ ಉಪಾಧ್ಯಕ್ಷರಾದ ಬಸವನಗೌಡ ಇವರು ನೇತೃತ್ವವಹಿಸಿದ್ದರು.

ಮಹಿಳಾ ಸಂಘಟನೆಯ ಕಲಬುರ್ಗಿ ಜಿಲ್ಲಾ ಸಮ್ಮೇಳನ

ಅಖಿಲಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಕಲಬುರ್ಗಿ ಜಿಲ್ಲಾಘಟಕದ ಸಮ್ಮೇಳನವು ಆಗಸ್ಟ್ 26ರಂದು ಜಿಲ್ಲೆಯ ಟೌನ್‌ಹಾಲ್‌ನಲ್ಲಿ ಜರುಗಲಿದೆ. ಈ ಸಮ್ಮೇಳನದಲ್ಲಿ ಮಹಿಳೆಯರು ಎದುರಿಸುತ್ತಿರುವ ಹಲವಾರು ಸಮಸ್ಯೆಗಳ ಬಗ್ಗೆ ತೀರ್ಮಾನಗಳನ್ನು ತೆಗೆದುಕೊಳ್ಳಲಾಗುವುದುದೆಂದು ತಿಳಿಸಲಾಗಿದೆ.

ಈ ಸಮ್ಮೇಳನದ ಯಶಸ್ವಿಯಾಗಿ ಈ ಕೆಳಕಂಡ ಸ್ವಾಗತ ಸಮಿತಿಯನ್ನು ರಚಿಸಲಾಗಿದೆ. ಅಧ್ಯಕ್ಷೆಯಾಗಿ, ಶ್ರೀಮತಿ ಶೋಭಾ ಆರ್. ಬಾಗೋಡಿ, ಕಾರ್ಯಾಧ್ಯಕ್ಷೆಯಾಗಿ ಶ್ರೀಮತಿ ಬಿ.ಜಿ. ಹಿರೇಮಠ, ಉಪಾಧ್ಯಕ್ಷೆಯರುಗಳಾಗಿ, ಡಾ।ಶಕುಂತಲಾ ಬನಾಳೆ, ಶ್ರೀಮತಿ ಸುಭದ್ರಾ ಜಂಗಮ ಶೆಟ್ಟಿ, ಶ್ರೀಮತಿ ಪಾರ್ವತಿ ಪುರಾಣಿಕ, ಸುರೇಖಾ ಅರವಿಂದಪ್ರಭಾ, ಝೂನ್ಸಿರಾಣಿ, ವಕೀಲರು, ಸರಸ್ವತಿ ಚಿಮ್ಮಣಗಿ, ಕಾರ್ಯದರ್ಶಿಯಾಗಿ, ಮಹಾದೇವಿ ಎಂ.ಸಜ್ಜನ್,ಖಜಾಂಚಿಯಾಗಿ ಮೆಹಮುದಾಬೇಗಂ,ಸಂಘಟನಾ ಕಾರ್ಯದರ್ಶಿಯಾಗಿ ಶ್ರೀಮತಿ ಶೀಲಾತಿವಾರಿ, ಜಂಟಿ ಕಾರ್ಯದರ್ಶಿಯಾಗಿ ಗಂಗೂಬಾಯಿ, ಗೋದವಾರಿ ಹಡಗಿ, ಸಲಹೆಗಾರರಾಗಿ, ಸರಿತಾ ಕುಸುಮಾಕರ್ ದೇಸಾಯಿ, ಹಾಗೂ ಸದಸ್ಯರಾಗಿ, ಶ್ರೀಮತಿ ವಂದನಾ ದೇಸಾಯಿ, ನುಸರತ, ಗಾಯಿ, ಚೇತನಾ ಆರ್.ಗಂಟಿ, ಎಂ..ಸಿ. ಹಾವಾ, ಶಕುಂತಲಾ ಪಾಟೀಲ, ಪದ್ಮಿನಿ, ಜನಾಬಾಯಿ, ನಿರುಪಮಾ ಜೈ ಶ್ರೀ ಶಿಂಧೆ, ರುಕ್ಮಿಣಿ. ಇವರುಗಳನ್ನು ಆಯ್ಕೆ ಮಾಡಲಾಗಿದೆ.

ನಿಮ್ಮ ಪ್ರಶ್ನೆ – ನಮ್ಮ ಉತ್ತರ

? ನಮ್ಮ ದೇಶದಲ್ಲಿ ತ್ರಿಭಾಷಾ ಸೂತ್ರ ಯಾವ ಆಧಾರದ ಮೇಲೆ ಜಾರಿಗೊಳಿಸಲಾಯಿತು ಮತ್ತು ಅದು ನಮ್ಮ ದೇಶದಲ್ಲಿ ಯಾವ ಪರಿಣಾಮ ಬೀರಿದೆ?

ಸುಭಾಷ್‌ಚಂದ್ರ, ಗುಲ್ಬರ್ಗಾ

★ ತ್ರಿಭಾಷಾ ಸೂತ್ರ ನಮ್ಮ ದೇಶದ ಭಾಷಾ ದೇಸಿಜನಾಂಗದಿಂದ ಹುಟ್ಟಿದ್ದು. ತ್ರಿಭಾಷಾ ಸೂತ್ರದ ಪ್ರಕಾರ ಒಬ್ಬ ಶಾಲಾ ವಿದ್ಯಾರ್ಥಿ ತನ್ನ ರಾಜ್ಯದ ಭಾಷೆಯಲ್ಲದೆ "ರಾಷ್ಟ್ರ ಭಾಷೆ ಹಿಂದೀ "ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಭಾಷೆ ಇಂಗ್ಲೀಷ್‌ನ್ನು ಕಡ್ಡಾಯವಾಗಿ ಕಲಿಯಬೇಕು. ಇದು ಅತ್ಯಂತ ಅವೈಜ್ಞಾನಿಕ ಸೂತ್ರ. ಶೈಕ್ಷಣಿಕ ವಿಜ್ಞಾನ, ಮಾನಸಶಾಸ್ತ್ರದ ಪ್ರಾಥಮಿಕ ಪರಿಕಲ್ಪನೆಗಳ ಪ್ರಕಾರ ಯಾವುದೇ ಮಗು ಕಲಿಯಬೇಕಾದ್ದು ಅದರ ಮಾತೃಭಾಷೆಯಲ್ಲಿ, ಬೇರೆಯಾವುದೇ ಭಾಷೆಯಲ್ಲಿ ಕಲಿತರೂ ಮಗುವಿನ ಬೆಳವಣಿಗೆ ಕುಂಠಿತವಾಗುತ್ತದೆ.

ನಮ್ಮ ದೇಶದ ಆಳುವ ಬೂರ್ಜ್ವಾ ವರ್ಗಕ್ಕೆ ಇಡೀ ದೇಶದಲ್ಲಿ ಒಂದು ಭಾಷೆ ಇದ್ದರೆ, ಇಡೀ ದೇಶದ ಮಾರುಕಟ್ಟೆ ನಿಯಂತ್ರಿಸಲು ಆಳಲು ಸುಲಭ. ಆದರೆ ದೇಶದ ನಿಜಸ್ಥಿತಿ ಆ ರೀತಿ ಇಲ್ಲದ್ದನ್ನು ಅದು ಗ್ರಹಿಸಿಲ್ಲ. ಇಂತಹ ಸ್ಥಿತಿಯನ್ನು ಬಲಪ್ರಯೋಗದಿಂದ ಸಾಧ್ಯವಾಗಿಸುವುದು ಅದರ ಕನಸು. ಇದೇ 'ರಾಷ್ಟ್ರಭಾಷೆ'ಯಾಗಿ ಹಿಂದಿಯನ್ನು ಎಲ್ಲದರ ಮೇಲೆ ಹೇರುವ ರಾಜಕೀಯದ ಹಿಂದಿರುವ ಧೋರಣೆ. ನಮ್ಮ ದೇಶ ಬಹು ಭಾಷಾ ದೇಸಿ ಜನಾಂಗಗಳು (ಹೆಚ್ಚು ಕಡಿಮೆ ಒಂದೇ ಮಟ್ಟಕ್ಕೆ ಬೆಳೆದಿರುವ) ಇರುವ ದೇಶ. ಇವೆಲ್ಲವೂ 'ರಾಷ್ಟ್ರಭಾಷೆ'ಗಳೇ ಎಂಬ ನಿಜಸ್ಥಿತಿಯನ್ನು ಒಪ್ಪಲು ಅದು ತಯಾರಿಲ್ಲ. ಆದರೆ ಈ 'ರಾಜ್ಯ' ಅಥವಾ 'ಪ್ರಾದೇಶಿಕ' ಭಾಷೆಗಳನ್ನು ಪೂರ್ತಿಯಾಗಿ ನಿರಾಕರಿಸುವುದು ಅದಕ್ಕೆ ಸಾಧ್ಯವಾಗಿಲ್ಲ. ಇದು ಸ್ವಾತಂತ್ರ್ಯವಾದ ಕೆಲವೇ ವರ್ಷಗಳಲ್ಲಿ ಸಿದ್ಧವಾಯಿತು. ಭಾಷಾ ಆಧಾರದ ಮೇಲೆ ಪ್ರಾಂತ್ಯಗಳನ್ನು ರಚಿಸಲೂ ಆಳುವ ವರ್ಗ ಹಿಂದೇಟು ಹೊಡೆದಿತ್ತು. ಅತ್ಯಂತ ಪ್ರಬಲವಾದ ಪ್ರಜಾಸತ್ತಾತ್ಮಕ ಚಳುವಳಿಯ ಒತ್ತಾಯದ ಮೇರೆಗೆ ಅದು ಭಾಷಾವಾರು ಪ್ರಾಂತ್ಯಗಳನ್ನು ರಚಿಸಿದ್ದು. ಆದರೂ ಜನರ ಮಾತೃಭಾಷೆಯಾದ ಈ 'ಪ್ರಾದೇಶಿಕ ಭಾಷೆ'ಗಳಿಗೆ ಶಿಕ್ಷಣದಲ್ಲಿ ಆಡಳಿತದಲ್ಲಿ ಪ್ರಥಮ ಸ್ಥಾನವನ್ನು ಕೊಡಲೇ ಇಲ್ಲ. ಎಲ್ಲಾ ಭಾರತೀಯ ಭಾಷೆಗಳ ಸಮಾನತೆಯನ್ನೂ ಜಾರಿಗೆ ತರಲಿಲ್ಲ. ಹಿಂದಿಯನ್ನು 'ರಾಷ್ಟ್ರ ಭಾಷೆ' 'ಸಂಪರ್ಕಭಾಷೆ'ಯನ್ನು ಮಾಡುವ ಭರದಲ್ಲಿ ಅದಕ್ಕೆ ಉಳಿದ ಭಾಷೆಗಳಿಗಿಂತ ಎತ್ತರದ ಸ್ಥಾನ ಕೊಡಲಾಯಿತು. ಇದನ್ನು ಹಿಂದಿಯೇತರ ರಾಜ್ಯದ ಜನಗಳು ಒಪ್ಪಿಲ್ಲವಾದ್ದರಿಂದ ವಸಾಹತುಶಾಹಿ ಭಾಷೆ ಇಂಗ್ಲೀಷ್‌ನ್ನು ಕೇಂದ್ರದಲ್ಲಿ ಆಡಳಿತ ಬಾಷೆಯಾಗಿ, ಸಂಪರ್ಕ ಭಾಷೆಯಾಗಿ ಮುಂದುವರಿಸಲಾಯಿತು. ಇಂಗ್ಲೀಷ್ ಈಗ ಎಲ್ಲಾ ಭಾರತೀಯ ಭಾಷೆಗಳನ್ನು ತುಳಿದು ಪೂರ್ಣ ಅಧಿಪತ್ಯ ಸಾಧಿಸಲು ಅವಕಾಶವಾಗಿದೆ. ಇದರಿಂದಾಗಿ ಶಾಲೆಗೆ ಹೋಗುವ ಮಗುವಿನ ಗಂಟಲೊಳಗೆ 'ತ್ರಿಭಾಷಾ ಸೂತ್ರ'ವನ್ನು ತುರುಕಲಾಯಿತು. ಈ ಸೂತ್ರಕ್ಕೂ ಆಳುವ ವರ್ಗಗಳ ದೃಷ್ಟಿಕೋಣಕ್ಕೂ ನೇರ ಸಂಬಂಧವಿದೆ. ಅದರ ಅತಿ ಕೇಂದ್ರೀಕೃತ ಆರ್ಥಿಕ ವ್ಯವಸ್ಥೆಗೂ ಇದಕ್ಕೂ ಸಂಬಂಧವಿದೆ.

ಈ ಸೂತ್ರದಿಂದಾಗಿ ಮಕ್ಕಳ ಶಿಕ್ಷಣ ಕುಂಠಿತವಾಗುತ್ತಿದೆ. ಶಿಕ್ಷಣದ, ಭಾಷೆಯ ಹಿಡಿತ ಮುಂದುವರಿಯುತ್ತಿರುವುದು. ನಿಜವಾದ ಸಮಾನತೆಯಿಲ್ಲದೆ ಅಂತರ-ರಾಜ್ಯ ಕಲಹಗಳು. ರಾಜ್ಯದೊಳಗೆ ಅಲ್ಪ ಸಂಖ್ಯಾತ ಭಾಷೆಗಳಿಗೆ ಸರಿಯಾದ ಸ್ಥಾನಮಾನದ ಅಭಾವ ಇವೆಲ್ಲಾ ಈ ಸೂತ್ರದ ಕಹಿ ಫಲಗಳು.

ನಮ್ಮ ಪಕ್ಷದ, ಪ್ರಜಾಸತ್ತಾತ್ಮಕ ವಿದ್ಯಾರ್ಥಿ ಚಳುವಳಿಯ ಏಕಭಾಷಾ ಸೂತ್ರ, ಪ್ರತಿಯೊಂದು ಮಗುವಿಗೂ ಅದು ಎಲ್ಲೇ ಇರಲಿ, ತನ್ನ ಮಾತೃಭಾಷೆಯಲ್ಲಿ ಎಲ್ಲಾ ಶಿಕ್ಷಣ ಪಡೆಯಲು ಬೇಕಾದ ಸವಲತ್ತು ಇರಬೇಕು. ಅಲ್ಲದೆ ಈ ಎಲ್ಲಾ ವಿಷಯಗಳನ್ನು ಮಾತೃಭಾಷಾ ಮಾಧ್ಯಮದಲ್ಲಿ ಕಲಿಯುವುದು ಸಾಧ್ಯವಾಗಬೇಕು. ಉಳಿದ ಯಾವುದೇ ಒಂದು ಭಾಷೆ ಕಲಿಯುವುದು ವಿದ್ಯಾರ್ಥಿಗೆ ಬಿಡಬೇಕು. ಇದು ಒಂದು ರಾಜ್ಯದ ಬಹುಸಂಖ್ಯಾತ ಭಾಷಿಕರಿಗೂ, ಅಲ್ಪ ಸಂಖ್ಯಾತರಿಗೂ ತಮ್ಮ ಮಾತೃಭಾಷೆಯಲ್ಲಿ ಶಿಕ್ಷಣ ಪಡೆಯಲು ಸವಲತ್ತು ಇರಬೇಕು. ರಾಜ್ಯದ, ಕೇಂದ್ರದ ಆಡಳಿತ ಎಲ್ಲಾ ಪ್ರಮುಖ ಭಾಷೆಗಳಲ್ಲಿ ನಡೆಯಬೇಕು. ಸಂಪರ್ಕ ಭಾಷೆ ಯಾವುದು? ಹೇಗೆ? ಎನ್ನುವುದು ಈ ಮೇಲಿನ ನೀತಿ ಅನುಸರಿಸಿದರೆ ತನ್ನಿಂದ ತಾನೇ ಹುಟ್ಟಿಕೊಳ್ಳುತ್ತದೆ. ಅದು ಬಹುಶಃ ಹಿಂದಿಯೇ ಇರಬಹುದು. ಆದರೆ ಅದರ ಬಗ್ಗೆ ಬಲವಂತ ಸಲ್ಲ. 'ಸಂಪರ್ಕ ಭಾಷೆ' ಕಾನೂನು ಪ್ರಕಾರ ನಿರ್ಧರಿಸುವ ವಿಷಯ ಅಲ್ಲ. ಜನತೆ ಮಾಡಿಕೊಳ್ಳುವ ವ್ಯವಸ್ಥೆ.

? ಪೂರ್ವ ಯುರೋಪಿನ ಸಮಾಜವಾದಿ ರಾಷ್ಟ್ರಗಳ ಹಿನ್ನಡೆಯಲ್ಲಿ ಕರ್ನಾಟಕ ಸಮಾಜವಾದಿ ಚಿಂತಕರಿಗೆ ಮತ್ತು ಪ್ರಗತಿಪರ ಪ್ರಜಾಸತ್ತಾತ್ಮಕ ಸಾಮೂಹಿಕ ಸಂಘಟನೆಗಳಿಗೆ ಐಕ್ಯರಂಗದ ಪ್ರತಿಕ್ರಿಯೆ ಏನು?

-ರಾಜಕುಮಾರ್ ಎಸ್. ಮಂಗಳೂರು

★ ಈ ಬಗ್ಗೆ ಕೇಂದ್ರ ಸಮಿತಿ ಮಾಡಿದ ವಿಶ್ಲೇಷಣೆ, ತೆಗೆದುಕೊಂಡ ಧೋರಣೆ ಪುಸ್ತಿಕೆರೂಪದಲ್ಲಿ ಐಕ್ಯರಂಗದಲ್ಲಿ ಪ್ರಕಟವಾಗಿದೆ. ಇದರ ಅಧ್ಯಯನ ಮಾಡಿದರೆ ಪೂರ್ವಯುರೋಪಿನ ಬೆಳವಣಿಗೆ ಬಗ್ಗೆ ಸಮಗ್ರಚಿತ್ರಣಸಿಗುತ್ತದೆ. ಆದರೂ ಈ ಪ್ರಶ್ನೆಗೆ ಸ್ವಲ್ಪದರಲ್ಲೇ ನೇರ ಉತ್ತರ ಕೊಡಬೇಕಾದರೆ, ನಮ್ಮ ಜನರ ಆಶೋತ್ತರಗಳನ್ನು ಈಡೇರಿಸಲು ಸಮಾಜವಾದಿ ಸಮಾಜ ಕಟ್ಟುವ ಅವಶ್ಯಕತೆ ಬಗ್ಗೆ, ಸಮಾಜವಾದಿ ವ್ಯವಸ್ಥೆಯಲ್ಲೇ-ನಂಬಿಕೆ ಕಳೆದುಕೊಳ್ಳುವಂತಹದು ಏನೂ ಆಗಿಲ್ಲ. ಸಮಾಜವಾದವನ್ನು ಕಟ್ಟುವಲ್ಲಿ, ಪೂರ್ವಯುರೋಪಿನ ಆಳುವ ಕಮ್ಯೂನಿಸ್ಟ್ ಪಕ್ಷಗಳು ಮತ್ತು ಅದರ ಸಾಮೂಹಿಕ ಸಂಘಟನೆಗಳು ಮಾಡಿರುವ ಗಂಭೀರ ಸ್ವರೂಪದ ತಪ್ಪುಗಳಿಂದ ನಾವು ಪಾಠ ಕಲಿಯಬೇಕಾಗಿದೆ. ಇಂತಹ ತಪ್ಪುಗಳು ನಮ್ಮ ದೈನಂದಿನ ಕೆಲಸದಲ್ಲಿ, ಸಂಘಟನಾಸ್ವರೂಪದಲ್ಲಿ ಆಗದಂತೆ ಜಾಗ್ರತೆ ವಹಿಸಬೇಕು. ಜನಸಮೂಹದೊಂದಿಗೆ ಸಂಪರ್ಕ, ಸಂವಹನ ಕಾಪಾಡಿಕೊಳ್ಳುವುದು (ಎಲ್ಲಾ ಸಂದರ್ಭಗಳಲ್ಲಿ, [illegible]), ಅವರ ಆಶೋತ್ತರಗಳಿಗೆ ಸ್ಪಂದಿಸುವುದು, ಸಾಮೂಹಿಕ ಸಂಘಟನೆಗಳನ್ನು ನಡೆಸುವಲ್ಲಿ [illegible] ಚಾಚೂ ತಪ್ಪದೆ [illegible] ಯುವ [illegible] ವಿರುದ್ಧ [illegible] ಇವುಗಳಲ್ಲಿ ಮುಖ್ಯವಾದವು.

ಜನ- ವಿರೋಧಿ, ದೇಶ ವಿರೋಧಿ ಕೈಗಾರಿಕಾ ಧೋರಣೆ ಹೇಳಿಕೆ

ರಾಷ್ಟ್ರೀಯ ರಂಗದ ಆರ್ಥಿಕ ಧೋರಣೆ ಎತ್ತ ಸಾಗಿದೆ?

1990-91 ರ ರಾಷ್ಟ್ರೀಯ ರಂಗ ಬಜೆಟ್ ಕಾಂಗ್ರೆಸ್ಸಿನ ಸಿರಿವಂತರ - ಪರ ಹಣಬದುಬ್ಬರದ ಹಾದಿಯಲ್ಲೇ ಸಾಗಿದ್ದ ಬಜೆಟಾಗಿತ್ತು. ಅದು ಜನಸಾಮಾನ್ಯರ ಮೇಲೆ ಕಾಂಗ್ರೆಸ್ ಮಾದರಿಯಲ್ಲೇ ವಿಪರೀತ ಹೊರೆ ಹಾಕಿ ವಿಪರೀತ ಬೆಲೆಯೇರಿಕೆಗೆ ಕಾರಣವಾಗುತ್ತದೆ ಎಂದು ಎಡಪಕ್ಷಗಳು ತಕ್ಷಣ ನೀಡಿದ ಎಚ್ಚರಿಕೆ ಈಗ ನಿಜವಾಗಿದೆ. ಬೆಲೆ ಗಗನದತ್ತ ಧಾವಿಸುತ್ತಿದೆ. ಖಾದ್ಯ ತೈಲಗಳ ಬೆಲೆ ಸಾಮಾನ್ಯನಿಗೆ ಎಟುಕದಂತಾಗಿದೆ. ಚಹಾ ಬೇಳೆಗಳು, ಸಕ್ಕರೆ, ತರಕಾರಿ, ಸಿಮೆಂಟು ಎಲ್ಲವುಗಳ ಬೆಲೆಗಳೂ ಏರುತ್ತಲೇ ಸಾಗಿವೆ ಅಡೆತಡೆಯಿಲ್ಲದೆ. ಸರಕಾರವೂ ಇದನ್ನು ಒಪ್ಪಿ ಕೊಂಡಿದೆ. ಬೆಲೆಯೇರಿಕೆ ತಡೆಯಲು ಕ್ರಮ ಕೈಗೊಳ್ಳುವುದಾಗಿ ಹೇಳುತ್ತಲೇ ಇದ್ದರೂ ಅತ್ತ ಬೆಲೆಗಳು ಏರುತ್ತಲೇ ಇವೆ. ಆದರೆ ಸರಕಾರ ತನ್ನ ಆರ್ಥಿಕ ಧೋರಣೆಯ ವಿಮರ್ಶೆ ನಡೆಸಿದೇಯೇ? ಇಲ್ಲ.

ನಿಜ . ಬಜೆಟ್ ಮಂಡಿಸಿದಾಗ ರಾಷ್ಟ್ರೀಯ ರಂಗ ಸರಕಾರ ಅಧಿಕಾರಕ್ಕೆ ಬಂದು ನೂರು ದಿನಗಳಷ್ಟೇ ಆಗಿತ್ತು. ಕಾಂಗ್ರೆಸ್ (ಐ) ಸಂಪೂರ್ಣ ಹದ ಗೆಡಿಸಿಟ್ಟ ಆರ್ಥಿಕಕ್ಕೆ, ಅದು ಜೀವ ತುಂಬ ಬೇಕಾಗಿತ್ತು. ಆದರೆ ಬಜೆಟ್‌ನ ತೆರಿಗೆ ಪ್ರಸ್ತಾವಗಳಾಗಲೀ, ಅದರ ಮೊದಲು ರೈಲು ಅಂಚೆದರಗಳ ಏರಿಕೆಯಾಗಲೀ ರಾಷ್ಟ್ರೀಯ ರಂಗ ಕಾಂಗ್ರೆಸ್ (ಐ) ಗಿಂತ ಭಿನ್ನ ಆರ್ಥಿಕ ಹಾದಿ ಹಿಡಿಯಬಹುದೆಂಬ ನಿರೀಕ್ಷೆ ಮೂಡಿಸುವಂತಿರಲಿಲ್ಲ. ಬದಲಿಗೆ ಅದೇ ಜನ- ವಿರೋಧಿ ದಾರಿಯಲ್ಲೇ, ಗುತ್ತೇದಾರಿ - ಪರ, ಸಿರಿವಂತ-ಪರ ದಾರಿಯಲ್ಲೇ ಸಾಗಬಹುದುದೇನೋ ಎಂಬ ಭಯ ಮೂಡಿಸಿತ್ತು.

ಮೇ 31 ರಂದು ಸಂಸತ್ತಿನ ಹಿಂದಿನ ಅಧಿವೇಶನದ ಕೊನೆಯ ದಿನದಂದು ಅವಸರದಲ್ಲಿ ಕೈಗಾರಿಕಾ ಮಂತ್ರಿ ಅಜಿತ್ ಸಿಂಗ್‌ರು ಮಂಡಿಸಿದ, ಕೇಂದ್ರ ಮಂತ್ರಿ - ಮಂಡಳ ಅನುಮೋದಿಸಿದ ಕೈಗಾರಿಕಾ ಧೋರಣೆ ಹೇಳಿಕೆ ಈ ಭಯವನ್ನು ನಿಜಗೊಳಿಸಿದೆ. ಸರಕಾರ ಸ್ವಾವಲಂಬನೆಗಾಗಿ, ಉದ್ಯೋಗಾವಕಾಶ ನಿರ್ಮಿಸುವತ್ತ ಹೋರಾಡುತ್ತದೆ ಎಂಬ ನಿರೀಕ್ಷೆಯನ್ನು, ಸಂಪೂರ್ಣ ಹುಸಿಗೊಳಿಸುತ್ತದೆ ಎಂದು ಪ್ರಖ್ಯಾತ ಅರ್ಥ ಶಾಸ್ತ್ರಜ್ಞರೇ ಅಭಿಪ್ರಾಯ ಪಟ್ಟಿದ್ದಾರೆ.

ವಾಸ್ತವವಾಗಿ ಈ ಹೊಸ ಕೈಗಾರಿಕಾ ಧೋರಣೆ ರಾಷ್ಟ್ರೀಯ ಚುನಾವಣಾ ಘೋಷಣೆಗೆ ತದ್ವಿರುದ್ಧವಾದದ್ದು. ಅದರ ಚುನಾವಣಾ ಘೋಷಣೆ ಕಾಂಗ್ರೆ ಆಡಳಿತದಲ್ಲಿ ಸಾರ್ವಜನಿಕ ವಲಯದ ಪ್ರಮುಖ ಪಾತ್ರ ಕಮ್ಮಿಯಾಗುತ್ತಾ ಬಂದ ಬಗ್ಗೆ ಮೌನವಾಗಿದ್ದರೂ ಕೆಲವು ಜನಸಾಮಾನ್ಯರ ಹೊರೆ ಕಡಿಮೆ ಮಾಡಬಹುದಾದ ಭರವಸೆ ಕೊಟ್ಟಿತ್ತು - (1) ಉದ್ಯೋಗಾವಕಾಶ ನಿರ್ಮಿಸುವಂತಹ ಉತ್ಪಾದನಾ ವಲಯಕ್ಕೆ ಹೆಚ್ಚು ಬಿತ್ತು. ಕೃಷಿ-ಆಧಾರಿತ ಗ್ರಾಮೀಣ ಉದ್ದಿಮೆಗಳ ವಿಸ್ತರಣೆ (2) ಜನಸಾಮಾನ್ಯರ ಬಳಕೆಯ ವಸ್ತುಗಳನ್ನು ಉತ್ಪಾದಿಸುವ ಸಣ್ಣ ಪ್ರಮಾಣದ ಮತ್ತು ಗುಡಿಕೈಗಾರಿಕೆಗಳಿಗೆ ವ್ಯಾಪಕ ರಕ್ಷಣೆ (3) ಸಾರ್ವಜನಿಕ ವಲಯಕ್ಕೆ ಪ್ರಮುಖ ಸ್ಥಾನ - ವಿಪರೀತ ಅಧಿಕಾರಶಾಹಿಯಿಂದ ಮುಕ್ತಿ.

(4) ದೇಶದ ಆರ್ಥಿಕದಲ್ಲಿ ಬಹು ರಾಷ್ಟ್ರೀಯ ಸಂಸ್ಥೆಗಳ ಪ್ರವೇಶಕ್ಕೆ ಕಡಿತ, ವಿದೇಶಿ ಬಂಡವಾಳಕ್ಕೆ ತಲೆಬಾಗುವ ನೀತಿಗಳನ್ನು ಕೈಬಿಡುವುದು.

(5) ಸ್ವಾವಲಂಬನೆಯಲ್ಲಿ ಹೆಚ್ಚಳ - ಬಂಡವಾಳಸರಕುಗಳ ಆಮದಿನ ಮೇಲೆ ಸ್ವದೇಶೀಕರಕ್ಕೆ ವಾಪಕ ಪ್ರಯತ್ನ.

ಇದು ರಾಷ್ಟ್ರೀಯ ರಂಗವೇ ಇತ್ತ ಭರವಸೆ. ಆದರೆ ಅದರ ಕೈಗಾರಿಕಾ ಧೋರಣೆ ಹೇಳಿಕೆ ಇವೆಲ್ಲವನ್ನೂ ಗಾಳಿಗೆ ತೂರಿದೆ. ಅಷ್ಟೇ ಅಲ್ಲ. 'ದುಡಿಯುವ ಹಕ್ಕ''ನ್ನು ಕೊಡುವೆನ್ನುವ ಅದು ಈಗಲೂ ನೀಡುತ್ತಿರುವ ಭರವಸೆಯನ್ನು ಹಾಸ್ಯಸ್ಪದಗೊಳಿಸಿದೆ. ಎರಡನೇ ಯೋಜನೆಯ ಮೂಲ ಆಧಾರವನ್ನೇ ಬುಡಮೇಲು ಮಾಡಿದೆ.

ಹೊಸ ಧೋರಣೆ ಏನು ಹೇಳುತ್ತದೆ?

★ ಸಣ್ಣ ಪ್ರಮಾಣದ ಉದ್ದಿಮೆ ವಲಯದಲ್ಲಿ ಬಂಡವಾಳದ ಮಿತಿಯನ್ನು60 ಲಕ್ಷ ರೂ.ಗಳಿಗೆ ಸಹಾಯಕ ಘಟಕಗಳಲ್ಲಿ 70ಲಕ್ಷ ರೂಗಳಿಗೆ ಏರಿಸಲಾಗಿದೆ. 7ನೇ ಯೋಜನೆಯಲ್ಲಿ ಕಾಂಗ್ರೆ ಸರಕಾರ ಈ ಮಿತಿಯನ್ನು 20 ಲಕ್ಷದಿಂದ 35 ಲಕ್ಷ ರೂಗೆ ಏರಿಸಿತ್ತು. -ದೊಡ್ಡ ಬಂಡವಾಳಿಗರು ಈ ರಂಗದಲ್ಲಿ ಹಣ ತೊಡಗಿಸಲಿ ಎಂದು ಈಗ ಆ ಮಿತಿಯನ್ನು ದ್ವಿಗುಣಗೊಳಿಸಿ ಸಣ್ಣ ಪ್ರಮಾಣದ ವಲಯವನ್ನು ಗುತ್ತೇದಾರಿಗಳಿಗೆ, ಬಹುರಾಷ್ಟ್ರೀಯ ಕಂಪೆನಿಗಳಿಗೆ ಧಾರೆಯೆರೆದು ಕೊಟ್ಟಂತಾಗಿದೆ. ಸಣ್ಣ ಪ್ರಮಾಣದ ವಲಯವನ್ನು ರಚಿಸಿದ್ದು ಅದಕ್ಕೆ ರಕ್ಷಣೆ ಕೊಡಬೇಕು ಎಂಬ ಮಾತು ಬಂದದ್ದು ದೊಡ್ಡ ಬಂಡವಾಳಿಗರು ಅವನ್ನು ನುಂಗಿ ಹಾಕುತ್ತಾರೆ, ಆ ವಲಯದಲ್ಲಿ ಅದರಿಂದ ಉದ್ಯೋಗಾವಕಾಶ ಕಡಿತವುಂಟಾಗುವುದನ್ನು ತಪ್ಪಿಸಲಿಕ್ಕೆ ಎಂಬ ಕಾರಣದಿಂದ ಈಗ ಈ ಮೂಲಭೂತ ಅಂಶವನ್ನೇ ನಿರ್ಲಕ್ಷಿಸಲಾಗಿದೆ.

ವಾಸ್ತವವಾಗಿ ಈ ಮಿತಿ ಏರಿಸುವ ಅಗತ್ಯವೇ ಇರಲಿಲ್ಲ. ಏಕೆಂದರೆ ಸಣ್ಣ ಪ್ರಮಾಣದ ಉದ್ದಿಮೆಗಳ ಸಂಘದ ಅಧ್ಯಕ್ಷರೇ ಹೇಳಿರುವಂತೆ 95% ಸಣ್ಣ ಉದ್ದಿಮೆಗಳಲ್ಲಿ ಬಂಡವಾಳದ ಪ್ರಮಾಣ 5 ಲಕ್ಷ ರೂಅನ್ನು ದಾಟುವುದಿಲ್ಲ. ಅಂದರೆ ಈ ಮಿತಿಯನ್ನು 35 ಲಕ್ಷದಿಂದ 60 ಲಕ್ಷಕ್ಕೆ ಏರಿಸಿದ್ದು ಯಾರ ಪ್ರೀತ್ಯರ್ಥ

★ ಎರಡನೆಯದಾಗಿ, ಬಂಡವಾಳ ವಿನಿಯೋಗದ ಮೇಲೆ ಇದ್ದ ಮಿತಿಗಳನ್ನೆಲ್ಲಾ ಸುಮಾರಾಗಿ ತೆಗೆದುಬಿಟ್ಟು, ಬಂಡವಾಳ ಹಾಗೂ ವಿದೇಶೀ ಬಂಡವಾಳ ಯಾವ ರಂಗದಲ್ಲೂ ಹೇಗೂ ಹರಿದುಬರಬಹುದು ಎಂದು ಮುಕ್ತ ಅವಕಾಶ ನಿರ್ಮಿಸಲಾಗಿದೆ - ಅಂದರೆ ದೇಶದ ಆರ್ಥಿಕವನ್ನು ತಮ್ಮ ಮುಷ್ಟಿಯಲ್ಲಿಡಲು ಖಾಸಗೀ ಬಂಡವಾಳಿಗರಿಗೆ ವಿದೇಶೀ ಗುತ್ತೇದಾರಿಗಳಿಗೆ ಸಂಪೂರ್ಣ ಸ್ವಾತಂತ್ರ.

> ಈ ಘೋಷಣೆ ಅಮೆರಿಕಾ ತನ್ನ ಸುಪರ್ 301 ಬೆದರಿಕೆಯನ್ನು ಸದ್ಯಕ್ಕೆ ಹಿಂತೆಗೆದುಕೊಂಡಿರುವ ಸಂದರ್ಭದಲ್ಲೇ ಬಂದಿರುವುದು ಆಕಸ್ಮಿಕವಲ್ಲ. ತಮ್ಮಲ್ಲಿ ಆದೇಶದಂತೆ ನಡೆಯುವ ಸೂಚನೆ ನೀಡಿರುವ ಸರಕಾರೀ ಘೋಷಣೆ ಬಂದಿರುವಾಗ ಸಾಮ್ರಾಜ್ಯಶಾಹಿಗಳಿಗೆ ಇನ್ನೇನು ಬೇಕು?

★ ಲೈಸನ್ಸ್ ಮಿತಿಯನ್ನು 1985 ರಲ್ಲಿ ಹಾಗೂ 1988 ರಲ್ಲಿ ರಾಜೀವ್ ಸರ್ಕಾರ ಏರಿಸಿದ ಮಟ್ಟಕ್ಕಿಂತಲೂ ಇನ್ನಷ್ಟು ಏರಿಸಿದೆ. ಹಿಂದುಳಿದ ಪ್ರದೇಶಗಳಲ್ಲಿ ಈ ಮಿತಿ 75 ಕೋಟಿಗೇರಿದ್ದರೆ, ಇತರ ಪ್ರದೇಶಗಳಲ್ಲಿ ಈ ಮಿತಿಯನ್ನು 15 ಕೋಟಿಯಿಂದ 25 ಕೋಟಿ ರೂಗೇರಿಸಿ ಸುಮಾರು 60% ಕೈಗಾರಿಕಾ ವಲಯ ಈಗ ಲೈಸೆನ್ಸಿಂಗ್ ವ್ಯವಸ್ಥೆಯಿಂದ ಅಂದರೆ ಸರ್ಕಾರದ ಹತೋಟಿಯಿಂದ ಮುಕ್ತವಾಗಿದೆ. ಅರ್ಥಾತ್ ಖಾಸಗೀ ಲಾಭಕ್ಕೆ ಮೀಸಲಾಗಿದೆ. ಸಾರ್ವಜನಿಕ ವಲಯಕ್ಕೆ ಮೀಸಲಿಟ್ಟಿದ್ದ ಇನ್ನಷ್ಟು ಉದ್ದಿಮೆಗಳನ್ನು ಖಾಸಗೀರಂಗಕ್ಕೆ ವಿದೇಶೀ ಗುತ್ತೇದಾರಿಗಳಿಗೆ ತೆರೆಯಲಾಗಿದೆ.

★ ಇಷ್ಟು ಸಾಲದೆಂಬಂತೆ ವಿದೇಶೀ ಬಂಡವಾಳಕ್ಕೆ ವಿಶೇಷ ರಿಯಾಯಿತಿಯನ್ನು ಈ ಹೊಸ ಹೇಳಿಕೆ ಘೋಷಿಸಿದೆ. 40% ದವರೆಗೆ ಅವರು ಇಕ್ವಿಟಿ ಹೊಂದಬಹುದು ಇದಲ್ಲದೆ ಉದ್ದಿಮೆಯ ಜಮೀನು ಮತ್ತು ಯಂತ್ರಗಳ ಮೌಲ್ಯದ 30% ದ ವರೆಗೆ ಆಮದು ಮಾಡಿಕೊಳ್ಳಲು ಮುಕ್ತ ಅವಕಾಶ. ವಿದ್ಯುತ್ ಉತ್ಪಾದನಾ ವಲಯದಲ್ಲಿ ವಿದೇಶೀ ತಂತ್ರಜ್ಞಾನದ ಆಯ್ಕೆಯ ಸ್ವಾತಂತ್ರವನ್ನೂ ಬಂಡವಾಳ ತೊಡಗಿಸುವವರಿಗೇ ಬಿಡಲಾಗಿದೆ. ಮೊದಲು ಸರಕಾರ ಇಂತಹ ತಂತ್ರಜ್ಞಾನದ ಆಮದಿನ ಶರತ್ತುಗಳಿಗೆ ಅನುಮತಿ ನೀಡಬೇಕಾಗಿತ್ತು. ಹೊಸ ಹೇಳಿಕೆ ಇದನ್ನು ತೆಗೆದುಹಾಕಿದೆ.

ಇದರ ಜೊತೆಗೇ ಆಮದು ಸುಂಕವನ್ನು 30% ದಷ್ಟು ಕಡಿತ ಮಾಡುವ ಸರಕಾರದ ಘೋಷಣೆ ವಾಸ್ತವಿಕವಾಗಿ ವಿಶ್ವಬ್ಯಾಂಕ್ ಮತ್ತು ಐ.ಎಂ.ಎಫ್. ಒತ್ತಾಯಗಳಿಗೆ ಸರಕಾರ ಮಣಿದಿರುವುದರ ಸಂಕೇತ. ಆದ್ದರಿಂದ ಈ ಹೊಸ ಹೇಳಿಕೆಯ ಘೋಷಣೆಯ ಸಂದರ್ಭದಲ್ಲೇ ಅಮೆರಿಕಾ ಸೂಪರ್ 301 ರ ಬೆದರಿಕೆಯನ್ನು ಸದ್ಯಕ್ಕೆ ಹಿಂತೆಗೆದು ಕೊಳ್ಳುವುದಾಗಿ ಹೇಳಿರುವುದನ್ನೂ ಗಮನಿಸಬೇಕು.

ವಿಶ್ವಬ್ಯಾಂಕ್, ಐ.ಎಂ.ಎಫ್. ನ ಒತ್ತಡಗಳಿಗೆ ಮಣಿಯುವುದಿಲ್ಲ, ಸುಪರ್ 301 ಕ್ಕೆ ಹೆದರುವುದಿಲ್ಲ ಎಂದೆಲ್ಲಾ ಮಾತಿನಲ್ಲಿ ಹೇಳಿದರೂ, ವಾಸ್ತವವಾಗಿ ಅದರಂತೆಯೇ ನಡೆದುಕೊಳ್ಳುವ ಭರವಸೆಯನ್ನೂ ಸಾಮ್ರಾಜ್ಯಶಾಹಿಗಳಿಗೆ ನೀಡುವ ಈ ಹೇಳಿಕೆ ಬಂದಿರುವಾಗ ಅಮೆರಿಕನ್ ಸಾಮ್ರಾಜ್ಯ ಶಾಹಿಗಳಿಗೆ ಇನ್ನೇನು ಬೇಕು?

ಇದು ಹೊಸ ಕೈಗಾರಿಕಾ ಘೋಷಣೆಯ ಸಾರಾಂಶ-ಸಣ್ಣ ಪ್ರಮಾಣದ ವಲಯಕ್ಕೆ ನುಗ್ಗಲು, ಸಾರ್ವಜನಿಕ ವಲಯ ಕಷ್ಟಪಟ್ಟು ಕಟ್ಟಿ ಬೆಳಿಸಿದ ಉದ್ದಿಮೆಗಳಿಗೆ ನುಗ್ಗಲು. ಮನ ಬಂದಂತೆ ವಿದೇಶೀ ತಂತ್ರಜ್ಞಾನ ಆಮದು ಮಾಡಲು ಖಾಸಗೀ ಬಂಡವಾಳಗಾರರಿಗೆ . ವಿದೇಶೀ ಗತ್ತೇದಾರಿಗಳಿಗೆ ಹೆಚ್ಚೆಚ್ಚು ಅವಕಾಶ.

ದೊಡ್ಡ ಖಾಸಗೀ ಬಂಡವಾಳಗಾರರಿಗೆ, ವಿದೇಶೀ ಗತ್ತೇದಾರಿಗಳಿಗೆ ಹೆಚ್ಚೆಚ್ಚು ಅವಕಾಶವೆಂದರೆ ಉಚ್ಚ ತಂತ್ರಜ್ಞಾನದ ಬಳಕೆಯ ಮೂಲಕ ಉದ್ಯೋಗಾವಕಾಶಗಳ ಕಡಿತ, ಕೇವಲ ಸಿರಿವಂತರ ಬಳಕೆಯ ವಸ್ತುಗಳ ಉತ್ಪಾದನೆ ಮತ್ತು ವಿದೇಶೀ ವಿನಿಮಯ ಕೊರತೆಯಲ್ಲಿ ತೀವ್ರ ಹೆಚ್ಚಳ.

ಇವು ಕೇವಲ ಕಲ್ಪನೆಯಲ್ಲ. ರಾಜೀವಗಾಂಧಿಯ ಉದಾರೀಕರಣದ ನೀತಿಯ ಅನುಭವ ಈಗಾಗಲೇ ದೇಶದ ಮುಂದಿದೆ. ವಿದೇಶೀ ತಂತ್ರಜ್ಞಾನ 'ಕ್ಕೊಳಗಾದ ಕಂಪನಿಗಳು ವಿದೇಶಿ ವಿನಿಮಯ ಮತ್ತಷ್ಟು ಇಳಿಯಲು ಕಾರಣವಾಗಿವೆ ಎಂದು ಸರಕಾರೀ ಅಂಕಿ ಅಂಶಗಳೇ ತಿಳಿಸುತ್ತವೆ. ರಿಝರ್ವ್ ಬ್ಯಾಂಕ್ ವರದಿ ಪ್ರಕಾರ ವಿದೇಶೀ ಸರಕಾರದ ಉದ್ದಿಮೆಗಳಲ್ಲಿನ ತಂತ್ರಜ್ಞಾನ ವರ್ಗಾವಣೆ ದೇಶದ ಆರ್ಥಿಕಕ್ಕೆ ತೊಂದರೆಯುಂಟುಮಾಡಿದೆ.

ಇನ್ನು ಉದ್ಯೋಗಾವಕಾಶ? ಖಾಸಗೀ ಬಂಡವಾಳ ಕ್ಷೇತ್ರದಲ್ಲಿ ಉದ್ಯೋಗಾವಕಾಶದ ಸೃಷ್ಟಿ ಅತ್ಯಂತ ಕಡಿಮೆ. ರಾಜೀವಗಾಂಧಿಯವರ ಉದಾರೀಕರಣದ ಅವಧಿಯಲ್ಲಿ ಕೂಡಾ ಅದು ಹೆಚ್ಚುವ ಬದಲು ಕಡಿಮೆಯಾಯಿತು. 1982 ರಲ್ಲಿ ಆ ವಲಯದಲ್ಲಿ 75.52 ಲಕ್ಷ ಉದ್ಯೋಗಾವಕಾಶವಿದ್ದದ್ದು 1987 ರಲ್ಲಿ

ಪುಟ 8 ಕ್ಕೆ

> ಸಣ್ಣ ಪ್ರಮಾಣದ ಉದ್ದಿಮೆಗಳಿಗೆ ರಕ್ಷಣೆ, ಸಾರ್ವಜನಿಕ ವಲಯಕ್ಕೆ ಪ್ರಾಧಾನ ಉದ್ಯೋಗಾವಕಾಶ ಸೃಷ್ಟಿಸುವ, ಜನಸಾಮಾನ್ಯರ ಬಳಕೆಯ ಸರಕುಗಳನ್ನು ಉತ್ಪಾದಿಸುವ ಉದ್ದಿಮೆಗಳಿಗೆ ಆದ್ಯತೆ, ಸ್ವಾವಲಂಬನೆಗೆ ಆದ್ಯತೆ- ಇವೆಲ್ಲಾ ರಾಷ್ಟ್ರೀಯ ರಂಗದ ಚುನಾವಣಾ ಭರವಸೆಗಳು ರಾಷ್ಟ್ರೀಯ ರಂಗ ಸರಕಾರದ ಹೊಸ ಕೈಗಾರಿಕಾ ಧೋರಣೆ ಹೇಳಿಕೆ ಗಾಳಿಗೆ ತೂರಿರುವ ಭರವಸೆಗಳು!

ಸ್ವಾವಲಂಬನೆಯಿಂದ ದೂರ ಸಾಗಿ ಸಾಲದ ಬಲೆಯತ್ತ ನೇರ ನೆಗೆತ!

ಆರ್ಥಿಕ ತಜ್ಞರ ಅಭಿಪ್ರಾಯ

ಹೊಸ ಕೈಗಾರಿಕಾ ಧೋರಣೆ ಉದಾರೀಕರಣದ ದಿಕ್ಕಿನಲ್ಲಿ ಒಂದು ದೊಡ್ಡ ನೆಗೆತ. ಈ ಮೂಲಕ ಭಾರತದಂತಹ ದೇಶದಲ್ಲಿ ಯೋಜನಾ ಬದ್ಧ ಬೆಳವಣಿಗೆಯ ತರ್ಕವನ್ನು ಅದು ನಿರ್ಲಕ್ಷಿಸಿದೆ. ವಿದೇಶೀ ವಿನಿಮಯ ಕೊರತೆ ಹದಗೆಡಲು ಏನೂ ಮಾಡಿಲ್ಲ ಮತ್ತು ದೇಶವನ್ನು ನೇರವಾಗಿ ಸಾಲದ ಬಲೆಯತ್ತ ನೆಗೆಯುವಂತೆ ಮಾಡಿದೆ. ಕೊನೆಗೆ ಐ.ಎಂ.ಎಫ್. ವಿಶ್ವಬ್ಯಾಂಕಿಗೇ ಮೊರೆಹೋಗು ವಂತೆ ಮಾಡಿದೆ ಎಂದು ಹನ್ನೊಂದು ಪ್ರಖ್ಯಾತ ಆರ್ಥಿಕ ತಜ್ಞರು ನೀಡಿದ ಹೇಳಿಕೆಯಲ್ಲಿ ಅಭಿಪ್ರಾಯ ಪಟ್ಟಿದ್ದಾರೆ.

ಈ ಹೇಳಿಕೆ ನಮ್ಮ ಆರ್ಥಿಕ 'ದಲ್ಲಿರುವ ವಿಕೃತಿಗಳನ್ನೂ ಗಮನಕ್ಕೇ ತಗೊಂಡಿಲ್ಲ. 0.75 ಶೇಕಡಾ ವಿಭಾಗಕ್ಕಾಗಿ ಬಹುಪಾಲು ಸಣ್ಣ ಪ್ರಮಾಣದ ಉದ್ದಿಮೆಗಳನ್ನೂ ಮುಚ್ಚುವ ನೀತಿಯಿದು ಎಂದು ಅವರು ಟೀಕಿಸಿದ್ದಾರೆ.

ಉದಾರೀಕರಣ ನೀತಿ ಯಾರ ಹಿತಾಸಕ್ತಿ ಬೆಳಿಸಲು ಎಂದು ಈ ಆರ್ಥಿಕ ತಜ್ಞರು ಪ್ರಶ್ನಿಸಿದ್ದಾರೆ. ಅದಕ್ಕೆ ಉತ್ತರವನ್ನೂ ನೀಡಿದ್ದಾರೆ. ಸಣ್ಣ ಉದ್ದಿಮೆಗಳದ್ದೇ ಅಥವಾ ದೊಡ್ಡ ಉದ್ದಿಮೆಗಾರರದ್ದೇ?. ಭಾರತೀಯ ಉದ್ದಿಮೆಗಳದ್ದು ಅಥವ ಭಾರತೀಯಕತೆಯ ಟೋಪಿ ಹಾಕಿಕೊಂಡ ವಿದೇಶೀ ಕಂಪೆನಿಗಳದ್ದೇ? ಈ ಪ್ರಶ್ನೆಗಳಿಗೆ ಉತ್ತರ ಸ್ವಯಂವೇದ್ಯ. ಮೊದಲಿನ ಪ್ರಶ್ನೆಯಲ್ಲಿನ ದೊಡ್ಡ ಉದ್ದಿಮೆಗಾರರದ್ದು. ಎರಡನೇ ಪ್ರಶ್ನೆಯಲ್ಲಿನ ವಿದೇಶೀ ಕಂಪನಿಗಳದ್ದು!

ಹೊಸ ಧೋರಣೆಯ ಸಾರಾಂಶವೆಂದರೆ ಅದು ಯೋಜನಾ ಚೌಕಟ್ಟಿನ ಶಿಸ್ತಿನಿಂದ ಮುಕ್ತವಾದ ಉದಾರೀಕರಣದತ್ತ ಒತ್ತು ನೀಡಿರುವ, ಭಾರತೀಯ ಜನಸಾಮಾನ್ಯರ ಅಗತ್ಯಗಳನ್ನು ಪೂರೈಸುವ ಸ್ವಾವಲಂಬಿತ ಸಮಾಜವನ್ನು ಕಟ್ಟುವ ಯಾವುದೇ ವಿಚಾರದಿಂದ ದೂರ ಸಾಗುವ ವ್ಯವಸ್ಥೆಗೆ ಒತ್ತು ನೀಡಿರುವ ನೀತಿ. ಹೊಸ ಧೋರಣೆ ಕೆಲವೇ ಮುಂದುವರಿದ . ಕೈಗಾರೀಕೃತ ದೇಶಗಳ ಹಿಡಿತದಲ್ಲಿರುವ ಅಂತರಾಷ್ಟ್ರೀಯ ಆರ್ಥಿಕ ದ ಉಬ್ಬರ-ಇಳಿತಗಳಿಗೆ ಭಾರತದ ಮಾರುಕಟ್ಟೆಯನ್ನು ತೆರೆದಿದೆ ಎಂದು ಈ ಆರ್ಥಿಕ ತಜ್ಞರು ವಿಷಾದ ವ್ಯಕ್ತಪಡಿಸಿದ್ದಾರೆ.

> ಉದಾರೀಕರಣ ನೀತಿ ಯಾರ ಹಿತಾಸಕ್ತಿ ಬೆಳೆಸಲು? ಸಣ್ಣ ಉದ್ದಿಮೆಗಳದ್ದೇ ಅಥವಾ ದೊಡ್ಡ ಉದ್ದಿಮೆಗಳದ್ದೇ ಅಥವಾ ಭಾರತೀಯತೆಯ ಟೋಪಿ ಹಾಕಿಕೊಂಡ ವಿದೇಶೀ ಕಂಪೆನಿಗಳದ್ದೇ? ಈ ಪ್ರಶ್ನೆಗಳಿಗೆ ಉತ್ತರ ಸ್ವಯಂವೇದ್ಯ."

"ಇಲ್ಲಿರುವ ಪ್ರಶ್ನೆ-ಹತೋಟಿಯಲ್ಲಿರುವ ಆರ್ಥಿಕತೆ ಬೇಕೋ ಅಥವಾ ಉದಾರೀಕರಣ ಬೇಕೋ ಎಂಬುದಲ್ಲ. ನಮ್ಮ ಹೇಳಿಕೆಯ ಸಾರಾಂಶವಿಷ್ಟೇ- ಈ ಹೊಸ ಧೋರಣೆ ಕೆಲವಾರು ಪ್ರಶ್ನೆಗಳನ್ನು ನಿರ್ಲಕ್ಷಿಸಿದೆ. ಮತ್ತು ಈ ಧೋರಣೆಯ ವಿಚಾರಗಳು ಸರಿಯೆಂಬುದಕ್ಕೆ ಯಾವ ಪ್ರಾಯೋಗಿಕ ಸಾಕ್ಷಿಗಳು ಇಲ್ಲ. ಈಗ ಅಂತರಾಷ್ಟ್ರೀಯ ರಂಗದಲ್ಲಿ ಭಾರತದ ಹಿತಾಸಕ್ತಿಗಳಿಗೆ ಅನುಕೂಲವಾಗಿಯೂ ಇಲ್ಲ. ಇಂತಹ ಧೋರಣೆಗಳು ಭಾರತದ ಆರ್ಥಿಕತೆಗೆ ಎಂದೂ ಸರಿಪಡಿಸಲಾಗದ ಹಾನಿ ಉಂಟು ಮಾಡತ್ತವೆಯೆಂಬುದೇ ನಮ್ಮ ತೀವ್ರ ಭಯ" ಎಂದಿರುವುದೇ ಹೇಳಿಕೆಗೆ ಸಹಿ ಹಾಕಿರುವ ಆರ್ಥಿಕ ತಜ್ಞರು ಜವಹರಲಾಲ್ ನೆಹರೂ ವಿಶ್ವವಿದ್ಯಾಲಯದ ಆರ್ಥಿಕ ಅಧ್ಯಯನ ಮತ್ತು ಯೋಜನೆಯ ಕೇಂದ್ರದ ಪ್ರಾಧ್ಯಾಪಕರುಗಳಾದ ಆರ್.ಪಿ.ಸೆನ್‌ಗುಪ್ತಾ, ಜಿ.ಕೆ. ಚಂದಾ ಮತ್ತು ಜಿ.ಎಸ್. ಭಲ್ಲಾ, ಜಯಪುರದ ಅಭಿವೃದ್ಧಿ ಅಧ್ಯಯನ ಸಂಸ್ಥೆಯ ಪ್ರೊ.ಡಿ.ಡಿ. ನಗುಲಾ.

ಕರುಕ್ಷೇತ್ರ ವಿಶ್ವವಿದ್ಯಾಲಯದ ಪ್ರೊ. ಆರ್.ಪಿ. ಹೂದಾ ದೆಹಲಿಯ ಆರ್ಥಿಕ ತಜ್ಞ ಆರ್.ಸಿ.ದತ್, ನವದೆಹಲಿಯ ಆರ್ಥಿಕ ತಜ್ಞ ಆರ್.ಸಿ. ದತ್, ನವದೆಹಲಿಯ ಆರ್ಥಿಕ ಅಭಿವೃದ್ಧಿ ಅಧ್ಯಯನ ಸಂಸ್ಥೆಯ ಕೆ.ಎಸ್. ಚಲಪತಿ ರಾವ್ ಹಾಗೂ ಸಾರ್ವಜನಿಕ ಆಡಳಿತ ಸಂಸ್ಥೆಯ ಪ್ರೊ.ಎಸ್.ಕೆ. ಗೋಯಲ್.

ಒಂದು ಆದರ್ಶಕ್ಕಾಗಿ ದುಡಿಯುವ ಅವಕಾಶ ಬಂತು

ಪಿ. ರಾಮಚಂದ್ರರಾವ್.



ನಾನೊಬ್ಬ ಡಿಗ್ರೀಧರ. ಬಡ ಮಾಧ್ಯಮ ವರ್ಗದ ಒಬ್ಬ ಅಧ್ಯಾಪಕ ಕುಟುಂಬದಲ್ಲಿ ಹುಟ್ಟಿ. ಕಾರ್ಮಿಕರು ಹೆಚ್ಚಾಗಿದ್ದ ಊರಿನಲ್ಲಿ (ಮಂಗಳೂರು ನಗರದ ಉತ್ತರ - ಪಶ್ಚಿಮ ಭಾಗದಲ್ಲಿದ್ದ ಬೋಳೂರು ಎಂಬ ಗ್ರಾಮದಲ್ಲಿ) ಬೆಳೆದು ಬಂದವನು. ನನ್ನ ಅಣ್ಣಾ ವಾಯುದಳಕ್ಕೆ ಯುವ ಕಾಲದಲ್ಲಿ ಸೇರದಿರುತ್ತಿದ್ದರೆ ನನಗೆ 'ಡಿಗ್ರಿ' ಆಗುತ್ತಿತ್ತು ಎಂದು ಹೇಳಲು ಅಸಾಧ್ಯ. ಆಗ ಮಿಲಿಟರಿಗೆ ಸೇರಿದವರ ತಮ್ಮಂದಿರಿಗೆ ..."ಮುಕ್ತ ವಿದ್ಯಾಭ್ಯಾಸ" ದೊರೆಯುತ್ತಿತ್ತು. ಇಲ್ಲದಿದ್ದರೆ ನನ್ನ ವಿದ್ಯಾಭ್ಯಾಸ ಕೇವಲ ಎಸ್.ಎಸ್.ಎಲ್.ಸಿ.ಯಾಗಿರುತ್ತಿತ್ತು. ನಾನು ಎಸ್.ಎಸ್.ಎಲ್.ಸಿ ಕಲಿಯುತ್ತಿರುವಾಗಲೇ ನನ್ನ ತಂದೆ ನನಗೆ 'ಟೈಪಿಂಗ್' ಕಲಿಸಿದ್ದರು. ನಾನು ಟೈಪಿಂಗ್‌ನಲ್ಲಿ ಲೋವರ್ ಪರೀಕ್ಷೆ ಪಾಸಾಗಿದ್ದೆ.

ಇರಲಿ. ಕಾರ್ಮಿಕರು ಹೆಚ್ಚಾಗಿರುವ ಪ್ರದೇಶದಲ್ಲಿ ನಾನು ಹುಟ್ಟಿ ಬೆಳೆದುದರಿಂದ, ನಮ್ಮ ಸಂಸಾರವು ಬಹಳ ದೊಡ್ಡದಾಗಿದ್ದು ಅದರ ಉದರ ಪೋಷಣೆಯು ನಮ್ಮನ್ನು ದಿನಾಲು ಕಾಡುತ್ತಿದ್ದುದನ್ನು ನಾನು ಚಿಕ್ಕದಿರುವಾಗ ನನ್ನ ಕಣ್ಣಿನಲ್ಲಿ ಕಾಣುತ್ತಿದ್ದುದರಿಂದ ಯುದ್ಧ ಕಾಲದ ಅರೆ ರೇಶನ್ ಅನ್ನ ಉಂಡುದರಿಂದ ಅಲ್ಪ ಸ್ವಲ್ಪ ಹಣಕ್ಕಾಗಿ ನನ್ನ ಪಿತೃಗಳು ಕಷ್ಟ ಪಡುತ್ತಿದ್ದುದರಿಂದ ಇನ್ನು ಹಲವರು (ನನ್ನ ಅಣ್ಣನ ಮತ್ತು ಅಕ್ಕನ ಮಕ್ಕಳು) ಕಲಿಯಲಿಕ್ಕಿದ್ದುದರಿಂದ ನಾನು ವಿದ್ಯಾಭ್ಯಾಸವನ್ನು ಬಿ.ಎಸ್.ಸಿ. ಗೆ ನಿಲ್ಲಿಸಿ ಕೆಲಸ ಹುಡುಕಲು ನಿರ್ಬಂಧಿತನಾದೆನು.

ಕೆಲಸ ಯಾವುದು? 'ಮೇಸ್ಟ್ರ' ಕೆಲಸ. ಎಲ್ಲೆಡೆಗೂ ಅರ್ಜಿ ಹಾಕಿದೆ. ಹೋಗಿ ಮೇನೇಜರ್‌ರನ್ನು ಕಂಡೆ. ಎಲ್ಲಿಯೂ ಕೆಲಸ ಸಿಗಲಿಲ್ಲ. 'ಕೆಲಸ ಸಿಗುವುದೋ? ಅಥವಾ ನಾನು ಕೆಲಸಕ್ಕಾಗಿ ವರ್ಷಗಟ್ಟಲೇ, ಬೀದಿ, ಬೀದಿ, ಅಲೆಯಬೇಕಾಗುವುದೋ? ಎಂಬ ಹೆದರಿಕೆ ನನ್ನನ್ನು ಕಾಡಲು ಶುರು ಮಾಡಿತು. ಆದರೆ ಅದೃಷ್ಟವಶಾತ್, ನನಗೆ 1948-49 ರಲ್ಲಿ ರುಜಾರಿಯೋ ಹೈಸ್ಕೂಲ್‌ನಲ್ಲಿ ತಂದೆಯವರ ಹಳೆಯ ಸ್ನೇಹಿತರಾದ ಒಬ್ಬ ಅಧ್ಯಾಪಕರ ಶಿಫಾರಸಿನ ಮೇರೆಗೆ ಕೆಲಸ ದೊರೆಯಿತು. ತರಬೇತಿ ಪಡೆಯದ ಅಧ್ಯಾಪಕನಾಗಿ ಒಂದು ವರ್ಷದಲ್ಲಿ ನಾನು ಶಿಕ್ಷಣದಲ್ಲಿ 'ಹುಷಾರಿ' ಯಾಗುವ ಶರ್ತದಲ್ಲಿ ಈ ಕೆಲಸ ಕಟ್ಟಕಡೆಗೆ ದೊರೆಯಿತು.

ಮೂರು ಘಟನೆಗಳು

ಇದರ ಮೊದಲು ಒಂದು ವಿಷಯ ಹೇಳಲು ಮರೆತೆ . ಮೂರು ಘಟನೆಗಳು ನನ್ನ ಮೇಲೆ ತುಂಬಾ ಪರಿಣಾಮ ಬೀರಿತ್ತು. ಮುಂದೆ ನನ್ನನ್ನು ರಾಜಕೀಯದತ್ತ ಈ ಘಟನೆಗಳು ಅಪರೋಕ್ಷವಾಗಿ ಪ್ರೇರೇಪಿಸಿರಬಹುದು. ಒಂದನೆಯದು, ನಾನು ಪಿ.ಯು.ಸಿ. ಯಲ್ಲಿ ಸೈಂಟ್ ಎಲೋಏಿಯಸ್ ಕಾಲೇಜಿನಲ್ಲಿ ಕಲಿಯುತ್ತಿದ್ದಾಗ 1964 ರಲ್ಲಿ ಮದ್ರಾಸಿನಿಂದ ಆಗಿನ ಇಂಗ್ಲೀಷ್‌ಗವರ್ನರ್ 'ನಾಯ್' ಮಂಗಳೂರಿಗೆ ಆಗಮಿಸಿದುದು. ಸೈಂಟ್ ಅಲೋಏಿಯಸ್ ಕಾಲೇಜಿನ ಕೆಥೋಲಿಕ್ ಜೆಸೋಟ್ ಪಾದ್ರಿಗಳು ಗವರ್ನರ್ 'ನಾಯಿ'ಗೆ ಬಹಳಷ್ಟು ವಿಜೃಂಭಣೆಯ ಸ್ವಾಗತವನ್ನು ಕೊಡಲು ಬಯಸಿ ಎಲ್ಲಾ ತಯಾರಿ ಮಾಡಿದರು. ಆದರೆ ಊರಿನ ಜನರು ಮತ್ತು ನಾವು ವಿದ್ಯಾರ್ಥಿಗಳೆಲ್ಲರೂ ಒಟ್ಟು ಸೇರಿ 'ಗವರ್ನರ್ ನಾಯ್'' ಹಿಂತಿರುಗಿ ಹೋಗು . ಹಿಂತಿರುಗಿ ಹೋಗು' ಎಂಬ ಘೋಷಣೆಗಳನ್ನು ಆ ಸ್ವಾಗತಸಮಾರಂಭಕ್ಕೆ ಅಡ್ಡಿಯುಂಟುಮಾಡಿದೆವು. ಎಲ್ಲವೂ ಅಸ್ತವ್ಯಸ್ತವಾಯಿತು. ಪಾದ್ರಿಗಳ ಕೂಟ ನಡೆಯಲಿಲ್ಲ.

ಎರಡನೆಯದು, 1942 ಭಾರತದಿಂದ ತೊಲಗಿರಿ'' ಚಳುವಳಿ ಅಂದು ಕೋರ್ಟ್‌ಗೆ ಬಹಿಷ್ಕಾರ ಹಾಕಲು 'ವಕೀಲ'ರನ್ನು ಒತ್ತಾಯಿಸುವ ನಾನು ಆಗ ಕೆನರಾ ಹೈಸ್ಕೂಲಿನ 9 ನೇ ದರ್ಜೆಯ ವಿದ್ಯಾರ್ಥಿ. ನಾವು ವಿದ್ಯಾರ್ಥಿಗಳು ನಮ್ಮ ಅಧ್ಯಾಪಕರ ಆಜ್ಞೆ ಮೀರಿ ಶಾಲಾ ಗಂಟೆಗಳನ್ನು ಬಾರಿಸಿ ಶಾಲೆಗೆ ಬಲಾತ್ಕಾರವಾಗಿ ರಜಾ ಸಾರುವಂತೆ ಮಾಡಿ ಬೀದಿಗಿಳಿದೆವು. ಈ ಹೋರಾಟದ ನೇತೃತ್ವವನ್ನು ವಿಷ್ಣುಮೂರ್ತಿ ಎಂಬ ಮುಂದೆ ಒಬ್ಬ ಕಮ್ಯುನಿಸ್ಟ್ ಮುಂದಾಳುವಾಗಿ ಕೆಲಸ ಮಾಡಿದವರು ವಹಿಸಿದ್ದರು. ನಾವು ಸಮೀಪದ ಕೋರ್ಟ್ ಗುಡ್ಡೆಗೆ ಹೋಗಿ ಕೋರ್ಟಿಗೆ ಹೋಗುತ್ತಿದ್ದ ವಕೀಲರನ್ನು ಅಡ್ಡಗಟ್ಟಿದೆವು. ಹಿಂದೆ ಸ್ಪೀಕರ್ ಆಗಿದ್ದ ಮಂತ್ರಿಯಾಗಿದ್ದ ಬಾಳಿಗಾ ಎಂಬ ಎಡ್ವೋಕೇಟ್ ಆಗ ಬ್ರಿಟೀಷರ ಸೇವಕರಾಗಿದ್ದು ಕೋರ್ಟಿಗೆ ತಮ್ಮ ಕುದುರೆ ಸಾರೋಟಿನಲ್ಲಿ ಹೋಗುತ್ತಿದ್ದವರನ್ನು ನಾವು ವಿದ್ಯಾರ್ಥಿಗಳು ಎಳೆದು ಹಾಕಿ ಅವರನ್ನು ಕೋರ್ಟಿಗೆ ಹೋಗುವುದರಿಂದ ತಡೆದೆವು. ಆಗ ನಮ್ಮ ಮೇಲೆ ಲಾಠಿ ಪ್ರಹಾರವಾಯಿತು. ಪೋಲೀಸರ ಪ್ಲೆಟೂನುಗಳು ನಮ್ಮನ್ನು ಜಾಡಿಸಿ ಜಾಡಿಸಿ ಹೊಡೆದರು. ನಾವು ಸುಮ್ಮಗೆ 'ಅಹಿಂಸೆ, ಅಹಿಂಸೆ' ಎಂದು ಕೂಡ್ರಲಿಲ್ಲ. ಬದಲು ಅಲ್ಲಲ್ಲಿ ಬದಿಗೆ ಸರಿದು ಜಲ್ಲಿ

ಕಮ್ಯೂನಿಸ್ಟ್ ಆಂದೋಲನ ಸೆಳೆದ ಬಗೆ

ಕಲ್ಲುಗಳಿಂದ ಪೋಲೀಸರಿಗೆ ಹೊಡೆಯುತ್ತಿದ್ದೆವು. ಕಾರ್ ಸ್ಟ್ರೀಟ್‌ನಲ್ಲಿ ಒಬ್ಬ ಪೋಲೀಸರ ಟೋಪಿ ಹಾರಿಸಿ ಅದಕ್ಕೆ ಬೆಂಕಿ ಹಚ್ಚಿದೆವು. ಪೋಲೀಸರು ಗುಂಡುಹಾರಿಸಿ ನಮ್ಮನ್ನು ಕೊನೆಗೆ ಚುದುರಿಸಬೇಕಾಯಿತು. ನಾನು ದೂರವಿದ್ದ ನನ್ನ ಮನೆಗೆ ಸೇರಿದೆ.

ಮೂರನೆಯದು, 1947 ರಲ್ಲಿ ಆಗಸ್ಟ್ 14 ರ ಮಧ್ಯ ರಾತ್ರಿ 12 ಗಂಟೆಗೆ ಮಂಗಳೂರಿನ ನೆಹರೂ ಮೈದಾನದಲ್ಲಿ. ಸ್ವಾತಂತ್ರ್ಯ ಘೋಷಣೆಯ ಸಭೆ. ಆ ಬೃಹತ್ ಜನ ಸಂದಣಿಯಲ್ಲಿ ನಾನು ಒಬ್ಬ. ನೆಹರೂರವರ ಅಂದಿನ ಜೊರತ್ತಿನ ಭಾಷಣವನ್ನು ಬಾನುಲಿ ಕೇಳಿ ಪುಳಕಿತನಾಗಿದ್ದ. ಅವರು ಅಂದು ನುಡಿದ ಮಾತುಗಳು ಇಂದೂ ನನ್ನ ಕಿವಿಗಳಲ್ಲಿ ಪ್ರತಿಧ್ವನಿಸುತ್ತಿವೆ. (ನಮ್ಮನ್ನು ಹಂಗಿಸುತ್ತಿವೆಯೋ ಎಂಬಂತೆ ಭಾಸವಾಗುತ್ತದೆ). "ಭಾರತಕ್ಕೆ ಸ್ವಾತಂತ್ರ್ಯ ದೊರೆಯಿತು ....ಮಿಲಿಯ ಮಿಲಿಯಾಂತರ ಭಾರತದ ಕಣ್ಣೀರು ಸುರಿಸುವ ಜನ ನಮಗೆ ಅಧಿಕಾರ ಕೊಟ್ಟಿದ್ದಾರೆ...ಅವರ ಕಣ್ಣೀರನ್ನು ಒರೆಸುವುದಕ್ಕಾಗಿ ನಮ್ಮ ಕೈಗಳಿಗೆ ಅಧಿಕಾರ ಕೊಟ್ಟಿದ್ದಾರೆ. ಇದು ಅದೃಷ್ಟದೊಡನೆ ನಮ್ಮ ಸೆಣಸಾಟ".

ನಾಲ್ಕನೆಯದು 1948 ಜನವರಿ ಸಂಜೆ 5-30ಗಂಟೆಗೆ ನಾನು ನೆಹರೂ ಮೈದಾನಿನಲ್ಲಿ ಕಾಲೇಜು ಬಿಟ್ಟು ಅದೇ ತಾನೇ 'ಆಕಾಶವಾಣಿ' ಕೇಳುತ್ತಿದೆ ಆಗ ಸುದ್ದಿ ಹೊರಬಿತ್ತು: 'ಮಹಾತ್ಮಾಗಾಂಧಿ ಇನ್ನಿಲ್ಲ!. ಮಹಾತ್ಮ ಗಾಂಧಿಯವರಿಗೆ ಅವರ ಪ್ರಾರ್ಥನಾ ಸಭೆಗೆ ಬಂದವರಲ್ಲಿ ಒಬ್ಬ ಆರ್.ಎಸ್.ಎಸ್.ಗೆ ಸೇರಿದ ಗಾಂಧೀಜಿಯವರ ಹಿಂದೂ - ಮುಸ್ಲಿಂ ಭಾಯಿ ಭಾಯಿ ಪ್ರತಿಪಾದನೆಗೆ ಪ್ರತಿಯಾಗಿ ಗುಂಡಿಕ್ಕಿ ಕೊಂದ. ಮಹಾತ್ಮಾಗಾಂಧಿ ಹುತಾತ್ಮರಾದರು...ಇತ್ಯಾದಿ ಇತ್ಯಾದಿ ...ಆ ದಿನ ಮತ್ತು ಮರುದಿವಸ ಇಡೀ ದಿನ ನಾನು ಉಪವಾಸವಿದ್ದು ಗಾಂಧೀಜಿಯವರ ದಹನ ನಡೆದ ನಂತರ ಅನ್ನ ಉಂಡೆ.

ಕಮ್ಯುನಿಸ್ಟ್ ಚಳುವಳಿಯತ್ತ

ಇವು ಸ್ವಾತಂತ್ರ್ಯಕ್ಕೆ ಸಂಬಂಧಿಸಿದ್ದರೆ. ಇನ್ನು ಕೆಲವು ಕಮ್ಯುನಿಸ್ಟ್ ಪಾರ್ಟಿಗೆ ಸಂಬಂಧಿಸಿದ ಘಟನೆಗಳಗಳು ಸ್ಮೃತಿ ಪಟಲದ ಮೇಲೆ ಆಗಾಗ್ಗೆ ಬಂದು ನಿಲ್ಲುತ್ತದೆ. ಒಂದನೆಯದು ಮೈಸೂರಿನಲ್ಲಿ ರಾಜನ ನಿರಂಕುಶ ಪ್ರಭುತ್ವದ ವಿರುದ್ಧ ಪ್ರಜಾಪ್ರಭುತ್ವಕ್ಕಾಗಿ ನಡೆದ ಹೋರಾಟದ ವೇಳೆ ಮಂಗಳೂರಿನಿಂದ ಕಮ್ಯುನಿಸ್ಟ್ ಪಕ್ಷದ ಸಂಕಪ್ಪ ಇವರ ನೇತೃತ್ವದಲ್ಲಿ ಒಂದು ದಂಡು ಮೈಸೂರಿಗೆ ತೆರಳಿದ ಘಟನೆ. ಇದರಲ್ಲಿ ಸಂಕಪ್ಪನವರು ತಮ್ಮ ಉರಿನಲ್ಲಿ ರಾತ್ರಿ 7 ರಿಂದ 9 ರವರೆಗೆತಿರುಗಿ, ಅಲ್ಲಲ್ಲಿ ಜನರನ್ನು ಸೇರಿಸಿ ತಮ್ಮ ಗಟ್ಟಿ ಸ್ವರದಲ್ಲಿ ಹಾಂಡ್ ವೇಗ ಫೋನಿನ ಮೂಲಕ ಈ ಹೋರಾಟದ ವಿವರಣೆಯನ್ನು ಮಾಡುತ್ತಿದ್ದರು.... ಒಂದು ಗುಂಪಿನಲ್ಲಿ ಕಮ್ಯುನಿಸ್ಟ್ ಕಾರ್ಯಕರ್ತರು ಜನರ ಮಧ್ಯೆ ಊರಿನಲ್ಲಿ ಸಂಚರಿಸಿ. ಅಲ್ಲಲ್ಲಿ ಘೋಷಣೆಗಳನ್ನು ಹಾಕಿ ಚಿಕ್ಕ ಸಭೆಗಳನ್ನು ಫೋನಿನಲ್ಲಿ ಮಗ ಮಾತಾಡಿ ಜನರನ್ನು ಎಚ್ಚರಿಸುತ್ತಿದ್ದರು. ತಮ್ಮ ಕಾರ್ಯಕ್ರಮದ ಬಗ್ಗೆ ಪ್ರಚಾರ ಮಾಡುತ್ತಿದ್ದರು.

> ಈ ಬಾರಿ ಸಿ.ಪಿ.ಐ.(ಎಂ) ರಾಜ್ಯ ಕಾರ್ಯದರ್ಶಿ, ಹಾಗೂ ಕೇಂದ್ರ ಸಮಿತಿ ಸದಸ್ಯರಾದ 'ಮಾಸ್ಟ್ರು' ತಾನು ಕಮ್ಯುನಿಸ್ಟ್ ಚಳುವಳಿಯತ್ತ ಆಕರ್ಷಿತನಾದ ಕಥೆ ಹೇಳುತ್ತಾರೆ.

ಎರಡನೆಯದಾಗಿ, 1947 ರಲ್ಲಿಕಾಂ. ಕೆ. ಎನ್.ಹೊಳ್ಕರ್ ನೇತೃತ್ವದಲ್ಲಿ "ನೆಹರೂ ಕೈಗಳನ್ನು ಗಟ್ಟಿ ಮಾಡಿರಿ' ಎಂಬ ಘೋಷಣೆಗೈದ ಕಮ್ಯುನಿಸ್ಟರ ಸಾರ್ವಜನಿಕ ಸಭೆ ನೆಹರೂ ಮೈದಾನಿನಲ್ಲಿ. ಮೂರನೆಯದು, ಒಂದು ದಿನ 1947 ರಲ್ಲಿ ಸೈಂಟ್ ಎಲೋಏಿಯಸ್ ಕಾಲೇಜಿನಿಂದ ನಾನು ಗುಡ್ಡದ ಮೆಟ್ಟಲುಗಳನ್ನು ಇಳಿದು ಬರುತ್ತಿದ್ದೆ.

ಆಗ ಕೆಂಬಾವುಟಗಳನ್ನು ಹಿಡಿದು, ಕಾರ್ಮಿಕರು ಕೆಳಗಡೆ ಪಿ.ವಿ.ಎಸ್. ಬೀಡಿ ಡಿಪೋದ ಎದುರು ಪ್ರದರ್ಶನ ಮಾಡುತ್ತಿದ್ದರು.ಅವರು ತಮ್ಮ ಬೇಡಿಕೆಗಳಿಗಾಗಿ ಘೋಷಣೆ ಮಾಡುತ್ತಿದ್ದರು. ಏಕಾಏಕಿಯಾಗಿ ಬೀಡಿ ಡಿಪೋದ ಬೀಡಿಗಳನ್ನು ಹೊರಗೆಳೆಯಲಾಗುತ್ತಿತ್ತು... ಬೆಂಕಿ ಹೊತ್ತಿಸಿ ಸುಡಲಾಗುತ್ತಿತ್ತು ಆಗ ತಾನೇ ಪೋಲಿಸರು ವ್ಯಾನ್‌ಗಳಲ್ಲಿ ಬಂದು ಹಾರಿ ಈ ಕಾರ್ಮಿಕರನ್ನು ಹೊಡೆಯುತ್ತಿದ್ದರು..ನಾನು ಮತ್ತು ನನ್ನ ಮಿತ್ರರು ಮೇಲಿನಿಂದಲೇ ಈ ದೃಶ್ಯವನ್ನು ನೋಡುತ್ತಾ ನಿಂತಿದ್ದವು ಕೆಲವು ನಿಮಿಷ ಎಲ್ಲಾ ನಿಶ್ಶಬ್ದ.

ನಾಲ್ಕನೆಯದು, ಯುದ್ಧದ ಭೀಕರ ದಿನಗಳೂರು ಘಟನೆಗಳು ಆಹಾರ ಧಾನ್ಯಗಳ ಕಾಳಸಂತೆ. ಬೆಲೆಯೇರಿಕೆ ಜನಜೀವನ ಕಷ್ಟಕರ ಆಗ ಸರಕಾರದ ನಿರ್ಣಯ ರೇಷನ್ ಕಾರ್ಡುಗಳನ್ನು ಮನೆಮನೆಗೆ ಹೋಗಿ ಅಂಕೆ ಸಂಖ್ಯೆಗಳನ್ನು ತೆಗೆದು ಮಾಡುವ ವಿಶೇಷ ಕೆಲಸದಲ್ಲಿ ಕಮ್ಯುನಿಸ್ಟರ ನೂರಾರು ಕಾರ್ಯಕರ್ತರ ಪಾತ್ರ.

ಈಗ ಶಾಲೆಯಲ್ಲಿ ನಾನು ಕಲಿಸುತ್ತಾ ಸುಮಾರು 7-8 ತಿಂಗಳು ಕಳೆದಾಗ ಒಂದು ದಿನ ನಮ್ಮ ರುಜಾರಿಯೋ ಶಾಲೆಯಲ್ಲಿ, ನನ್ನಂತೆ ಅಧ್ಯಾಪಕರಾಗಿದ್ದ ಕಾಂ. ರಾಮಪ್ಪ ಮಾಸ್ತರರು ನನಗೆ ಒಂದು ದಿನ ಗುಟ್ಟಿನಲ್ಲಿ ಒಂದು ಪುಸ್ತಕ ಕೊಟ್ಟರು. 'ಇದನ್ನು ನಿಮ್ಮ ಬಿಡುವಿನಲ್ಲಿ ಓದಿ ನನಗೆ ನಿಮ್ಮ ಅಭಿಪ್ರಾಯವನ್ನು ತಿಳಿಸಬೇಕು'' ಎಂದು ಅವರು ಕಿವಿಯಲ್ಲಿ ನುಡಿದರು. ನಾನು ಅದರ ಗುಡ್ಡಕ್ಕೆ ಹೋಗಿ ಒಂದು ಬಂಡೆಯ ಮೇಲೆ ಒಬ್ಬಂಟಿಗನಾಗಿ ಕುಂತು ಪುಸ್ತಕ ತೆರೆದು ನೋಡಿದೆ. ಅದರ ಲೇಖಕರು, ಮಾರ್ಕ್ಸ್ ಮತ್ತು ಏಂಗೆಲ್ಸ್‌ರು. ನಾನು ಓದುತ್ತಾ ಹೋದಂತೆ ನನ್ನ ಮೈಯಲ್ಲಿ ರೋಮಾಂಚನ ಉಂಟಾಯಿತು. ನಾನೊಬ್ಬ ವಿಜ್ಞಾನದ ವಿದ್ಯಾರ್ಥಿ. ಈ ಚಾರಿತ್ರಿಕ ಗ್ರಂಥವನ್ನು ಕುರಿತು ತಿಳಿದಿರಲಿಲ್ಲ. ಇದು ಚಾರಿತ್ರಿಕ ಗ್ರಂಥವಾದರೂ ಚರಿತ್ರಿಕವಾಗಿ ವೈಜ್ಞಾನಿಕವಾಗಿ ನೋಡಿ ವಿವರಿಸುತ್ತಿತ್ತು ಈ ಪುಸ್ತಕ ನನ್ನ ಕಣ್ಣ ಮುಂದೆ ಭಾರತದಲ್ಲಿ ನಡೆಯುತ್ತಿರುವ ವಿಚಾರಗಳನ್ನೇ ತನ್ನದೇ ಆದ ಗಂಭೀರ ನುಡಿಗಳಲ್ಲಿ ಕಮ್ಯುನಿಸ್ಟ್ ಘೋಷಣೆ ಹೇಳುತ್ತಿತ್ತು.......

ನಾನು ಕಾಂ. ರಾಮಪ್ಪ ಮಾಸ್ತರಿಗೆ ನನ್ನ ಮೆಚ್ಚುಗೆಯನ್ನು ಈ ಗ್ರಂಥದ ಬಗ್ಗೆ ಹೇಳಿದೆ. ಅವರಿಗೆ ಸಂತೋಷವಾಯಿತು. ಅವರು ನನಗೆ ಮಾರ್ಕ್ಸ್‌ರ ಸಣ್ಣ ಸಣ್ಣ ಹಲವು ಲೇಖನಗಳುಳ್ಳ ಪುಸ್ತಕಗಳನ್ನು ಗುಟ್ಟಿನಲ್ಲಿ ಒದಗಿಸಿದರು ನಾನು ಅವುಗಳನ್ನು ಗುಟ್ಟಿನಲ್ಲಿ ಓದಿದೆ. ಗುಟ್ಟು ಯಾಕೆ? ಎಂದೊಮ್ಮೆ ಕೇಳಿದೆ. ಅವರು ಆಗ ಹೇಳಿದರು: "ದೇಶದಲ್ಲಿ ಈ ಕಮ್ಯುನಿಸ್ಟ್ ಸಿದ್ಧಾಂತದ ಪುಸ್ತಕಗಳಿಗಾಗಿ ನಿಷೇಧವಿದೆ. ಅದೂ ನಮ್ಮ ಕ್ರಿಶ್ಚಿಯನ್ ಪಾದ್ರಿಗಳು ಇರುವ ಶಾಲೆಯಲ್ಲಿ ನಾವು ಈ ಪುಸ್ತಕಗಳನ್ನು ಓದುತ್ತೇವೆಂದು ತಿಳಿದರೆ, ನಮ್ಮಿಬ್ಬರ ಕೆಲಸವೂ ಹೋದೀತು ಎಂದು ಅವರು ಹೆದರಿಸಿದರು. ನಾನು ಹದರಿ ಹೆದರಿಯೇ ಈ ಪುಸ್ತಕಗಳನ್ನು ಓದಿದೆ. ಓದಿದಂತೆ ನನಗೆ ಧೈರ್ಯ ಹೆಚ್ಚುತ್ತಾ ಬಂತು. ನಮ್ಮ ಶಾಲೆಯ ಬಳಿಯಿಂದಲೇ ಹೆಚ್ಚಿನ ಕಾರ್ಮಿಕರ ಮೆರವಣಿಗೆಗಳನ್ನು ಕೆಂಬಾವುಟಗಳನ್ನು ಹಿಡಿದು ಘೋಷಣೆಗಳನ್ನು ಕೂಗುತ್ತಾ ಹೋಗುತ್ತಿದ್ದುದನ್ನು ನಾನು ಕಣ್ಣಾರೆ ಕಂಡು ಕಾರ್ಮಿಕರ ಹೋರಾಟದ ಕೆಚ್ಚಿನಿಂದ ಸ್ಫೂರ್ತಿ ಹೊಂದಿದೆ.

ಕಮ್ಯುನಿಸ್ಟ್ ಸಭೆಗಳಿಗೆ ದೂರದಿಂದ ಹೋಗಿ ಅವರ ಭಾಷಣಗಳನ್ನು ಕೇಳುತ್ತಿದ್ದೆ.

1949-50 ರಲ್ಲಿ ನನ್ನನ್ನು ನಮ್ಮ ಶಾಲೆಯ ಮೇನೇಜರರು " ಬಿ.ಟಿ. ಶಿಕ್ಷಣಕ್ಕಾಗಿ ಕಳುಹಿಸಿದರು." ಅರ್ಧ ಸಂಬಳಕೊಡುತ್ತಿದ್ದರು. ನಾನು ಬಿ.ಟಿ. ಡಿಗ್ರಿಯನ್ನು ಸಂಪಾದಿಸಿದೆ. ಅದರ ಜೊತೆಯಲ್ಲಿ ಆಗಲೇ ಕಮ್ಯುನಿಸ್ಟ್ ಪಕ್ಷದ ಸದಸ್ಯರಾಗಿದ್ದ ಬಿ.ಬಿ. ತರಬೇತಿ ಪಡೆಯುತ್ತಿದ್ದ ಕಾಂ. ನಾಚಪ್ಪ ಮತ್ತು ಕಾಂ. ಎಸ್.ರಾಮಚಂದ್ರ ಭಟ್ ಇವರನ್ನು ಭೆಟ್ಟಿಯಾದೆ. ಅವರ ಸ್ನೇಹಾ ಗಳಿಸಿದೆ. ಅವರ ಬಂಡವಾಳಶಾಹಿ ಪದ್ಧತಿಯ ವಿರುದ್ಧದ ಜ್ಞಾನವನ್ನು ಪಡೆದುಕೊಂಡೆ.

ಬಿ.ಟಿ. ಕಾಲೇಜಿನಲ್ಲಿ ಒಂದು ದಿನ ಸಂಜೆ ದಕ್ಷಿಣ ಆಫ್ರಿಕದಿಂದ ಬಂದ ಡಾ। ಕೂಪನ್ ಎಂಬ ಸಮಾಜ ಶಾಸ್ತ್ರದ ಪ್ರೊಫೆಸರರ ಜತೆ ನಾವು ವಿದ್ಯಾರ್ಥಿಗಳು ಅನೇಕರು ಸುತ್ತುವರಿದು ಮಾತಾಡುತ್ತಿದ್ದೆವು. ಅವರು ನಮ್ಮ ಕಾಲೇಜಿನಲ್ಲಿ ಒಂದು ವರ್ಷದ ಮಟ್ಟಿಗೆ "ಅತಿಥಿ ಅಧ್ಯಾಪಕರಾಗಿ" ಬಂದಿದ್ದರು . ಘನ ವಿದ್ವಾಂಸರು ಮತ್ತು ಮಾರ್ಕ್ಸ್‌ವಾದಿ ಅವರಿಗೆ ನಾನು ಒಂದು ಪ್ರಶ್ನೆ ಹಾಕಿದೆ. ಮಹಾತ್ಮಾಗಾಂಧಿ ಯಾರು? ಯಾರ ಪ್ರತಿನಿಧಿ' ಎಂಬುದೇ ಈ ಪ್ರಶ್ನೆ.

ಮಹಾತ್ಮಾ ಗಾಂಧಿ ಭಾರತಕ್ಕೆ ಸ್ವಾತಂತ್ರ್ಯ ತಂದವರು ಇಡೀ ದೇಶದ ಜನತೆಯ ಪ್ರತೀಕ ಎಂದು ಡಾ। ಕೂಪನ್ ಹೇಳುತ್ತಾರೆ ಎಂದು ನಾನು ನಿರೀಕ್ಷಿಸಿದ್ದೆ. ಆದರೆ ಅವರು ಕೊಟ್ಟ ಉತ್ತರ ನನ್ನನ್ನು ದಂಗುಬಡಿಸಿತು. ಪುನಃ ಗಾಂಧಿಯ ಕುರಿತು ಅಭ್ಯಸಿಸಿ ನನ್ನ ನಿಷ್ಕರ್ಷೆಗೆ ಬರಬೇಕೆಂದು ತೀರ್ಮಾನಿಸಿದೆ. ಅವರ ಎಲ್ಲಾ ತಂತ್ರಗಳು ಮತ್ತ ತತ್ವಗಳು ದೇಶದಲ್ಲಿ ಅವರ ನೇತೃತ್ವದ ಪ್ರಭುತ್ವ ಏರ್ಪಡುವುದಕ್ಕಾಗಿ. ದೇಶದ ಬಡತನ ಗಾಂಧಿ ತತ್ವದ ಮೂಲಕ ಹೋಗ 'ಲಾರದು. ಅಭಿವೃದ್ಧಿ ಸಾಧಿಸಲಾಗದು.

1951-52 ಹೀಗೆ ನಾನು ಒಂದೆಡೆ ಅಧ್ಯಾಪಕನಾಗಿ ಮಕ್ಕಳ ಪ್ರೀತಿಗೆ ಪಾತ್ರನಾಗಿ ದುಡಿಯುತ್ತಿದ್ದೆ. ಇನ್ನೊಂದೆಡೆ ರಾತ್ರಿ ಶಾಲೆಗಳಲ್ಲಿ ದುಡಿದು ಜನ ಸಾಮಾನ್ಯರಿಗೆ ಅಕ್ಷರಾಭ್ಯಾಸ ಕಲಿಸುತ್ತಿದ್ದೆ. ವೃತ್ತಿ ಮಾಡುತ್ತಿದ್ದ ವಿದ್ಯಾರ್ಥಿಗಳಿಗೆ ವಿದ್ಯೆ ಕೊಡುತ್ತಿದೆ. ಹೆಚ್ಚೆಚ್ಚು ಜನ ಸಾಮಾನ್ಯರ ಕಡೆಗೆ ನನ್ನ ಒಲವು ಬಿತ್ತು ಅವರ ಸಮಸ್ಯೆಗಳನ್ನು ತಿಳಿದುಕೊಳ್ಳಲು ಪ್ರಯತ್ನಿಸುತ್ತಿದ್ದೆ. ರಾಜಕೀಯದ ಕಡೆಗೆ ನನ್ನ ಮನಸ್ಸು ಉರುಳಿತು.

ಈ ಸಮಯದಲ್ಲಿ ಕಾಂ। ಕೃಷ್ಣನ್ ಲಕ್ಷ್ಮಿಯವರು ನೆಹರೂ ಮೈದಾನದಲ್ಲಿ ಭಾಷಣ ಮಾಡಿದುದನ್ನು ನಾನು ಬಹಳ ಉದ್ವೇಗದಿಂದ ಕೇಳಿದೆ . ನಮ್ಮ ಊರಿನ 'ಸಮಾಜವಾದಿ'ಯಾಗಿದ್ದ ಎಡ್ವೊಕೇಟ್ ಔ. ಮೋಹನರಾಯರ ಭಾಷಣವನ್ನು ಕೇಳಿದೆ."ನಾನು ಕೋಟು ಧರಿಸಿದಾಗ ಎಡ್ವೋಕೇಟು ಕೋಟು ಕಳಗಿಟ್ಟಾಗ ಜನರ ಪ್ರತಿನಿಧಿ "ಎಂದು ಹೇಳುವ ಅವರ ಮಾತುಗಳು ಈ 'ಸಮಾಜವಾದಿ' ಗಳ ದ್ವಿಮುಖ ಭಾವನೆಯನ್ನು ಎಷ್ಟು ಸಮಂಜಸವಾಗಿ ಸ್ಪಷ್ಟಪಡಿಸುತ್ತಿತ್ತು. ಇ.ಕೆ. ರಾಮಸ್ವಾಮಿ ಪೆರಿಯಾರ್‌ರು ಬಂದು ನಹರೂ ಮೈದಾನದಲ್ಲಿ ಮಾತನಾಡಿ ನಮ್ಮ ಪುರಾಣಗಳನ್ನು ಹಾಸ್ಯ ಮಾಡಿದ ಭಾಷಣಗಳನ್ನು ಕೇಳಿದೆ.

ಆಗ ಬಂತು 1952 ರಲ್ಲಿಚುನಾವಣೆ. 1950 ರಲ್ಲಿಸಂವಿಧಾನ ಅಂಗಿಕಾರವಾಗಿ ಪ್ರಜಾಪ್ರಭುತ್ವ ಘೋಷಣೆಯಾಗಿ ನಡೆದ ಪ್ರಥಮ ಮಹಾಚುನಾವಣೆ ಅದರಲ್ಲಿ ನಮ್ಮ ಊರಿನಲ್ಲಿ ವಿಧಾನಸಭೆಯ ಕ್ಷೇತ್ರಕ್ಕೆ ಕಾಂ. ಶಾಂತಾರಾಂ ಷೈ ಯವರು ಕಮ್ಯುನಿಸ್ಟ್ ಪಕ್ಷದಿಂದ ಅಭ್ಯರ್ಥಿಯಾಗಿ ನಿಂತಿದ್ದರು. ನಮ್ಮ ಊರಿನ ಕಮ್ಯುನಿಸ್ಟ್ ಮುಂದಾಳು ಕಾಂ। ಲಿಂಗಪ್ಪ ಸುವರ್ಣರ ಬೇಡಿಕೆಯಂತೆ ನಾನು ನನ್ನ ಮಿತ್ರರು ಹಲವರು ನಮ್ಮ ಊರಿನಲ್ಲಿ ಈ ಚುನಾವಣೆಯಲ್ಲಿ ಕಾಂ। ಶಾಂತಾರಾಂ ಷೈಯವರಿಗೆ ಬೆಂಬಲಿಸಿ ಕೆಲಸ ಮಾಡಿದೆವು. ಶಾಂತಾರಾಂ ಷೈಯವರು ಸೋತರು - ಆದರೂ ಹಣವಿಲ್ಲದೆ ಕೇವಲ ಜನ ಬೆಂಬಲದಿಂದ ಚುನಾವಣೆಯಲ್ಲಿ ಹೋರಾಡಿದ ಕಮ್ಯುನಿಸ್ಟ್ ಮುಂದಾಳುಗಳ ಹೋರಾಟವು ನನ್ನ ಮನಸ್ಸನ್ನು ಆಕರ್ಷಿಸಿತು. ಜನ ಸಾಮಾನ್ಯರ ಕಮ್ಯುನಿಸ್ಟ್ ನಿಷ್ಠೆಯನ್ನು ನಾನು ಆ ಹೋರಾಟದಲ್ಲಿ ಕಂಡು ಅನುಭವಿಸಿದೆ.

ಚುನಾವಣೆಯ ನಂತರದಲ್ಲಿ ಕಾಂ। ಲಿಂಗಪ್ಪ ಸುವರ್ಣರು "ನೀವು ಕಮ್ಯುನಿಸ್ಟ್ ಪಾರ್ಟಿಯ ಸದಸ್ಯರಾಗುತ್ತೀರೋ ಎಂದು ಕೇಳಿದಾಗ, ನನಗೆ ಹರ್ಷವಾಯಿತು. ನಾನು ಕೂಡಲೇ ಹಿಂದುಮುಂದು ನೋಡದೆ. 'ಆಯಿತು'' ನನ್ನನ್ನು

... ಪುಟ 8 ಕ್ಕೆ

ತ್ರಿಪುರಾ ಸರ್ಕಾರದ ಕಣ್ಣೊರೆಸುವ ತಂತ್ರ

1988 ರಲ್ಲಿ ತ್ರಿಪುರಾ ವಿಧಾನಸಭಾದ ಚುನಾವಣೆಗಳಲ್ಲಿ ಕಾಂಗ್ರೆಸ್ (ಐ)-ಟಿ.ಯು.ಜೆ.ಎಸ್. ಮೈತ್ರಿಕೂಟ ಆಗ ಕೇಂದ್ರದಲ್ಲಿ ಅಧಿಕಾರದಲಿದ್ದ ಕಾಂಗ್ರೆಸ್ (ಐ) ಸರಕಾರದ 'ಸಂಪೂರ್ಣ ಬೆಂಬಲದಿಂದ' (ಸೇನೆಯ ಹಸ್ತಕ್ಷೇಪ) ಅಧಿಕಾರಾರೂಢವಾಯಿತು. ಅಂದಿನಿಂದ ರಾಜ್ಯದ ಪ್ರಜಾಸತ್ತಾತ್ಮಕ ಚಳುವಳಿ ತೀವ್ರ ಸಂಕಷ್ಟ ಎದುರಿಸುತ್ತಿದೆ. ಇದೇ ವರ್ಷ ಜುಲೈ 8 ರಂದು ನಡೆದ ತ್ರಿಪುರಾ ಸ್ವಾಯತ್ತ ಜಿಲ್ಲಾ ಮಂಡಳಿ ಚುನಾವಣೆಗಳ ಸಂದರ್ಭದಲ್ಲಿಯೂ ಈ ಮೈತ್ರಿಕೂಟ ದೊಡ್ಡ ರೀತಿಯಲ್ಲಿ ಹಿಂಸಾಚಾರ ನಡೆಸಿ ಚುನಾವಣೆಗಳನ್ನು ಗೆದ್ದಿತು. ಪ್ರತಿಪಕ್ಷದ, ಅದರಲ್ಲೂ ಮುಖ್ಯವಾಗಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಮತ್ತು ಅದರ ಸಾಮೂಹಿಕ ಸಂಘಟನೆಗಳ ಮೇಲೆ ತೀವ್ರ ಪ್ರಮಾಣದ ದಾಳಿ ದಬ್ಬಾಳಿಕೆ ನಡೆಸುತ್ತಿದೆ.

ಒಟ್ಟಿನಲ್ಲಿ, ರಾಜ್ಯದಲ್ಲಿ ಪ್ರಜಾಸತ್ತಾತ್ಮಕ ಚಳವಳಿಗೆ ಉಸಿರುಗಟ್ಟಿಸುವ ವಾತಾವರಣ. ಇದರ ವಿರುದ್ಧ ಅಲ್ಲಿ ಪಕ್ಷ ಸಂಕಷ್ಟಕರ ವಾತಾವರಣದ ನಡುವೆಯೂ ತೀವ್ರವಾದ ಹೋರಾಟ ನಡೆಸುತ್ತಿದೆ.

ಇತ್ತೀಚೆಗೆ ರಾಷ್ಟ್ರೀಯ ರಂಗದ ನಿಯೋಗವೊಂದು ತ್ರಿಪುರಾಕ್ಕೆ ಭೇಟಿ ನೀಡಿ ಅಲ್ಲಿನ ಪರಿಸ್ಥಿತಿಯನ್ನು ಕಣ್ಣಾರೆ ಕಂಡಿತು. ಅತ್ಯಾಚಾರಕ್ಕೊಳಗಾದ ಮಹಿಳೆಯರು ತಮ್ಮ ಗೋಳನ್ನು ತೋಡಿಕೊಂಡರು. ವಿವಿಧ ವಿಭಾಗಗಳ ಜನರಿಂದ ನಿಯೋಗದ ಸದಸ್ಯರು ಮನವಿಗಳನ್ನು ಸ್ವೀಕರಿಸಿದರು. ಅವರು ಸದ್ಯವೇ ರಾಷ್ಟ್ರೀಯ ರಂಗಕ್ಕೆ ವರದಿ ಸಲ್ಲಿಸುವ ನಿರೀಕ್ಷೆಯಿದೆ.

ಕಾಂಗ್ರೆಸ್ (ಐ)-ತ್ರಿಪುರಾ ಉಪಜಾತಿ ಜುಬಾಸಮಿತಿ (ಟಿ.ಯು.ಜೆ.ಎಸ್) ಮೈತ್ರಿಕೂಟ ಸರಕಾರ ಸ್ವಾಯತ್ತ ಮಂಡಳಿ ಚುನಾವಣೆಗಳ ಸಂದರ್ಭದ ಗಲಭೆಗಳ ಬಗ್ಗೆ ತನಿಖೆ ನಡೆಸಲು ಈಗ ಏಕಸದಸ್ಯ ನ್ಯಾಯಾಂಗ ಆಯೋಗವನ್ನು ನೇಮಿಸಿದೆ. ಆಯೋಗದ ನೇಮಕವು ತ್ರಿಪುರಾ ಜನತೆಯ ಆಕ್ರೋಶದಿಂದ ತಪ್ಪಿಸಿಕೊಳ್ಳಲು ಹೂಡಿರುವ ಒಂದು ತಂತ್ರವಾಗಿದೆ ಎಂದು ಟೀಕಿಸಿರುವ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ತ್ರಿಪುರಾ ರಾಜ್ಯಸಮಿತಿ ಆಯೋಗವನ್ನು ಬಹಿಷ್ಕರಿಸಲು ನಿರ್ಧರಿಸಿದೆ.

ಪ್ರಜಾಸತ್ತಾತ್ಮಕ ಹಕ್ಕುಗಳ ರಕ್ಷಣೆಯ ಹೋರಾಟದಲ್ಲಿ ಪ್ರಾಣತೆತ್ತವರಿಗೆ ರಾಜ್ಯ ಸಮಿತಿ ಸಭೆ ಶ್ರದ್ಧಾಂಜಲಿ ಅರ್ಪಿಸಿದೆ. ಕಾಂಗ್ರೆ-ಟಿ.ಯು.ಜೆ.ಎಸ್. ಕೂಟದ ಬೆಂಬಲವಿರುವ ಅರೆ-ಫ್ಯಾಸಿಸ್ಟ್ ಕೊಲೆಗಡುಕ ತಂಡಗಳ ಧಾಳಿಗೆ ಒಳಗಾಗಿರುವ ನಾಗರಿಕ ಜೀವನದ ನಿಯಮಗಳು ಮತ್ತು ದೇಶಪ್ರೇಮಿ ಪರಂಪರೆಯ ರಕ್ಷಣೆಗೆ ಜನರು ಒಗ್ಗಟ್ಟಾಗಿ ನಿಲ್ಲಬೇಕು ಎಂದು ಅದು ಕರೆ ನೀಡಿದೆ.

ಜನತಾದಳ ಸರಕಾರಗಳ ಅಸ್ಥಿರತೆ ವಿರುದ್ಧ ಪಿ.ಬಿ. ಎಚ್ಚರಿಕೆ.

ಸಿ.ಪಿ.ಐ(ಎಂ) ಪಾಲಿಟ್‌ಬ್ಯೂರೊ ಆಗಸ್ಟ್ 8 ರಂದು ನೀಡಿರುವ ಪತ್ರಿಕಾ ಹೇಳಿಕೆ.

ರಾಷ್ಟ್ರೀಯ ರಂಗ ಸರಕಾರದಲ್ಲಿನ ಇತ್ತೀಚಿನ ಬಿಕ್ಕಟ್ಟು ಜನತಾದಳದ ಆಂತರಿಕ ವ್ಯವಹಾರವಾಗಿದ್ದು, ಅದನ್ನು ಪರಿಹರಿಸಲು ಪ್ರಧಾನ ಮಂತ್ರಿಯುವರು ಕ್ರಮಕ್ಕೆಗೊಳ್ಳಬೇಕೆಂದು ಆ ಸಂದರ್ಭದಲ್ಲಿ ಸಿ.ಪಿ.ಐ.(ಎಂ) ಸ್ಪಷ್ಟಪಡಿಸಿತ್ತು. ಅದೇ ವೇಳೆ ಬಿಕ್ಕಟ್ಟಿನ ಪರಿಣಾಮ ಸರಕಾರವನ್ನು ಬೆಂಬಲಿಸುವ ಪಕ್ಷಗಳ ಮೇಲೆ ಕೂಡ ಬೀರುವ ಬಗ್ಗೆ ಕಳವಳ ವ್ಯಕ್ತಪಡಿಸಿತ್ತು. ಆದರೆ ಹರ್ಯಾಣದಲ್ಲಿನ ಅನಂತರದ ಬೆಳವಣಿಗೆಗಳನ್ನು ನೋಡಿದರೆ ಅಲ್ಲಿನ ಜನತಾದಳದ ಸರಕಾರದಲ್ಲಿ ಬದಲಾವಣೆಗಳನ್ನು ತರಲು ಪ್ರಯತ್ನಿಸುತ್ತಿರುವುದು ವ್ಯಕ್ತವಾಗುತ್ತಿದೆ. ರಾಜ್ಯ ಸರಕಾರಗಳನ್ನು ಅಸ್ಥಿರಗೊಳಿಸುವ ಯಾವುದೇ ಪ್ರಯತ್ನಗಳಿಂದ ಕಾಂಗ್ರೆಸ್ (ಐ)ಗೆ ಲಾಭವಾಗುತ್ತದೆ ಎಂಬ ವಿಚಾರವನ್ನು ಜನತಾದಳದ ನಾಯಕರಿಗೆ ಸಿ.ಪಿ.ಐ.(ಎಂ) ತಿಳಿಸಿದೆ.

ಈಗ ಉತ್ತರ ಪ್ರದೇಶದಲ್ಲಿ, ಮುಖ್ಯಮಂತ್ರಿ ಮುಲಾಯಂ ಸಿಂಗ್ ಯಾದವರ ವಿರುದ್ಧ ಬಿ.ಜೆ.ಪಿ. ನೇತೃತ್ವದಲ್ಲಿ ಪ್ರಚಾರ ನಡೆಯುತ್ತಿದೆ. ಮುಲಾಯಂ ಸಿಂಗ್ ಕಾಂಗ್ರೆಸ್ (ಐ) ಆಡಳಿತಗಿಂತ ಹೆಚ್ಚಿನ ಪ್ರಮಾಣದಲ್ಲಿ 'ಜಾತೀಯತೆ'ಯನ್ನು ಕೋಮುವಾದವನ್ನು ಹರಡುತ್ತಿದ್ದಾರೆ ಮತ್ತು ರಾಜಕೀಯವನ್ನು (ಕ್ರಿಮಿನಲ್) ಹಿಂಸಾತ್ಮಕಗೊಳಿಸುತ್ತಿದ್ದಾರೆ' ಎಂದು ಆಗಸ್ಟ್ 4-5 ರಂದು ನಡೆದ ರಾಜ್ಯ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಬಿ.ಜೆ.ಪಿ. ಆರೋಪಿಸಿದೆ. ಅಯೋಧ್ಯೆಯ ವಿವಾದವನ್ನು ಕೋಮುವಾದಕ್ಕೆ ಬಳಸಲು ವಿಶ್ವಹಿಂದೂ ಪರಿಷತ್ ಮತ್ತು ಬಿ.ಜೆ.ಪಿ. ನಡೆಸುತ್ತಿರುವ ಪ್ರಯತ್ನಗಳಿಗೆ ಮುಲಾಯಂಸಿಂಗ್ ದೃಢ ವಿರೋಧ ವ್ಯಕ್ತಪಡಿಸುತ್ತಿರುವುದೇ ಬಿ.ಜೆ.ಪಿ. ಯ ಈ ನಿರ್ಣಯಕ್ಕೆ ಕಾರಣವಾಗಿದೆ.

ಉತ್ತರ ಪ್ರದೇಶ ಸರಕಾರವನ್ನು ಅಸ್ಥಿರಗೊಳಿಸುವ ಪ್ರಯತ್ನಗಳನ್ನು ಪ್ರತಿರೋಧಿಸಲು ಜನತಾದಳ ಮತ್ತು ರಾಷ್ಟ್ರೀಯರಂಗ ಜಾಗೃತವಾಗಿರುವುದೆಂದು ಪಾಲಿಟ್‌ಬ್ಯೂರೊ ನಿರೀಕ್ಷಿಸುತ್ತಿದೆ. ಅದರಲ್ಲಿ ವಿಫಲರಾದರೆ ಕೋಮುವಾದ ವಿರೋಧಿ ಹೋರಾಟಕ್ಕೆ ಹಾನಿಯಾಗುತ್ತದೆ ಮತ್ತು ಪರಿಸ್ಥಿತಿಯ ಲಾಭ ಪಡೆಯಲು ಕಾಂಗ್ರೆಗೆ ಅವಕಾಶ ನೀಡಿದಂತಾಗುತ್ತದೆ. ರಾಜ್ಯದಲ್ಲಿ ಜನತಾದಳ ಸರಕಾರವನ್ನು ದುರ್ಬಲಗೊಳಿಸುವ ಯಾವುದೇ ಹೆಜ್ಜೆಯನ್ನು ಸಿ.ಪಿ.ಐ.(ಎಂ) ಮತ್ತು ಇತರ ಎಡ ಹಾಗೂ ಜಾತ್ಯಾತೀತ ಶಕ್ತಿಗಳು ವಿರೋಧಿಸುತ್ತವೆ.

ದೇವೀಲಾಲ್ ಅವರು ಆಗಸ್ಟ್9 ರಂದು ಹೊಸದೆಹಲಿಯಲ್ಲಿ ಕರೆದಿರುವ ರ್‍ಯಾಲಿ ಶಾಂತಿಯುತವಾಗಿ ನಡೆಯುವುದೆಂದು ಪಾಲಿಟ್‌ಬ್ಯೂರೊ ಆಶಿಸುತ್ತದೆ. ಈ ಹಂತದಲ್ಲಿ ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸುವ ಯಾವುದೇ ಕೆಲಸವನ್ನು ಮಾಡಬಾರದು.

ಭೂಪಾಲ್ ದುರಂತ ಸಂತ್ರಸ್ತರ ಜೀವದೊಂದಿಗೆ ಸರಕಾರದ ಚೆಲ್ಲಾಟ

ಸಾವಿರಾರು ಜನರ ಸಾವಿಗೆ ಕಾರಣವಾದ ಭೂಪಾಲ್ ವಿಷಾನಿಲ ದುರಂತ ಸಂಭವಿಸಿ ಐದಾರು ವರ್ಷಗಳೇ ಕಳೆದಿದೆ. ಆದರೆ ವಿಷಾನಿಲದ ಪ್ರಭಾವಕ್ಕೆ ಒಳಗಾಗಿ ಕಷ್ಟಪಡುತ್ತಿರುವ ಜನರಿಗೆ ಇನ್ನೂ ಸರಿಯಾಗಿ ಪರಿಹಾರ ದೊರೆತಿಲ್ಲ. ಜನರ ಪರವಾಗಿ ದೃಢವಾಗಿ ನಿಂತು ಹೋರಾಡುವಲ್ಲಿ ಕೇಂದ್ರ ಮತ್ತು ರಾಜ್ಯಸರಕಾರಗಳು ವಿಫಲವಾಗಿವೆ.

ದೇಶದೊಳಗೆ

ಈ ಹಿನ್ನೆಲೆಯಲ್ಲಿ, ಮೂರು ಸಂಘಟನೆಗಳಾದ ಭೂಪಾಲ್ ಅನಿಲ ಪೀಡಿತ ಮಹಿಳಾ ಉದ್ಯೋಗಿಗಳ ಸಂಘಟನೆ, ಭೂಪಾಲ್ ಅನಿಲ ಪೀಡಿತ ಸಂಘರ್ಷ ಸಹಯೋಗ ಸಮಿತಿ ಮತ್ತು ಭೂಪಾಲ್ ಗ್ರೂಪ್ ಫಾರ್ ಇನ್‌ಫರ್ಮೇಶನ್ ಆ್ಯಕ್ಷನ್ ಇವುಗಳು ಜುಲೈ 24 ರಂದು ಜಂಟಿ ಹೇಳಿಕೆಯೊಂದನ್ನು ನೀಡಿದ್ದು ಸರ ಸಾರಾಂಶ ಇಲ್ಲಿದೆ:

ಭೂಪಾಲ್‌ಗೆ ಸಂಬಂಧಿಸಿದ ಕೆಲವು ಪ್ರಮುಖ ವಿಚಾರಗಳಲ್ಲಿ ಕೇಂದ್ರ ಸರಕಾರ ಹೆಚ್ಚು ಕಡಿಮೆ ಸಂಪೂರ್ಣ ವಿಫಲವಾಗಿದೆ. ಇದರಿಂದಾಗಿ, ಸರಕಾರದ ನಿರ್ಲಕ್ಷ್ಯದಿಂದ ಸಂತ್ರಸ್ತರು ಕಷ್ಟಕ್ಕೊಳಗಾಗುವುದು ಮುಂದುವರಿಯುವುದನ್ನು ತಡೆಯಲಿಕ್ಕಾಗಿ ಸಾರ್ವಜನಿಕರು ಒತ್ತಡ ಹೇರುವುದು ಇನ್ನೊಮ್ಮೆ ಅನಿವಾರ್ಯವಾಗಿದೆ. ವಿಷಾನಿಲಪೀಡಿತ 36 ಮುನ್ಸಿಪಲ್ ವಾರ್ಡ್‌ಗಳ ಜನರಿಗೆ ಮಧ್ಯಂತರ ಪರಿಹಾರವಾಗಿ 310 ಕೋಟಿ ರೂ. ಒದಗಿಸಿದ್ದು ನಿಜಕ್ಕೂ ಕೇಂದ್ರ ಸರಕಾರದ ಒಂದು ಶ್ಲಾಘನೀಯ ಕಾರ್ಯ. ಆದರೆ, ಹಣ ನಿಗದಿಪಡಿಸಿ ವಿತರಣೆ ಕಾರ್ಯವನ್ನು ಮಧ್ಯಪ್ರದೇಶ ಸರಕಾರಕ್ಕೆ ವಹಿಸಿರುವುದರಿಂದಲಷ್ಟೆ ತನ್ನ ನೈತಿಕ ಜವಾಬ್ದಾರಿ ಮುಗಿಯಿತೆಂದು ಕೇಂದ್ರ ಸರಕಾರ ಭಾವಿಸಿರುವುದು ವಿಷಾದನೀಯ.

ಮಧ್ಯಪ್ರದೇಶ ಸರಕಾರ ಮಧ್ಯಂತರ ಪರಿಹಾರ ಹಂಚುವ ರೀತಿಯಿಂದ ಆ ಪರಿಹಾರದ ಉದ್ದೇಶವೇ ಸೋತು ಹೋಗಿದೆ. ಪರಿಹಾರ ವಿತರಣೆ ಬಹಳ ನಿಧಾನಗತಿಯಲ್ಲಿ ಸಾಗುತ್ತಿದ್ದು ಎಲ್ಲ ಸಂತ್ರಸ್ತರಿಗೆ ಅದು ದೊರೆಯಬೇಕಾದರೆ ಎರಡು ವರ್ಷಗಳೇ ಆಗಬಹುದು. ತಕ್ಷಣದ ಆರ್ಥಿಕ ನೆರವಿನ ಅವಶ್ಯಕತೆ ಇರುವವರಿಗೆ ಈ ವಿಳಂಬದಿಂದ ಬಹಳ ತೊಂದರೆ ಆಗುತ್ತದೆ.

ದುರಂತ ಸಂಭವಿಸಿದ ರಾತ್ರಿಯಿಂದಲೇ ಅನಿಲಸಂತ್ರಸ್ತರ ಸಂಕಷ್ಟಗಳು ಮುಂದುವರಿದಿದೆ. ಅವುಗಳನ್ನು ಕಡಿಮೆ ಮಾಡುವ ದಿಸೆಯಲ್ಲಿ ಪರಿಣಾಮಕಾರಿ ಹಾಗೂ ಅರ್ಥಪೂರ್ಣ ಕ್ರಮಕ್ಕೆಗೊಳ್ಳಲು ಹಾಗೂ ಈ ವರ್ಷದ ಆರಂಭದಲ್ಲಿ ನೀಡಿದ ಭರವಸೆಗಳನ್ನು ಪೂರ್ಣಗೊಳಿಸಲು ಕೇಂದ್ರ ಸರಕಾರಕ್ಕೆ ಇದು ಸಕಾಲವಾಗಿದೆ.

ಬಿಹಾರದಲ್ಲಿ ಭೂ ಸುಧಾರಣೆಯ ವೈಫಲ್ಯ

ಬಿಹಾರದಲ್ಲಿ ಭೂಸುಧಾರಣೆ ಕಾನೂನು ಜಾರಿಯಾಗಿ 28 ವರ್ಷಗಳಾದರೂ ಅದು ಇನ್ನೂ ಕೂಡ ವಸ್ತುಶಃ ಕಾಗದದ ಮೇಲಷ್ಟೆ ಉಳಿದಿದೆ.

ಬಿಹಾರದ ಕಂದಾಯ ಮತ್ತು ಭೂಸುಧಾರಣೆಗಳ ಇಲಾಖೆಯು ವಾರ್ಷಿಕ ವರದಿಯಿಂದಲೇ ಈ ಅಂಶ ವ್ಯಕ್ತ . ವರದಿಯ ಕೆಲವು ಅಂಶಗಳು ಇಲ್ಲಿವೆ.

ಭೂಮಿತಿ ಕಾನೂನನ್ನು 1961 ಏಪ್ರಿಲ್‌ನಲ್ಲಿ ಜಾರಿಗೊಳಿಸಿದರೂ ಇದುವರೆಗೆ ಅದರ ಲಾಭ ಪಡೆದ ಭೂರಹಿತರ ಸಂಖ್ಯೆ 2,93,470. ಆದರೆ 1981 ರ ಜನಗಣತಿ ಪ್ರಕಾರವೇ ರಾಜ್ಯದ ಒಟ್ಟು ಭೂರಹಿತರ ಸಂಖ್ಯೆ 73.40 ಲಕ್ಷ.

ಭೂರಹಿತ ಪರಿಸ್ಥಿತಿ ದಯನೀಯವಾಗಿದೆ. ಸಾವಿರಾರು ಭೂವಿವಾದ ಪ್ರಕರಣಗಳು ವಿವಿಧ ನ್ಯಾಯಾಲಯಗಳಲ್ಲಿ ಕೊಳೆಯುತ್ತಿವೆ. ಕಳೆದ (89-90) ಹಣಕಾಸು ವರ್ಷದಲ್ಲಿ 1500 ಎಕರೆ ಜಮೀನು ವಿತರಣೆ ಮಾಡಬೇಕೆಂಬ ಗುರಿಹಾಕಿಕೊಳ್ಳಲಾಗಿತ್ತು. ವಿತರಿಸಿದ್ದು ಕೇವಲ 4821 ಎಕರೆ.

ಸರಕಾರ ಭೂಮಿಯನ್ನು ವಶಪಡಿಸಿಕೊಳ್ಳುವ ಕಾರ್ಯವೂ ನಿಧಾನವಾಗಿದೆ. 1984-85 ನೇ ವರ್ಷಕ್ಕೆ 1ಲಕ್ಷ ಎಕರೆ ಜಮೀನು ವಶಪಡಿಸಿಕೊಳ್ಳುವ ಗುರಿಯಿದ್ದರೂ 1985 ರವರೆಗೆ ಕೇವಲ 84,000 ಎಕರೆ ಭೂಮಿಯನ್ನು ವಶಪಡಿಸಿಕೊಳ್ಳಲಾಗಿದೆ.

ಸಂಕ್ಷಿಪ್ತ ಸಮಾಚಾರ

ಯಶಸ್ವಿ ಬಂದ್:

ಗುಜರಾತ್‌ನ ಭಾವನಗರದಲ್ಲಿ ಜುಲೈ 20 ರಂದು ಬೆಲೆಯೇರಿಕೆ ಮತ್ತು ಕೋಮುವಾದದ ವಿರುದ್ಧ ಸಿ.ಪಿ.ಐ.(ಎಂ) ಕರೆಯ ಮೇರೆಗೆ ಬಂದ್ ಯಶಸ್ವಿಯಾಗಿ ನಡೆಯಿತು. ಅದಕ್ಕೆ ಪೂರ್ವಭಾವಿಯಾಗಿ ಜುಲೈ 9 ರಿಂದ 19 ರವರೆಗೆ ವ್ಯಾಪಕ ಪ್ರಚಾರ ನಡೆಸಲಾಯಿತು. ಪ್ರತಿದಿನ ಒಂದಲ್ಲ ಒಂದು ಪ್ರದೇಶದಲ್ಲಿ ಕಾರ್ಯಕರ್ತರು ಸತ್ಯಾಗ್ರಹ ನಡೆಸಿದರು. ಜೂನ್ 30 ರಂದು ನಡೆದ ಬೆಲೆಯೇರಿಕೆ ಮತ್ತು ಕೋಮುವಾದ ವಿರೋಧಿ ಸಮಾವೇಶ ಬಂದ್ ನಡೆಸುವ ನಿರ್ಣಯ ಕೈಗೊಂಡಿತ್ತು.

ಟ್ರೇಡ್ ಯೂನಿಯನ್ ಶಿಬಿರ: ಸಿ.ಪಿ.ಟಿ.ಯು. ಸಂಯೋಜಿತ ಭಾರತ ಕಟ್ಟಡ ನಿರ್ಮಾಣ ಕಾರ್ಮಿಕರ ಫೆಡರೇಶನ್ (ಸಿ.ಡಬ್ಲ್ಯು.ಎಫ್.ಐ) ತನ್ನ ಅಖಿಲ ಭಾರತ ಪ್ರಥಮ ಅಧ್ಯಯನ ತರಗತಿಯನ್ನು ಜುಲೈ 2 ರಿಂದ 7 ರತನಕ ಪಶ್ಚಿಮ ಬಂಗಾಳದ ಹಾಲ್ದಿಯಾದಲ್ಲಿ ವ್ಯವಸ್ಥೆಗೊಳಿಸಿತ್ತು. ಶಿಬಿರಕ್ಕೆ ದೇಶದ ಕಮ್ಯೂನಿಸ್ಟ್ ಚಳವಳಿಯ ಸಂಸ್ಥಾಪಕರಲ್ಲಿ ಒಬ್ಬರಾದ ಕಾಮ್ರೇಡ್ ಮುಜಾಫರ್ ಅಹ್ಮದ್ ಅವರ ಹೆಸರನ್ನು ಇಡಲಾಗಿತ್ತು.

ಭಯೋತ್ಪಾದಕರ ಕರೆಗೆ ಜನರ ತಿರಸ್ಕಾರ:

ಅಕಾಲಿದಳ (ಮಾನ್‌ಬಣ) ಮತ್ತು ಇತರ ಕೆಲವು ಸಂಘಟನೆಗಳು ಆಗಸ್ಟ್ 11ರಿಂದ 13 ರತನಕ ನಡೆಸಲು ಕರೆಕೊಟ್ಟ 72 ಗಂಟೆಗಳ ಪಂಜಾಬ್ ಬಂದ್ ಸಂಪೂರ್ಣ ವಿಫಲವಾಯಿತು ಎಂದು ರಾಜ್ಯಪಾಲ ವೀರೇಂದ್ರವರ್ಮಾ ಅವರು ತಿಳಿಸಿದ್ದಾರೆ.

ಬಂದ್‌ನ್ನು ಪ್ರತಿರೋಧಿಸಲು ಹಾಗೂ ವಿಫಲಗೊಳಿಸಲು ಪ್ರಯತ್ನಿಸುವುದಾಗಿ ವಿವಿಧ ರಾಜಕೀಯ ಪಕ್ಷಗಳು, ಧಾರ್ಮಿಕ ಸಂಸ್ಥೆಗಳ ಪ್ರತಿನಿಧಿಗಳು ಮತ್ತು ಕೆಲವು ಪ್ರಮುಖ ಬುದ್ಧಿಜೀವಿಗಳು ಈ ಸಂದರ್ಭದಲ್ಲಿ ಸಂಯುಕ್ತ ಹೇಳಿಕೆಯೊಂದನ್ನು ನೀಡಿದ್ದು ಗಮನಾರ್ಹವಾಗಿತ್ತು.

'ಮಂದಿರ ನಿರ್ಮಿಸಲು ಬಿಡೆವು'

ಅಯೋಧ್ಯೆಯಲ್ಲಿ ವಿವಾದಾತ್ಮಕ ನಿವೇಶನದಲ್ಲಿ ರಾಮಮಂದಿರ ನಿರ್ಮಿಸುವ ವಿಶ್ವಹಿಂದೂ ಪರಿಷತ್ ಯೋಜನೆ ಕೈಗೂಡಲು ಬಿಡುವುದಿಲ್ಲ ಎಂದು ಜನತಾದಳ ಉತ್ತರ ಪ್ರದೇಶ ಘಟಕದ ಪ್ರಧಾನ ಕಾರ್ಯದರ್ಶಿಯವರು ಹೇಳಿದ್ದಾರೆ.

ಶೈಕ್ಷಣಿಕ ಸಮಸ್ಯೆಗಳ ಪರಿಹಾರಕ್ಕಾಗಿ ವಿದ್ಯಾರ್ಥಿಗಳ ಉಗ್ರ ಪ್ರತಿಭಟನೆ

ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್.ಎಫ್.ಐ.)ನ ಕರ್ನಾಟಕ ರಾಜ್ಯ ಸಮಿತಿಯು ಜುಲೈ 31 ರಂದು ಇಡೀ ರಾಜ್ಯ ವ್ಯಾಪಿಯಾಗಿ ವಿದ್ಯಾರ್ಥಿ ಸಮುದಾಯ ಎದುರಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕೆ ಒತ್ತಾಯಿಸಿ ಶೈಕ್ಷಣಿಕ ವರ್ಷದ ಆರಂಭದಲ್ಲೆ ಹಂತ ಹಂತವಾಗಿ ವಿದ್ಯಾರ್ಥಿಗಳ ಪ್ರತಿಭಟನೆಯನ್ನು ಹೋರಾಟಗಳನ್ನು ನಡೆಸಲು ಕರೆನೀಡಿತ್ತು. ಇದರ ಅಂಗವಾಗಿ ರಾಜ್ಯದ ವಿವಿದೆಡೆಗಳಲ್ಲಿ ನಡೆದ ಹೋರಾಟವನ್ನು ಸಂಕ್ಷಿಪ್ತವಾಗಿ ಇಲ್ಲಿ ನೀಡಲಾಗಿದೆ.

ಹೊಸಪೇಟೆ

ನಗರದ ವಿಜಯನಗರ ಕಾಲೇಜು, ಮಹಿಳಾ ಪದವಿ ಕಾಲೇಜು ಹಾಗೂ ಎಲ್ಲಾ ಬಾಲಕ ಬಾಲಕಿಯರ ಪ್ರೌಢಶಾಲೆಗಳಿಂದ 10,000 ಕ್ಕೂ ಹೆಚ್ಚು ವಿದ್ಯಾರ್ಥಿ, ವಿದ್ಯಾರ್ಥಿನಿಯರು ತರಗತಿಗಳನ್ನು ಬಹಿಷ್ಕರಿಸಿ, ಪ್ರಮುಖ ಬೀದಿಗಳ ಮೂಲಕ ಮೆರವಣಿಗೆ ಹೊರಟು, ತಹಶೀಲ್ದಾರರಿಗೆ, ಅಸಿಸ್ಟೆಂಟ್ ಕಮೀಷನರರಿಗೆ ಮತ್ತು ಸ್ಥಳೀಯ ಶಾಸಕರಿಗೆ ಸಮಸ್ಯೆಗಳ ಪರಿಹಾರಕ್ಕೆ ಮನವಿ ಪತ್ರವನ್ನು ನೀಡಲಾಯಿತು.

ಬೇಕು ಬೇಕು ಶಿಕ್ಷಕರು ಬೇಕು, ಪುಸ್ತಕ ಬೇಕು, ಕುಡಿಯಲು ನೀರು ಬೇಕು ಇನ್ನೂ ಮುಂತಾದ ಅನೇಕ ಬೇಡಿಕೆಗಳ ಘೋಷಣೆಗಳನ್ನು ಕೂಗುತ್ತಾ ತಹಶೀಲ್ದಾರ ಕಛೇರಿ ಮುಂದೆ ಸಭೆ ಸೇರಲಾಯಿತು. ಈಸಭೆಯಲ್ಲಿ ಎಸ್.ಎಫ್.ಐ. ರಾಜ್ಯ ಸಮಿತಿ ಸಹ ಕಾರ್ಯದರ್ಶಿ, ಎಲ್. ಮಂಜುನಾಥ್, ಮಾತನಾಡಿದರು. ನಗರ ಸಭಾ ಸದಸ್ಯೆ, ಅಂಬಿಕಾ ಜಾಲಿಗಾರ್ ರವರು ಹೋರಾಟಕ್ಕೆ ಬೆಂಬಲ ನೀಡುತ್ತಾ ಸ್ಥಳೀಯ ಸಮಸ್ಯೆಗಳನ್ನು ನಗರ ಸಭೆ ಮುಖಾಂತರ ಪರಿಹರಿಸಲು ಯತ್ನಿಸಲಾಗುವುದು ಎಂದು ತಿಳಿಸಿದರು. ಶ್ರೀ ಎಸ್. ನರಸಿಂಹಯ್ಯ ಸಹಾಯಕ ಆಯುಕ್ತರು, ಮಾತನಾಡಿ ವಿದ್ಯಾರ್ಥಿಗಳ ಸಮಸ್ಯೆಗಳನ್ನು ಬಗೆ ಹರಿಸಲು ಪ್ರಯತ್ನಿಸುವುದಾಗಿ ಭರವಸೆ ನೀಡಿದರು. ಮತ್ತೊಬ್ಬ ಅಧಿಕಾರಿ ತಹಶೀಲ್ದಾರ್ ಶ್ರೀಬಾಬಣ್ಣ ಮಾತನಾಡುತ್ತಾ, ತಾಲ್ಲೂಕಿನ ಅಧಿಕಾರಿ ಮತ್ತು ಶಾಲಾ ಕಾಲೇಜುಗಳ ಮುಖ್ಯಸ್ಥರ ಜೊತೆ ವಿದ್ಯಾರ್ಥಿ ನಾಯಕರ ಸಮ್ಮುಖದಲ್ಲಿ ಆಗಸ್ಟ್ 3ನೇ ವಾರ ಸಭೆ ನಡೆಸುವುದಾಗಿ ಭರವಸೆ ನೀಡಿದರು. ಕಾಂ.ಕಾಸಿಂ ಅಲಿ. ಅಮೀರ್ ನೀಲಕುಂಠ ಇನ್ನು ಮುಂತಾದವರು ಮಾತನಾಡಿದರು.

ಹರಪನ ಹಳ್ಳಿ

ಸುಮಾರು 300 ವಿದ್ಯಾರ್ಥಿಗಳು ಹರಪನಹಳ್ಳಿಯ ಪ್ರವಾಸಿ ಮಂದಿರದಿಂದ ಹೊರಟು, ಪ್ರಮುಖ ಬೀದಿಗಳ ಮುಖಾಂತರ ತಾಲೂಕು ಕಛೇರಿಗೆ ಹೋಗಿ ತಹಶೀಲ್ದಾರರಿಗೆ, ಅನೇಕ ಬೇಡಿಕೆಗಳನ್ನೊಳಗೊಂಡ ಮನವಿ ಪತ್ರವನ್ನು ನೀಡಲಾಯಿತು. ನಂತರ ವಿದ್ಯಾರ್ಥಿಗಳನ್ನು ದ್ದೇಶಿಸಿ ಎಸ್.ಎಫ್.ಐ.ನ ಸ್ಥಳೀಯ ಸಮಿತಿಯ ಅಧ್ಯಕ್ಷರಾದ ಹೆಚ್.ರೆಹಮತ್ ಉಲ್ಲಾ, ಕಾರ್ಯದರ್ಶಿ, ಕೆ. ಮಹಮದ್ ಅಲಿ ಮಾತನಾಡಿದರು. ಮೆರವಣಿಗೆಯ ನೇತೃತ್ವವನ್ನು ರಾಜಭಕ್ಷಿ ರವಿಶಂಕರ್ ದಂಡಪ್ಪ, ಅಂಜನಪ್ಪ, ಭರಮಪ್ಪ ಶಿವಕುಮಾರರು ವಹಿಸಿದ್ದರು.

ದಾವಣಗೆರೆ

ನಗರದ ಸುಮಾರು 2000ಕ್ಕೂ ಹೆಚ್ಚು ಶಾಲಾ ಕಾಲೇಜು ವಿದ್ಯಾರ್ಥಿಗಳು ಬೃಹತ್ ಪ್ರತಿಭಟನಾತ್ಮಕ ಮೆರವಣಿಗೆಯನ್ನು ನಡೆಸಿ ಅಲ್ಲಿನ ಉಪ ವಿಭಾಗಾಧಿ ಕಾರಿಯವರಿಗೆ ಮನವಿ ಪತ್ರವನ್ನು ಸಲ್ಲಿಸಿ, ಹಲವಾರು ಸ್ಥಳೀಯ ಸಮಸ್ಯೆಗಳನ್ನು ಈಡೇರಿಸದೇ ಹೋದರೆ ನಿರಂತರ ಹೋರಾಟದ ಎಚ್ಚರಿಕೆಯನ್ನು ನೀಡಲಾಯಿತು.

ಎಸ್.ಎಫ್.ಐ. ನ ಚಿತ್ರದುರ್ಗ ಜಿಲ್ಲಾ ಸಮಿತಿ ಸಹ ಸಂಚಾಲಕರಾದ ಕಾಂ. ಕೆ. ಮಹಾಂತೇಶರವರು ಮತ್ತು ಅವರೆಗೆರೆ ಘಟಕದ ಪದಾಧಿಕಾರಿಗಳಾದ ಕಾಂ. ಕೆ.ಎಚ್. ಅಂಜನಪ್ಪ, ನಾಗರಾಜ್ ಮುಂತಾದ ಮುಖಂಡರು ಭಾಗವಹಿಸಿದ್ದರು. ಸ್ಥಳೀಯ ಯುವ ಜನತಾದಳ ಈ ಚಳುವಳಿಗೆ ಬೆಂಬಲ ನೀಡಿತ್ತು.

ಗಂಗಾವತಿ

ನಗರದ ವಿದ್ಯಾನಗರದಿಂದ ಸುಮಾರು 1500 ವಿದ್ಯಾರ್ಥಿಗಳು ತಮ್ಮ ತರಗತಿಗಳನ್ನು ಬಹಿಷ್ಕರಿಸಿ, ಮೆರವಣಿಗೆಯಲ್ಲಿ ಹೊರಟು ಅನೇಕ ಪ್ರಮುಖ ಬೀದಿಗಳನ್ನು ಹಾಯ್ದು ತಮ್ಮ ಸಮಸ್ಯೆಗಳನ್ನು ಈಡೇರಿಸಲು ಒತ್ತಾಯಿಸಲು ಮನವಿ ಪತ್ರವನ್ನು ತಹಶೀಲ್ದಾರರವರಿಗೆ ನೀಡಲಾಯಿತು. ಈಗಾಗಲೇ ಸಲ್ಲಿಸಿದ ಮನವಿ ಪತ್ರದ ಬೇಡಿಕೆಗಳು

ಬೆನಜಿರ್ ಸರ್ಕಾರದ ವಜಾ

ಬೆನಜಿರ್ ಸರ್ಕಾರವನ್ನು ಪಾಕಿಸ್ತಾನದ ಅಧ್ಯಕ್ಷರು ವಜಾ ಮಾಡಿದ್ದಾರೆ. ಅವರು ಕೊಟ್ಟಿರುವ ಕಾರಣ, ಈ ಸರಕಾರ ಸಂಪೂರ್ಣವಾಗಿ ಭ್ರಷ್ಟವಾಗಿತ್ತು ಮತ್ತು ಕಾನೂನು ಮತ್ತು ವ್ಯವಸ್ಥೆ ತೀರಾ ಹದಗೆಟ್ಟಿದೆ ಎಂದು. ಮರುದಿನೆ ನ್ಯಾಷನಲ್ ಅಸೆಂಬ್ಲಿಯಲ್ಲಿ ಬೆನಜಿರ್ ಸರ್ಕಾರ ಅವಿಶ್ವಾಸ ನಿರ್ಣಯ ಎದುರಿಸಬೇಕಾಗಿತ್ತು. ಆತನಕ ಕಾಯುವ ವ್ಯವಧಾನವಿರಲಿಲ್ಲ ಅಧ್ಯಕ್ಷರಿಗೆ . ಇದಲ್ಲದೆ ವಿರೋಧ ಪಕ್ಷದ ನಾಯಕ ಜತೋಯ್ ಅವರನ್ನು ಹಂಗಾಮಿ ಪ್ರಧಾನಿಯಾಗಿ ನೇಮಿಸಿದ್ದಾರೆ. ಅವರನ್ನು ಸರ್ಕಾರ ರಚಿಸಲು ಆಹ್ವಾನಿಸಿದ್ದಾರೆ. ಈ ಎಲ್ಲಾ ಕ್ರಮಗಳು ಪಾಕಿಸ್ತಾನದಲ್ಲಿ ಅಂಬೆಗಾಲಿಡುತ್ತಿದ್ದ ಪ್ರಜಾತಂತ್ರಕ್ಕೆ ಭಾರಿ ಅಪಾಯಕಾರಿ ಹಿನ್ನಡೆ ಎನ್ನುವುದರಲ್ಲಿ ಯಾವುದೇ ಅನುಮಾನವಿಲ್ಲ. ಈ ಎಲ್ಲದರ ಹಿಂದೆ ರಾಜಕೀಯ ಪಾತ್ರವಿಲ್ಲದೆ, ಅಧಿಕಾರವಿಲ್ಲದೆ ಕೈಹಿಸುಕುತ್ತಾ (ಕಳೆದ 20 ತಿಂಗಳುಗಳಲ್ಲಿ) ಕುಳಿತಿರುವ ಮಿಲಿಟರಿ ಜನರಲ್‌ಗಳ ಕೈವಾಡ ಇಲ್ಲದಿಲ್ಲ. ಬೆನಜಿರ್ ಸರ್ಕಾರಿ ಮತ್ತು ಸೈನ್ಯದ ನಡುವೆ ಸಿಂಧ್‌ನ ಕಾನೂನು ಮತ್ತು ವ್ಯವಸ್ಥೆ ಸುಧಾರಿಸುವ ಕ್ರಮದ ಬಗ್ಗೆ ತೀವ್ರ ಭಿನ್ನಾಭಿಪ್ರಾಯಗಳು ತಲೆದೋರಿದ್ದವು. ವಿರೋಧ ಪಕ್ಷಗಳು ಬೆಂಬಲಿಸುತ್ತಿದ್ದ ಶರೀಯತ್ ಕಾನೂನಿನ ವಿರುದ್ಧ ಬೆನಜೀರ್ ದೃಢ ನಿಲುವು ತೆಗೆದುಕೊಂಡದ್ದನ್ನು, ಧಾರ್ಮಿಕ ಮತಾಂಧ ಶಕ್ತಿಗಳು ಸರ್ಕಾರದ ವಿರುದ್ಧ ಕೆಲಸ ಮಾಡುವಂತೆ ಉಪಯೋಗಿಸಲಾಗಿದೆ.

ಅದರ ನಂತರ ಹಂಗಾಮಿ ಸರ್ಕಾರ ತೆಗೆದುಕೊಂಡ ಕ್ರಮಗಳು ಪುಷ್ಟೀಕರಿಸಿವೆ. 90 ದಿನದೊಳಗೆ ಚುನಾವಣೆಗಳನ್ನು ನಡೆಸುವ ಭರವಸೆ ನೀಡಿದ್ದರೂ, PPP ಪಕ್ಷವನ್ನೇ ಅಥವಾ ಬೆನಜೀರ್ ಮತ್ತಿತರ ಹಲವು ಪ್ರಮುಖ ನಾಯಕರನ್ನು ಚುನಾವಣೆಗೆ ನಿಲ್ಲದಂತೆ 'ಕಾನೂನಿ ಕರಾಮತ್ತು'ಗಳನ್ನು ಮಾಡಲಾಗುತ್ತಿದೆ. ಬೆನಜಿ ಸರ್ಕಾರದ ಮತ್ತು ಅದರ ನಿಕಟವರ್ತಿ ಉದ್ಯಮಿಗಳ ವಿರುದ್ಧ ಭ್ರಷ್ಟಾಚಾರದ ವಿಚಾರಣೆ ನಡೆಸಲು ಹಲವು ಆಯೋಗಗಳನ್ನು ನೇಮಿಸಲಾಗಿದೆ.ಈಗಿನ ಕಾನೂನು ಮತ್ತು ವ್ಯವಸ್ಥೆಯ ಪರಿಸ್ಥಿತಿಯನ್ನೇ ನೆಪ ಮಾಡಿಕೊಂಡು (ಹಿಂದೆ ಮಾಡುತ್ತಿದ್ದಂತೆ) ಚುನಾವಣೆಯನ್ನು ಅನಿರ್ದಿಷ್ಟವಾಗಿ ಮುಂದೂಡಿಕೊಂಡು ಹೋಗುವ ಹಳೆಯ ಮಿಲಿಟರಿ ಆಟದ ಹೊಸ ಸಾಧ್ಯತೆಗಳು ಬಹಳ ಇವೆ.

ಬೆನಜಿರ್ ಸರ್ಕಾರ ಮೊದಲಿನಿಂದಲೂ ಅಮೇರಿಕನ್ನರ ಜತೆ, ರಾಜಿಯಿಂದಲೇ ಆರಂಭವಾಯಿತು; ಅದರ ದುರ್ಬಲತೆ, ಪಾಕಿಸ್ತಾನದ ಹಲವು ಜ್ವಲಂತ ಸಮಸ್ಯೆಗಳ ಬಗ್ಗೆ ಗಮನ ಕೊಡುವುದರ ಬಗ್ಗೆ ತೋರಿಸಿದ ವಿಳಂಬ ನೀತಿಯನ್ನು ವಿರೋಧಿಗಳು ಚೆನ್ನಾಗಿಉಪಯೋಗಿಸಿಕೊಂಡಿದ್ದಾರೆ. ವಿರೋಧ ಪಕ್ಷದ ಪ್ರತಿನಿಧಿಯನ್ನು ಅಮೆರಿಕನ್ ಒತ್ತಡದಿಂದಾಗಿ ವಿದೇಶಿ ಮಂತ್ರಿಯಾಗಿ ಒಪ್ಪಿಕೊಂಡು ಸಾಮ್ರಾಜ್ಯಶಾಹಿಗಳ ಜತೆ ರಾಜಿಯಿಂದಲೇ ಸರ್ಕಾರ ಆರಂಭಿಸಿದ ಬೆನಜಿರ್ ಸರ್ಕಾರ, ಪ್ರಮುಖ ಕೋಮು ಸೌಹಾರ್ದತೆ ಕಾಪಾಡುವ ರಾಜಕೀಯ ಕೆಲಸದಲ್ಲೂ ವಿಫಲವಾಯಿತು. ಕಳೆದ ಚುನಾವಣೆಯ ಹೊತ್ತಿಗೆ ರೂಪುಗೊಂಡಿದ್ದ 'ಪ್ರಜಾತಾಂತ್ರಿಕ ಶಕ್ತಿಗಳ ಐಕ್ಯತೆಯನ್ನು PPP ಪಕ್ಷದ ಕ್ಷುಲ್ಲಕ ಸ್ವಾರ್ಥಕ್ಕಾಗಿ ಮುರಿದಿದ್ದು, ಮುಂದೇನೊ ಧಾರ್ಮಿಕ ಸಾಂಪ್ರದಾಯಕ ವಿರೋಧಿಗಳ ವಿರುದ್ಧ ಪ್ರಜಾತಾಂತ್ರಿಕ ಶಕ್ತಿಗಳ ಬಲ ಕ್ರೋಢೀಕರಿಸಲು ಸಾಧ್ಯವಾಗದ್ದು ಬೆನಜಿರ್‌ರ ವೈಫಲ್ಯತೆ. ಈ ತಪ್ಪುಗಳನ್ನು ಹೇಗೆ ಸರಿಪಡಿಸಿಕೊಳ್ಳಲಾಗುತ್ತದೆ.ಎಂಬುದರ ಮೇಲೆ ಪಾಕಿಸ್ತಾನ ಪ್ರಜಾತಂತ್ರ ಅವಲಂಬಿಸಿಕೊಂಡಿದೆ. ಸರ್ಕಾರದ ವಜಾ ವಿರುದ್ಧ ಸುಪ್ರೀಂ ಕೋರ್ಟಿಗೆ ಅಪೀಲ್ ಮಾಡಿಕೊಳ್ಳಲು ಹಾಗೂ ಸರ್ಕಾರಿ ಕಮಿಶನ್‌ಗಳ ಮುಂದೆ ಹಾಜರಾಗಲು ಪಕ್ಷದ PPP ಕಾರ್ಯಕಾರಿ ಸಮಿತಿ ನಿರ್ಧರಿಸಿದೆ.

ಕೊಲ್ಲಿಯಲ್ಲಿ ಅಮೇರಿಕಾದ ಹುನ್ನಾರ

ಇರಾಕ್ ಮೊದಲು ಸೈನ್ಯ ಕುವೈತ್‌ನಿಂದ ತೆರಳುವುದು ಎಂದು ಹೇಳಿದ್ದು, ಆ ಮೇಲೆ ಇರಾಕ್-ಕುವೈತ್ ಒಂದೇ ದೇಶವಾಗಿ ವಿಲೀನವಾಗಿದೆ ಎಂದು ಇರಾಕ್ ಅಧ್ಯಕ್ಷ ಸದ್ದಾಮ್ ಘೋಷಿಸಿದಾದಿರೆ. ಈ ರಾಜಕೀಯ ಪರಿಸ್ಥಿತಿಯ ಸಂಪೂರ್ಣ ದುರ್ಲಾಭ ಅಮೇರಿಕನ್ ಪಡೆಯುತ್ತಿದೆ. ಸೌದಿ ಅರೇಬಿಯಾದ ಮೇಲೆ ಇರಾಕ್ ಆಕ್ರಮಣ ಮಾಡಬಹುದು (ಅದಕ್ಕಾಗಿ ಸಿದ್ಧತೆ ನಡೆಸುತ್ತಿದೆ) ಎಂಬ ಆಪಾದನೆಯ ಆಧಾರದ ಮೇಲೆ, ಸೌದಿ ಅರೇಬಿಯಾದ 'ರಕ್ಷಣೆ' ಗಾಗಿ ತನ್ನ ಸೈನ್ಯ ಕಳಿಸುತ್ತಿದೆ ಎಂದು ಅಧ್ಯಕ್ಷ ಬುಶ್ ಹೇಳಿಕೊಂಡಿದ್ದಾರೆ. ಈ ಹೇಳಿಕೆಯ ಹಲವು ದಿನಗಳ ನಂತರ ಸೌದಿ ಅರೇಬಿಯಾ ಇದು ನಿಜವೆಂದು ಒಪ್ಪಿಕೊಂಡಿದ್ದಾರೆ. ಹೆಚ್ಚುಕಡಿಮೆ ಅಮೇರಿಕದ ಸೈನ್ಯ ಆಗಮಿಸಿದ ನಂತರ ಸೌದಿ ರಾಜ ಅದಕ್ಕೆ 'ಆಹ್ವಾನ' ನೀಡಿದಂತೆ ಕಂಡಿದೆ. ಇರಾಕಿ ಆಕ್ರಮಣದ 'ಆಪತ್ತು' ಸಹ ಅಮೇರಿಕಾದ ಸೈನ್ಯದ ಆಗಮನದ ನಂತರ ಸೌದಿ ರಾಜನಿಗೆ ಕಾಣುತ್ತಿರುವಂತಿದೆ. ಆದರೆ ಅಮೇರಿಕಾದ ನಿಜವಾದ ಉದ್ದೇಶ ಇರಾಕ್‌ನ ಅಧ್ಯಕ್ಷ ಸದ್ದಾಮ್‌ಹುಸೇನನು ಪದಚ್ಯುತಗೊಳಿಸಿ ತನ್ನ ಕೈಗೊಂಬೆ ಸರ್ಕಾರವನ್ನು ಮಿಲಿಟರಿ ಹಸ್ತಕ್ಷೇಪದ ಮೂಲಕ ತರುವುದು.

ಈ ಬಿಕ್ಕಟ್ಟಿನ ದುರ್ಲಾಭ ಪಡೆದು ಅಮೇರಿಕ ಕೊಲ್ಲಿಯಲ್ಲಿ ತನ್ನ ಮಿಲಿಟರಿ ಬಲ ಸ್ಥಾಪಿಸಲು ಎಲ್ಲಾ ಕಾರ್ಯಾಚರಣೆ ಕೈಗೊಂಡಿದೆ. ಮೂರು ಭಾರಿ ದೊಡ್ಡ ಯುದ್ಧ ಹಡಗುಗಳ ಗುಂಪುಗಳಲ್ಲದೆ, ಭೂಸೈನ್ಯ ಮತ್ತು ವಾಯುಸೈನ್ಯದ ಭಾರಿ ತುಕಡಿಗಳನ್ನು ಸೌದಿ ಅರೇಬಿಯಾದಲ್ಲಿ, ಇರಾಕ್ ಗಡಿಯಲ್ಲಿ ಸಜ್ಜುಗೊಳಿಸಿದೆ. ಈ ಪ್ರತಿಯೊಂದು ಭಾರಿ ಯುದ್ಧದ ಹಡಗು ಪಡೆ ಭಾರತದ ಇಡೀ 'ನೌಕಾಸೈನ್ಯದ ಸೈನಿಕ ಸಾಮರ್ಥ್ಯ ಇರುವಂತಹದ್ದು. ಎಲ್ಲಾ ಮಿಲಿಟರಿ ತಯಾರಿ ಪೂರ್ಣವಾದಾಗ ಸುಮಾರು ಎರಡುವರೆ ಲಕ್ಷ ಅಮೇರಿಕನ್ ಸೈನ್ಯ ಕೊಲ್ಲಿಯಲ್ಲಿರುತ್ತದೆ ಎಂದು ಅಂದಾಜು ಮಾಡಲಾಗಿದೆ. ಇದು ವಿಯೇತ್ನಾಂ ಯುದ್ಧದ ನಂತರ ಅಮೇರಿಕಾದಲ್ಲೆ ಅತ ದೊಡ್ಡ ಮಿಲಿಟರಿ ಕಾರ್ಯಾಚರಣೆಗೆ ಸಿದ್ಧತೆ ಎನ್ನಲಾಗಿದೆ. ಅಮೇರಿಕ ಸೌದಿ ಅರೇಬಿಯಾದ'ರಕ್ಷಣೆ' ಯ ನೆಪದಲ್ಲಿ ಆಕ್ರಮಣ ನಡೆಸಿದರೆ ಪ್ರತೀಕಾರ ಮಾಡಲು ಎಲ್ಲಾ ಕ್ರಮಗಳನ್ನು ಕೈಗೊಂಡಿರುವುದಾಗಿ ಸದ್ದಾಮ್ ಹುಸೇನ್ ಎಚ್ಚರಿಸಿದ್ದಾರೆ.

> **ಲೋಕಸಂಚಾರ**
>
> ಪಾಕಿಸ್ತಾನದಲ್ಲಿ, ಬೆನಜಿರ್ ಸರ್ಕಾರವನ್ನು ವಜಾ ಮಾಡುವ ಮೂಲಕ, ಅಧ್ಯಕ್ಷರು ಆ ದೇಶದಲ್ಲಿ, ಪ್ರಜಾಪ್ರಭುತ್ವದ ಪ್ರಗತಿಯ ಸ್ಥಗಿತತೆಗೆ ಕಾರಣರಾಗಿದ್ದಾರೆ. ಇರಾಕ್-ಕುವೈತ್ ಒಂದೇ ದೇಶವೆಂದು ಅಧ್ಯಕ್ಷ ಸದ್ದಾಮ್ ಹುಸೇನ್ ಘೋಷಿಸಿರುವ ಹಿನ್ನೆಲೆಯಲ್ಲಿ, ಅಮೇರಿಕ ಈ ಸಂದರ್ಭವನ್ನು ಸಂಪೂರ್ಣವಾಗಿ ದುರುಪಯೋಗಿಸಿಕೊಂಡು ವಿಯೆಟ್ನಾಂ ಯುದ್ಧದ ನಂತರ ಅತ್ಯಂತ ದೊಡ್ಡ ಮಿಲಿಟರಿ ಕಾರ್ಯಾಚರಣೆ ಎನ್ನಲಾದ ಕಾರ್ಯಾಚರಣೆಗೆ ಸಿದ್ಧವಾಗುತ್ತಿದೆ. ದಕ್ಷಿಣ ಆಫ್ರಿಕಾ ಸರ್ಕಾರ ಮತ್ತು ANC ನಡುವೆ ಮಾತುಕತೆಗಳು ನಡೆದಿದ್ದು, ಸಧ್ಯಕ್ಕೆ ಸಶಸ್ತ್ರ ಹೋರಾಟ ಸ್ಥಗಿತಗೊಳಿಸುವ ಭರವಸೆ ನೀಡಿದೆ.

ಈ ನಡುವೆ ವಿಶ್ವಸಂಸ್ಥೆಯ ಭದ್ರತಾಸಮಿತಿ ಇರಾಕ್‌ನ ಕ್ರಮವನ್ನು ಖಂಡಿಸಿದ್ದು, ಅದು ಕುವೈತ್‌ನಿಂದ ಬೇಷರತ್ತಾಗಿ ವಾಪಾಸಾಗಬೇಕು. ಇಲ್ಲದಿದ್ದಲ್ಲಿ ಆರ್ಥಿಕ, ವ್ಯಾಪಾರ, ಮಿಲಿಟರಿ ದಿಗ್ಬಂಧನ ವಿದಿಸಬೇಕೆಂದಿದೆ. ಅಮೇರಿಕದ ಮಿಲಿಟರಿ ಹುನ್ನಾರ ವನ್ನು, ಮಿಲಿಟರಿ ಮಧ್ಯಪ್ರವೇಶವನ್ನು ವಿರೋಧಿಸುತ್ತಾ ಸೋವಿಯೆತ್ ಒಕ್ಕೂಟ ವಿಶ್ವಸಂಸ್ಥೆಯ ನಿರ್ಣಯ ಜಾರಿಗೊಳಿಸಲು, ವಿಶ್ವಸಂಸ್ಥೆಯ ಪಡೆಗಳನ್ನು ಉಪಯೋಗಿಸಬೇಕು. ಅದು ಅಮೇರಿಕದ ಜವಾಬ್ದಾರಿಯೂ ಅಲ್ಲ. ಕೆಲಸವು ಅಲ್ಲ ಎಂದಿದೆ. ಇಂತಹ ವಿಶ್ವಸಂಸ್ಥೆಯು ಪಡೆಗೆ ತಾನು ಸಹಾಯ ಮಾಡುವುದಾಗಿ ಹೇಳಿದೆ. ಅರಬ್ ದೇಶಗಳು ಈ ಬಿಕ್ಕಟ್ಟಿಗೆ ಪರಿಹಾರ ಕಂಡುಹಿಡಿಯುವ ಪ್ರಯತ್ನದಲ್ಲಿ ತನ್ನ ಬೆಂಬಲ ವ್ಯಕ್ತಪಡಿಸಿದೆ. ಅನಂತರ ಸೇರಿದ 121 ದೇಶಗಳ ಅರಬ್ ಲೀಗ್ ಸಭೆಯಲ್ಲಿ ಇರಾಕ್-ಕುವೈತ್ ವಿವಾದದ ಬಗ್ಗೆ ಏನೂ ಇತ್ಯರ್ಥ ಮಾಡಲು ಸಾಧ್ಯವಾಗಿಲ್ಲ. ಆದರೆ ಸೌದಿ ಅರೇಬಿಯಾದ ಮೇಲೆ ಇರಾಕ್ ಆಕ್ರಮಣ ಮಾಡಿದರೆ, ಸೌದಿ ರಕ್ಷಣೆಗೆ ಅರಬ್ ಬಹುರಾಷ್ಟ್ರೀಯ ಪಡೆಗಳನ್ನು ಕಳುಹಿಸಬೇಕೆಂಬ ನಿರ್ಣಯಕ್ಕೆ 12 ದೇಶಗಳು ಬೆಂಬಲ ನೀಡಿದವು. ಇರಾಕ್, ಲಿಬ್ಯಾ, ಪ್ಯಾಲೆಸ್ತೀನ್ ಇದನ್ನು ವಿರೋಧಿಸಿದರೆ ಅಲ್ಜೀರಿಯಾ, ಯೆಮೆನ್ ಮತನೀಡಿಕೆಯಲ್ಲಿ ಭಾಗವಹಿಸಲಿಲ್ಲ. ಜೋರ್ಡಾನ್, ಸುಡಾನ್, ಮಾರಿಟಾನಿಯಾಗಳು ನಿರ್ಣಯಕ್ಕೆ ಮತಕ್ಕೆ ನೀಡಿದರೂ ತಮ್ಮ ಕೆಲವು ಆಕ್ಷೇಪಣೆಗಳನ್ನು ಎತ್ತಿದವು. ಈ ನಿರ್ಣಯದ ಮೇಲೂ ಈಜಿಪ್ಟ್ ಬಿಟ್ಟರೆ ಬೇರೆ ಯಾವ ದೇಶವೂ ಈವರೆಗೆ ಸೈನ್ಯವನ್ನು ಕಳಿಸಿಲ್ಲ. ಅಮೇರಿಕಾದ ಮನವಿಯ ಮೇರೆಗೆ ಅದರ ನಾಟೋಮಿತ್ರರು ಮಿಲಿಟರಿ ನೆಲೆಗಳ ಸೌಕರ್ಯ ನೀಡುವುದು ಬಿಟ್ಟು, ಬಹುರಾಷ್ಟ್ರೀಯ ಸೈನ್ಯಗಳಲ್ಲಿ ಭಾಗವಹಿಸಲು ಒಪ್ಪಿಲ್ಲ. ಬ್ರಿಟನ್ ಮಾತ್ರ ಇದಕ್ಕೆ ಅಪವಾದ. ತನ್ನ ಸದಸ್ಯ ದೇಶಗಳಲ್ಲಿ ಬಿಟ್ಟು ಬೇರೆ ಕಡೆ ಯುದ್ಧದಲ್ಲಿ ತೊಡಗದಿರುವುದು ತನ್ನ ನೀತಿ ಎಂದಿದೆ.

ಇನ್ನೊಂದು ಬದಿ ಇರಾಕಿ ಅಧ್ಯಕ್ಷರ 'ಅಮೇರಿಕನ್‌ರ ಮತ್ತು ಪಾಶ್ಚಿಮಾತ್ಯರ ವಿರುದ್ಧ ಧರ್ಮಯುದ್ಧದ' ಕರೆಗೆ ಬೆಂಬಲಾರ್ಥವಾಗಿ ಹಲವು ಅರಬ್‌ದೇಶಗಳಲ್ಲಿ ಪ್ರದರ್ಶನಗಳು ನಡೆದಿವೆ. ಇರಾಕ್‌ನ ಕ್ರಮವನ್ನು ಒಪ್ಪದ ಅರಬ್‌ದೇಶಗಳ ಸಾರ್ವಜನಿಕ ಅಭಿಪ್ರಾಯ ಸಹ ಅಮೇರಿಕದ ಮಿಲಿಟರಿ ಹಸ್ತಕ್ಷೇಪವನ್ನು ಒಪ್ಪುವುದಿಲ್ಲ. ವಿಶ್ವಸಂಸ್ಥೆಯ ನಿರ್ಣಯದ ಪ್ರಕಾರ ದಿಗ್ಬಂಧನ ಜಾರಿ ಬಗ್ಗೆ, ಅರಬ್ ಅಭಿಪ್ರಾಯ ಇದು ಮಲತಾಯಿ ಧೋರಣೆ ಎಂದು ಪರಿಗಣಿಸುತ್ತದೆ. ಹಿಂದೆ ಇಸ್ರೇಲ್ ತನ್ನ ಸೈನ್ಯವನ್ನು (ಹಲವು ಸಂದರ್ಭಗಳಲ್ಲಿ) ಗಾಝಾ, ಪಶ್ಚಿಮದಂಡೆ ಮತ್ತು ಗೋಲನ್ ದಕ್ಷಿಣ ಲೆಬನಾನ್-ಈ ಪ್ರದೇಶಗಳಿಂದ ಹಿಂತೆಗೆಯಬೇಕೆಂಬ ನಿರ್ಣಯವನ್ನು ಜಾರಿಗೊಳಿಸಲು ಅಂತರಾಷ್ಟ್ರೀಯ ದಿಗ್ಬಂಧನದ ಪ್ರಯತ್ನ ಮಾಡಲಿಲ್ಲ. ತುರ್ಕಿ ಸೈಪ್ರಸ್‌ನ ಮೇಲೆ ಆಕ್ರಮಣ ನೀಡಿದಾಗ ವಿಶ್ವಸಂಸ್ಥೆಯ ನಿರ್ಣಯವೂ ಈವರೆಗೆ ಜಾರಿ ಬಂದಿಲ್ಲ.

ಇದೀಗ ಜಗತ್ತು ಕೊಲ್ಲಿ ಬಿಕ್ಕಟ್ಟು ಯುದ್ಧವಾಗಿ ಪರಿವರ್ತನೆಯಾಗುವುದೋ ಎಂದು ಕಾತರ, ಆತಂಕದಿಂದ ಉಸಿರು ಬಿಗಿಹಿಡಿದಿರುವ ಹಾಗೆ, ಅಂತರಾಷ್ಟ್ರೀಯ ಘರ್ಷಣೆಗಳನ್ನು ನಿವಾರಿಸುವ ಶಕ್ತಿ ವಿಧಾನವೇನಾದರೂ ಈ ಬಿಕ್ಕಟ್ಟಿನಿಂದ ಉದ್ಧರಿಸಬಹುದೋ ಎಂದು ಅಷ್ಟೆ ಕಾತುರದಿಂದ ಕಾಯುತ್ತಿದ್ದಾರೆ.

ANC ಸಶಸ್ತ್ರ ಹೋರಾಟ ಸ್ಥಗಿತಕ್ಕೆ ಒಪ್ಪಂದ

ಇತ್ತೀಚೆಗೆ ದಕ್ಷಿಣ ಆಫ್ರಿಕಾದ ಸರ್ಕಾರದ ಜತೆ ಮಾತುಕತೆ ನಡೆಸಿದ ANC ಯ ನಿಯೋಗ ಸಶಸ್ತ್ರ ಹೋರಾಟ ಸ್ಥಗಿತ ಮಾಡುವ ಆಶ್ವಾಸನೆ ನೀಡಿದೆ. ಆದರೆ ವರ್ಣಭೇದ ನೀತಿಯ ವಿರುದ್ಧ ಸತತ ಪ್ರಚಾರ ಮುಂದುವರಿಯುವುದು ಎಂದು ಸ್ಪಷ್ಟಪಡಿಸಿದೆ. ಇದಕ್ಕೆ ಬದಲಾಗಿ ದ.ಆಫ್ರಿಕಾ ಸರ್ಕಾರ ಇನ್ನೂ ಉಳಿದಿರುವ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡುವ, ರಾಜಕೀಯ ಕಾರಣಗಳಿಗಾಗಿ ದೇಶ ತ್ಯಾಗ ಮಾಡಿರುವವರಿಗೆ ದೇಶಕ್ಕೆ ಹಿಂತಿರುಗಲು ನಿಷೇಧವನ್ನು ತೆಗೆದುಹಾಕುವ ಬಗ್ಗೆ ಭರವಸೆ ನೀಡಿದೆ. ರಾಜಕೀಯ ಚಟುವಟಿಕೆಯನ್ನು ಮೊಟಕುಗೊಳಿಸುವ ಆಂತರಿಕ ಭದ್ರತಾ ಶಾಸನ ಮತ್ತು ನಾಟಾಲ್‌ನಲ್ಲಿ ತುರ್ತುಪರಿಸ್ಥಿತಿ ತೆಗೆದುಹಾಕುವುದನ್ನು ಪರಿಶೀಲಿಸಲು ಒಪ್ಪಿದೆ. ಈ ಒಪ್ಪಂದದಿಂದಾಗಿ, ವರ್ಣಭೇದ ನಿರ್ಮೂಲನದ ನಂತರದ ಸಂವಿಧಾನದ ಬಗ್ಗೆ ಮಾತುಕತೆ ಆರಂಭಿಸಲು ಅನುವಾಗಿದೆ.

ಅಮೇರಿಕ ಆಂತರಿಕ ಸಾಲದ ಜಾಲದಲ್ಲಿ

ಜಗತ್ತಿನ ಅತ್ಯಂತ ಬಲಿಷ್ಠ ದೇಶ ಅಮೇರಿಕದ ಸರ್ಕಾರ ಅತ್ಯಂತ ದೊಡ್ಡ ಸಾಲಗಾರ ತನ್ನ ದೇಶದೊಳಗೆ, ಅದೂ ದೀವಾಳಿಯ ಅಂಚಿನಲ್ಲಿರುವಂತಹದು ಎಂದರೆ ಯಾರಾದರೂ ನಂಬಬಹುದೇ? ಇದು ವಿಚಿತ್ರ ಆದರೂ ನಿಜ. ಅಮೇರಿಕಾದ ಆಂತರಿಕ ಸಾಲದ ಹೊರೆ ಸುಮಾರು ಮೂರು ಲಕ್ಷ ಕೋಟಿ ಡಾಲರುಗಳನ್ನು ಮೀರಿದೆ. ಈ ಸಾಲ ಕಳೆದ ಹತ್ತು ವರ್ಷಗಳಲ್ಲಿ ಮೂರು ಪಟ್ಟು ಆಗಿದೆ. ಈ ಸಾಲ ತಾರದಿದ್ದರೆ ಸರ್ಕಾರದ ಬಳಿ, ಯಾವುದೇ ಹಣ ತೆರಲು ಹಣವೇ ಇರುವುದಿಲ್ಲ. ಅದರಲ್ಲೂ ಪೆನ್‌ಶನ್‌ಗಳು, ಇತರ ಸಾಮಾಜಿಕ ಭದ್ರತಾ ಸೇವೆಗಳಿಗೆ ಬೇಕಾದ ಹಣವಿಲ್ಲದೆ ಬಡವರು ಹಾಹಾಕಾರ ಮಾಡಬೇಕಾಗುತ್ತದೆ.

ಪ್ರಜಾಪ್ರಭುತ್ವ - ಸಿಂಗಾಪೂರ್ ಶೈಲಿ

ಸಿಂಗಾಪುರದ ಪ್ರಧಾನ ಮಂತ್ರಿ ಲೀಕುವಾನ್ ಯಾಗೆ ಎರಡೂವರೆ ಲಕ್ಷ ಸಿಂಗಾಪೂರ್ ಡಾಲರ್ (25 ಲಕ್ಷ ರೂಪಾಯಿ) ನಷ್ಟ 'ದಂಡವನ್ನು ವಿರೋಧಿ ಪಕ್ಷ 'ಕಾರ್ಮಿಕ ಪಕ್ಷ' ದ ನಾಯಕ ಬಿ.ಜೆ.ಜಯರತ್ನಂ ತೆರಬೇಕೆಂದು ಅಲ್ಲಿನ ಹೈಕೋರ್ಟ್ ಆಜ್ಞೆ ಮಾಡಿದೆ. ಭ್ರಷ್ಟಾಚಾರದ ಆಪಾದನೆ ಹೊತ್ತಿದ್ದ ಮಾಜಿ ಬೆಳವಣಿಗೆ ಮಂತ್ರಿಯವರು ಆತ್ಮಹತ್ಯೆ ಬಗ್ಗೆ ಜಯರತ್ನಂ ಚುನಾವಣಾ ರ್‍ಯಾಲಿಯೊಂದರಲ್ಲಿ ಪ್ರಸ್ತಾಪಿಸಿದ್ದು ಈ ಬಗ್ಗೆ ಪ್ರಧಾನ ಮಂತ್ರಿಗಳು ಜಯರತ್ನಂರನ್ನು ಕೋರ್ಟ್‌ಗೆಳೆದಿದ್ದರು. ಪ್ರಧಾನಿಯ ವಕೀಲರು ಆ ಮಂತ್ರಿಗೆ ಆಪಾದನೆ ತಪ್ಪಿಸಿಕೊಳ್ಳಲು ಆತ್ಮಹತ್ಯೆ ಮಾಡಿಕೊಳ್ಳುವಂತೆ ಪ್ರಧಾನಿ ಸೂಚಿಸಿದ್ದಾರೆ ಎಂಬ 'ಅರ್ಥ' ಬರುವಂತೆ ಜಯರತ್ನಂ ಭಾಷಣ ಮಾಡಿದರು ಎಂಬ ವಾದವನ್ನು ಜಡ್ಜ್ ಎತ್ತಿಹಿಡಿದಿದ್ದಾರೆ. ಜಯರತ್ನಂ ಆಪಾದನೆಯನ್ನು ನಿರಾಕರಿಸಿ. ಇದು ಅವರ 'ನಿರೂಪಣೆ' ಎಂದಿದ್ದಾರೆ. ಆಹಾ ಮೂರನೆಯ ಜಗತ್ತಿನ 'ಮಾದರಿ

ಪರಿಹರಿಸುವಂತೆ ಒತ್ತಾಯಿಸಲಾಯಿತು. ಆಗಸ್ಟ್ 28ರಂದು ಬೇಡಿಕೆಗಳ ಸಂಪೂರ್ಣ ಈಡೇರಿಕೆಗಾಗಿ ಬೆಂಗಳೂರು ಚಲೋ ಕಾರ್ಯಕ್ರಮಕ್ಕೆ ಅಣಿಯಾಗುವಂತೆ ವಿದ್ಯಾರ್ಥಿಗಳಿಗೆ ಕಾಂ. ಚಂದ್ರಪ್ಪನವರು ಕರೆ ನೀಡಿದರು.

ಭಟ್ಕಳ

ಅಂಜುಮಾನ ಕಾಲೇಜಿನ ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸಿ ಬೃಹತ್ ಮೆರವಣಿಗೆಯೊಂದಿಗೆ ನಗರದ ಪ್ರಮುಖ ಬೀದಿಗಳನ್ನು ಘೋಷಣೆ ಕೂಗುತ್ತಾ ನಂತರ ತಹಸೀಲ್ದಾರರಿಗೆ ಬೇಡಿಕೆ ಗಳನ್ನೊಳಗೊಂಡ ಮನವಿ ಪತ್ರವನ್ನು ನೀಡಲಾಯಿತು.

ಮೆರವಣಿಗೆಯ ನೇತೃತ್ವವನ್ನು ಎಸ್.ಎಫ್.ಐ. ಉ.ಕ. ಜಿಲ್ಲಾ ಅಧ್ಯಕ್ಷ ಸುಭಾಸಕೊಪ್ಪಿಕರ, ಸಹ ಕಾರ್ಯದರ್ಶಿ ವಿಠ್ಠಲಭಂಡಾರಿ, ವಿದ್ಯಾರ್ಥಿ ನಾಯಕರುಗಳಾದ ವಸೀವುಲ್ಲಾ ಶೇಖ, ನಾಗರಾಜ ಶೆಟ್ಟಿ, ದೀಪಕ ನಾಯ್ಕ, ಸಂತೋಷ ನಾಯ್ಕ ವಹಿಸಿದ್ದರು. ಹೊನ್ನಾವರದ ಜಗದೀಶ್ ಭಾವೆ ಸಹ ಚಳುವಳಿಯಲ್ಲಿ ಭಾಗವಹಿಸಿದ್ದರು. ಕೊನೆಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಜಿಲ್ಲಾಧ್ಯಕ್ಷ

ಸುಭಾಸಕೊಪ್ಪಿಕರ ಮತ್ತು ವಿಠ್ಠಲಭಂಡಾರಿ ಪ್ರಸ್ತುತ ಚಳುವಳಿಯ ಉದ್ದೇಶ ಮತ್ತು ರಾಜ್ಯ ಸಮಿತಿಯ ಮುಂದಿನ ಹಂತದ ಕಾರ್ಯಕ್ರಮಗಳ ಬಗ್ಗೆ ತಿಳಿಸಿದರು.

ಅಂಗನವಾಡಿ ಶಾಲೆಯ ಪ್ರಾರಂಭೋತ್ಸವ

ಅಖಿಲಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ರಾಜಗೋಪಾಲ ನಗರ ಘಟಕದ ಶ್ರಮದ ಫಲವಾಗಿ ಅಂಗನವಾಡಿ ಶಾಲೆಯು ಪ್ರಾರಂಭಗೊಂಡು, ಇದರ ಪ್ರಾರಂಭೋತ್ಸವವನ್ನು ದಿ.16-7-90ರಂದು ನಡೆಸಿ, ಆ ನಂತರ ಬಹಿರಂಗಸಭೆಯನ್ನು ಏರ್ಪಡಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಸಮಿತಿ ಸಂಚಾಲಕಿಯಾದ ಕಾಂ. ಶಾಂತಕುಮಾರಿಯವರು ವಹಿಸಿದ್ದರು. ಉದ್ಘಾಟನಾ ಭಾಷಣ ಮಾಡಿದ ಸಮಗ್ರ ಬಾಲವಿಕಾಸ ಯೋಜನಾಧಿಕಾರಿ ಅಂಜನ ಕುಮಾರ್, ಮಹಿಳೆಯರಿಂದ ಆಗುತ್ತಿರುವ ಅನುಕೂಲತೆಗಳನ್ನು ವಿವರಿಸಿದರು. ರಾಜ ಗೋಪಾಲನಗರದ ಕ್ಷೇಮಾಭಿವೃದ್ಧಿ ಸಂಘದ ಕಾರ್ಯದರ್ಶಿ ಎನ್.ವಿ. ಸುಬ್ಬಯ್ಯನವರು ಶುಭಕೋರಿ ಮಾತನಾಡಿದರು. ಪೀಣ್ಯ ಪಂಚಾಯತಿ ಕಾರ್ಯದರ್ಶಿಯಾದ ಕೆ.ವೆಂಕಟೇಶರವರು ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ಸಭೆಗೆ, ಮಾಜಿ ಭೂನ್ಯಾಯ ಮಂಡಳಿ ಸದಸ್ಯರಾದ ಬಿ.ಬಿ.ವಿ.ರಾಜು ಹಾಗೂ ಶ್ರೀಮತಿವಿನೋದ ಭಗಿನಿ ಅತಿಥಿಗಳಾಗಿ ಭಾಗವಹಿಸಿದ್ದರು.

ಕೆನರಾ ಬ್ಯಾಂಕಿನ ಕೆ.ಎಲ್.ರಾವ್‌ರವರು 2000 ರೂ.ಗಳ ವಸ್ತುಗಳನ್ನು ಶಾಲೆಗಾಗಿ ನೀಡಿದರು. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾರವರು ಮಕ್ಕಳಿಗೆ 100 ಸ್ಲೇಟುಗಳನ್ನು ವಿತರಿಸಿದರು.

ಪ್ರಾರಂಭದಲ್ಲಿ ಶಾರದಮ್ಮ ಸ್ವಾಗತಿಸಿ, ಸರೋಜಮ್ಮ ವಂದನೆ ಸಲ್ಲಿಸಿದರು.

ಸ್ಥಳೀಯ ಸಮಸ್ಯೆಗಳ ಪರಿಹಾರಕ್ಕೆ ಆಗ್ರಹ

ಡಿ.ವೈ.ಎಫ್.ಐ. ಸುಳ್ಯ ತಾಲ್ಲೂಕು ಸಮಿತಿಯ ವತಿಯಿಂದ ತಾರೀಖು 30-7-90ರಂದು ಸುಳ್ಯ ತಾಲ್ಲೂಕಿನ ಸ್ಥಳೀಯ ಸಮಸ್ಯೆಗಳಾದ, ಸಮರ್ಪಕ ಪಡಿತರ ವಿತರಣೆ, ಪಡಿತರ ಕಡಿತವನ್ನು ನಿಲ್ಲಿಸುವುದು, ರೇಷನ್‌ಚೀಟಿವಿತರಣೆಯನ್ನು ತಡೆಗಟ್ಟುವುದು ಶಾಲಾ ಕಟ್ಟಡದ ನಿರ್ಮಾಣ, ಶಾಲೆಗೆ ಬೇಕಾದ ಪಠ್ಯೋಪಕರಣದ ಅವಶ್ಯಕತೆ, ಪಠ್ಯಪುಸ್ತಕದ ವಿತರಣೆಯ ವಿಳಂಬ ನೀತಿ, ರಸ್ತೆಗಳ ದುರಸ್ತಿ, ವಿದ್ಯುತ್ ಶಕ್ತಿ ನಿಲುಗಡೆ, ಮುಂತಾದ ಸಮಸ್ಯೆಗಳನ್ನು ಪರಿಹರಿಸಲು ಆಗ್ರಹಿಸಿ, ತಾಲ್ಲೂಕಿನ ತಹಸೀಲ್ದಾರರಿಗೆ ಮನವಿಯನ್ನು ಅರ್ಪಿಸಲಾಯಿತು.

KRNM/BGS-312 MAG (2) PRB DECR 319-78/79

ಜನರ ಬೇಸರ ಸಿಟ್ಟಾಗಿ ಎರಗಬಹುದು

ಪುಟ 1 ರಿಂದ

ವಾಗಿ ಸ್ವೈಚ್ಛಿಕ ಪ್ರಕ್ರಿಯೆಯೊಂದರ ಪೂರ್ಣ ಲಾಭ ಸೂರೆಗೊಳ್ಳಲು ಹವಣಿಸುತ್ತಿರುವ ರಾಜಕೀಯ ಪಕ್ಷಗಳಿಗೆ ಈ ಪ್ರಶ್ನೆ ಸದಾ ರಾಷ್ಟ್ರೀಯ ರಂಗ ಸರಕಾರದ ತಲೆಯ ಮೇಲೆ ತೂಗುತ್ತಿರುವ ಕತ್ತಿಯಾಗಿರುವುದು ಬೇಕಾಗಿದೆ. ಅತ್ತ ಹಿಂದೂ ಕೋಮುವಾದದ ಅವಳಿಯಂತಿರುವ ಮುಸ್ಲಿಂ ಲೀಗ್ ಅಷ್ಟೇ ಗಂಭೀರ ಕೋಮು ಪ್ರಶ್ನೆಗಳನ್ನು ಎತ್ತುತ್ತಿದೆ. ಮುಸ್ಲಿಂ ಮಹಿಳಾ ಶಾಸನಕ್ಕೆ ತಿದ್ದುಪಡಿ ತರಬೇಕೆಂದು ಒತ್ತಾಯಿಸುತ್ತಿದೆ.

ಇವೆಲ್ಲಾ ದೇಶಕ್ಕೆ, ಜನತೆಗೆ ವಿನಾಶ ತರಬಾರದೆಂದಿದ್ದರೆ ತಕ್ಷಣ ಪರಿಹಾರದತ್ತ ಗಮನಹರಿಸಬೇಕಾದ ಪ್ರಶ್ನೆಗಳು. ನಿಜ ಇವೆಲ್ಲ ರಾಷ್ಟ್ರೀಯರಂಗ ಸರ್ಕಾರ ಕಾಂಗ್ರೆಯಿಂದ ಪಡೆದ ಬಳುವಳಿ. ಆದರೆ ಇವನ್ನೆಲ್ಲಾ ಪರಿಹರಿಸಲು ಪ್ರಾಮಾಣಿಕ ಪ್ರಯತ್ನ ನಡೆಸುವದಾಗಿ ರಾಷ್ಟ್ರೀಯ ರಂಗ ಜನತೆಗೆ ಆಶ್ವಾಸನೆ ನೀಡಿದೆ. ಭರವಸೆ ಕೊಟ್ಟದೆ ಎಂಬುದನ್ನು ಮರೆಯುವಂತಿಲ್ಲವಲ್ಲ. ಸರಕಾರ ಈ ದಿಕ್ಕಿನಲ್ಲಿ ಪ್ರಯತ್ನವನ್ನಾದರೂ ನಡೆಸಿದೆಯೇ ಎಂಬ ಸೂಚನೆಗಳಾದರೂ ಜನರಿಗೆ ಕಾಣ ಬೇಕಲ್ಲವೇ? ಬದಲಿಗೆ ಜನ ಕಾಣುತ್ತಿರುವುದು - ಈ ಕೆಲವು ಸಮಸ್ಯೆಗಳು ಇನ್ನಷ್ಟು ಉಲ್ಬಣಗೊಂಡಿರುವುದನ್ನು.

ಇದು ರಾಷ್ಟ್ರೀಯ ರಂಗ ಸರಕಾರದಲ್ಲಿ ತೀವ್ರ ಆತಂಕ, ಆತ್ಮ ನಿರೀಕ್ಷಣೆ ಉಂಟುಮಾಡಬೇಕಿತ್ತಲ್ಲವೇ? ಸಮಾಲೋಚನೆ, ನಿರ್ಣಯ, ಕಾರ್ಯಾಚರಣೆಗೆ ಅವರನ್ನು ಇಳಿಸಬೇಕಿತ್ತಲ್ಲವೇ? ಆದರೆ ನಾವು ಕಳೆದ ಎರಡು ತಿಂಗಳಲ್ಲಿ ಭಾರತದ ರಾಜಕೀಯ ರಂಗಸ್ಥಳದಲ್ಲಿ ಕಂಡದ್ದೇನು? ಹೇಸಿಗೆಯುಂಟುಮಾಡುವ ಕೃತ್ಯಗಳನ್ನು. ಮೇಹಂ ಚುನಾವಣೆಯ ಹತ್ಯಾಕಾಂಡದಿ-ದ ಹಿಡಿದು ಸ್ವತಃ ಪ್ರಧಾನ ಮಂತ್ರಿಗಳ ರಾಜೀನಾಮೆವರೆಗಿನ ಘಟನಾವಳಿ.

ರಾಷ್ಟ್ರೀಯ ರಂಗವೊಂದು ಅಲ್ಪಮತದ ಸರಕಾರ. ಆದರೆ ಈ ಎಲ್ಲಾ ಘಟನೆಗಳು ನಡೆಯುತ್ತಿದ್ದಾಗ ಬೆಂಬಲ ನೀಡಿದ ಮಿತ್ರಪಕ್ಷಗಳಿಗೆ ಈ ಬಗ್ಗೆ, ತಾವು ಬೆಂಬಲಿಸುವ ಸರಕಾರದ ಮುಂದುವರಿಕೆಗೆ ಅಪಾಯ ತಂದಿದ್ದ ಘಟನೆಗಳ ಬಗ್ಗೆ ತಿಳಿಸುವುದು ಅಗತ್ಯ ಎಂದು ಸರಕಾರ ಭಾವಿಸಲಿಲ್ಲ. ಅತ್ಯಂತ ನಿರಾಶೆಯ, ಬೇಸರದ ಸಂಗತಿಯಿದು. ಮಿತ್ರ ಪಕ್ಷಗಳ ಪ್ರಯತ್ನದಿಂದ ಈ ಬಿಕ್ಕಟ್ಟು ಪರಿಹಾರವಾಯಿತೆಂದಾಗ ಉಪಪ್ರಧಾನಿ ಒಂದು ಸುಳ್ಳು ಪತ್ರವನ್ನು ಪ್ರಧಾನಿಗೆ ಕಳಿಸಿದ ಅಸಹ್ಯ ಘಟನೆ. ಒಂದು ವಾರ ಕಳವಳವುಂಟುಮಾಡಿದ ಸಂಗತಿ.

ಈ ಎಲ್ಲಾ ಅವಧಿಯಲ್ಲಿ ಈ ಸರಕಾರ ಅಧಿಕಾರದಲ್ಲಿ ಮುಂದುವರಿಯುವಂತೆ ಮಾಡಲು ಎಡಪಕ್ಷಗಳು ಪ್ರಾಮಾಣಿಕ ಪ್ರಯತ್ನ ನಡೆಸಿದವು. ಇದಕ್ಕೆ ಕಾರಣವಿಲ್ಲದಿಲ್ಲ. ಏಕೆಂದರೆ ಹಾಗೆ ಮಾಡಿರದಿದ್ದರೆ ಇದ್ದ ಪರ್ಯಾಯವೊಂದೇ. ತನ್ನ ಪಡೆಯೊಂದಿಗೆ, ಚಮಚಾಗಳೊಂದಿಗೆ, ಪಿತೂರಿಗಾರರೊಂದಿಗೆ ರಾಜೀವಗಾಂಧಿಯ ವಾಪಸಾತಿ.

ರಾಷ್ಟ್ರೀಯ ರಂಗದೊಳಗಿನ ಅಸಹ್ಯ ಕಿತ್ತಾಟಗಳಲ್ಲಿ ಪಕ್ಷವಹಿಸಲು ಸಿ.ಪಿ.ಐ. (ಎಂ) ನಿರಾಕರಿಸಿತು. ಬದಲಿಗೆ ರಾಷ್ಟ್ರೀಯ ಪರಿಸ್ಥಿತಿಯ ಗಂಭೀರತೆಯ ಬಗ್ಗೆ, ತಮ್ಮ ಭಿನ್ನಾಭಿಪ್ರಾಯಗಳನ್ನು ಮೀರಿನಿಂತು ಜನರ, ದೇಶದ ಸಮಸ್ಯೆಗಳನ್ನು ಪರಿಹರಿಸುವತ್ತ ಗಮನ ಕೇಂದ್ರೀಕರಿಸುವ ಅಗತ್ಯದ ಬಗ್ಗೆ, ಅನಿವಾರ್ಯತೆಯನ್ನು ಮತ್ತೆ ಮತ್ತೆ ನೆನಪಿಸಲು ಪ್ರಯತ್ನಿಸಿತು.

ಆದರೆ ಈ ನಡುವೆ ಆಟ ಮತ್ತೆ ಮುಂದುವರಿದಂತೆ ಕಾಣುತ್ತಿದೆ. ಹರ್ಯಾಣ ಸರ್ಕಾರವನ್ನು ಅಸ್ಥಿರಗೊಳಿಸುವ ಪ್ರಯತ್ನ ನಡೆದಿದೆಯೆಂಬ ಸುದ್ದಿಯಿದೆ. ಇದು ಒಬ್ಬ ವ್ಯಕ್ತಿಯನ್ನು ಅಥವಾ ವ್ಯಕ್ತಿಗಳನ್ನು ಬಯಸುವ, ಬಯಸದಿರುವ ಪ್ರಶ್ನೆಯಲ್ಲ. ಭಾರತದ ರಾಜಕೀಯ ಎಷ್ಟು ಪರಸ್ಪರ ಹೆಣೆದುಕೊಂಡಿದೆಯೆಂದರೆ ಹರ್ಯಾಣದಲ್ಲಿ ಅಸಿರರತೆ ಒಂದು ಹೊಸ ಸರಣಿಯನ್ನೇ ಆರಂಭಿಸುತ್ತದೆ. ಅದು ಹರ್ಯಾಣದಿಂದ ನಿಲ್ಲುವುದಿಲ್ಲ. ಅಂತಿಮವಾಗಿ ಕೇಂದ್ರವನ್ನೂ ತಟ್ಟಬಹುದು.

ಈ 'ಅರಮನೆ ಪಿತೂರಿ'ಗಳ ಅಪಾಯಕಾರೀ ಆಟದಲ್ಲಿ ತೊಡಗಿರುವ ರಾಜಕಾರಣಿಗಳಿಗೆ ತಮ್ಮ ಕೆಲಸಗಳ ಪರಿಣಾಮದ ಅರಿವಿದೆಯೇ? ಇದ್ದರೆ, ಈ ಎಲ್ಲಾ ಆಟ, ತಂತ್ರಗಳ ಹಿಂದೆ ಬಂದು ಅಪಾಯಕಾರೀ ಪಿತೂರಿ ಇದೆಯೆಂದಾಗುತ್ತದೆ.

ಅರಿವಿಲ್ಲವೆಂದಾದರೆ, ಅದೊಂದು ಹಿಮಾಲಾಯ ಗಾತ್ರದ ಮೂರ್ಖತನವನ್ನು ತೋರಿಸುತ್ತದೆ. ಎರಡೂ ಸಂದರ್ಭದಲ್ಲಿ ಒಂದೊಂತೂ ನಿಜ. ಕಾಂಗ್ರೆಸ್ (ಐ) ನ್ನು ಸಾರಾಸಗಟು ಅಧಿಕಾರದಿಂದ ಎಸೆದಾಗ ಜನರ ಎದ್ದ ನಿರೀಕ್ಷೆಗಳು ಹುಸಿಯಾಗುತ್ತವೆ.

ಜನರಿಗೆ ಆಶಾಭಂಗವಾಗಿದೆ ಅವರ ವ್ಯಗ್ರತೆ ಬೆಳೆಯುತ್ತಿದೆ. ಆದರೆ ಅದಿನ್ನೂ ಸರಕಾರದ ವಿರುದ್ಧ ಸಿಟ್ಟಾಗಿ ಪರಿವರ್ತನೆಗೊಂಡಿಲ್ಲ. ಆದರೆ ಈ ನಾಟಗೇಡಿ ರಾಜಕೀಯ ಆಟ ಮುಂದುವರಿದರೆ ಇದು ರಾಷ್ಟ್ರೀಯ ರಂಗ ಸರ್ಕಾರದ ವಿರುದ್ಧ ಸರ್ವವ್ಯಾಪಕ ಸಿಟ್ಟಿನ ರೂಪ ಪಡೆಯುತ್ತದೆ. - ಇದು ಖಂಡಿತ.

ವಸ್ತುನಿಷ್ಠವಾಗಿ ಹೇಳಬೇಕಾದರೆ, ಈ ಅಸಹ್ಯ ರಾಜಕೀಯ ದಾಳಗಳು ಕಾಂಗ್ರೆಸ್ (ಐ) ನ ವಾಪಸಾತಿಗೆ ದಾರಿ ಮಾಡಿಕೊಡುತ್ತಿವೆ. ಆದರೆ ಇನ್ನೂ ಸಮಯ ಮಿಂಚಿಲ್ಲ. ಜನತಾ ದಳದ ಮುಖಂಡರು ಈ ಆಟಗಳನ್ನು ನಿಲ್ಲಿಸಬೇಕು, ಜನರ ಜ್ವಲಂತ ಸಮಸ್ಯೆಗಳ ಪರಿಹಾರದತ್ತ ಗಮನ ಕೇಂದ್ರೀಕರಿಸಬೇಕು.

-ಕಾಂ.ಸುನಿಲ್ ಮೈತ್ರ

ಪೀಪಲ್ಸ್ ಡೆಮಾಕ್ರೆಸಿಯಲ್ಲಿ ಪ್ರಕಟವಾದ ಲೇಖನದ ಸಂಗ್ರಹಾನುವಾದ.

ಈ ವಾರ...

★ ಅಭಿವೃದ್ಧಿ ಕಾರ್ಯಗಳಲ್ಲಿ ಜನರ ಭಾಗವಹಿಸುವಿಕೆ. ಯಾವುದೇ ಕಾನೂನಿಲ್ಲದೆ ಶಿಸ್ತಿಗೆ ಬದ್ಧರಾಗಿರುವುದು ಮತ್ತು ತಮ್ಮ ಪರಿಸರವನ್ನು ಚೊಕ್ಕಟವಾಗಿಡುವ ಅವರ ಇಚ್ಛೆ-ಇವುಗಳಿಂದಾಗಿ ಚೀನಾ ದೇಶ ನಮಗಿಂತಲೂ ಮುಂದಿದೆ.

ಅನೇಕ ವಿಚಾರಗಳಲ್ಲಿ ನಮ್ಮೆರಡೂ ದೇಶಗಳಿಗೆ ಸಾಮ್ಯತೆಯಿದೆ. ಆದಾಗ್ಯೂ ವಿಸ್ತೀರ್ಣದಲ್ಲಿ ನಮ್ಮ ದೇಶಕ್ಕಿಂತ ಮೂರು ಪಟ್ಟು ದೊಡ್ಡದಾದ ಹಾಗೂ ನಮಗಿಂತ ಒಂದುವರೆಪಟ್ಟು ಹೆಚ್ಚು ಜನಸಂಖ್ಯೆಯಿರುವ ಚೀನಾ ಮಾಡಿರುವ ಪ್ರಗತಿ ಭಾರತಕ್ಕೆ ಒಂದು ಪಾಠವಾಗಿದೆ.

- ಮಾಜಿ ಮುಖ್ಯಮಂತ್ರಿ ರಾಮಕೃಷ್ಣಹೆಗಡೆ. ಇತ್ತೀಚಿನ ಚೀನಾ-ಜಪಾನ್ ಪ್ರವಾಸದ ಕುರಿತು

ಇಂಡಿಯನ್ ಎಕ್ಸ್‌ಪ್ರೆಸ್, ಆಗಸ್ಟ್ 12.

★ ಪಾಕಿಸ್ತಾನ ಅಧ್ಯಕ್ಷ ಗುಲಾಂ ಇಶಾಕ್‌ಖಾನ್ ಅವರು ಬೆನಜೀರ್ ಭುಟ್ಟೋ ಸರಕಾರವನ್ನು ವಜಾಗೊಳಿಸಿದ್ದು ಪ್ರಜಾಪ್ರಭುತ್ವವನ್ನು ಗೌರವಿಸುವ ಎಲ್ಲರಿಗೂ ಕೆಡುಕಿನ ಮುನ್ಸೂಚನೆಯಾಗಿದೆ.

- 'ದಿ ಹಿಂದೂಸ್ತಾನ್ ಟೈಮ್ಸ್' ಸಂಪಾದಕೀಯ ಆಗಸ್ಟ್ 7.

★ ಅಭಿವೃದ್ಧಿಶೀಲ ದೇಶಗಳ ಹೆಚ್ಚುತ್ತಿರುವ ಸಾಲ ಸಮಸ್ಯೆ 'ಒಂದು ರೀತಿಯ ಗುಲಾಮತನವನ್ನು' ಸೃಷ್ಟಿಸಿದೆ. ಅದನ್ನು ಬದಲಾಯಿಸುವ ದಿಸೆಯಲ್ಲಿ ವಿವಿಧಕ್ರಮಗಳನ್ನು ಕೈಗೊಳ್ಳಲು ಇದು ಸಕಾಲ.

ಸಾಲಪಡೆದ ಅಭಿವೃದ್ಧಿಶೀಲ ಆರ್ಥಿಕತೆಗಳು ಅಧೀನವಾದ ಆರ್ಥಿಕತೆಗಳಾಗಿ ಪರಿವರ್ತನೆಗೊಳ್ಳುತ್ತಿವೆ.-ಅದು ನವ ವಸಾಹತುಶಾಹಿಯ ಸ್ಪಷ್ಟಸೂಚನೆ ಆಗಿದೆ.

ದಕ್ಷಿಣ ಆಯೋಗದ ವರದಿಯಲ್ಲಿ.

★ (ರಾಷ್ಟ್ರೀಯರಂಗ) ಸರಕಾರ ಉರುಳುವುದು ತಮ್ಮ ಸೋಲೆಂದು ಬಹಳಷ್ಟು ಜನರು ಅಭಿಪ್ರಾಯ ಪಡುತ್ತಾರೆ. ಯಾಕೆಂದರೆ ರಾಜಕೀಯ ಬದಲಾವಣೆ ಬಹಳಷ್ಟು ಕಷ್ಟ-ಪರಿಶ್ರಮದಿಂದ ಬರುತ್ತದೆ. ಆದ್ದರಿಂದಲೇ ಜನರಿಗೆ ಚಿಂತೆಆಗಿರುವದು.

ವ್ಯಾಪಾರ್ (ಹಿಂದಿ ಸಾಪ್ತಾಹಿಕ) ದಲ್ಲಿ,
ಕುಂದನ್ ವ್ಯಾಸ್ ಆಗಸ್ಟ್ 6.

★ ಪೂರ್ವ ಜರ್ಮನಿ ಡಿಸೆಂಬರ್ 2 ರಂದು ಪಶ್ಚಿಮ ಜರ್ಮನಿಯೊಂದಿಗೆ ವಿಲೀನವಾದಾಗ ಪೂರ್ವಜರ್ಮನಿಯ 30 ಕ್ಕೂ ಹೆಚ್ಚು ಅಧಿಕಾರಿಗಳು ಕೆಲಸ ಉಳಿಸಿಕೊಳ್ಳುವ ಖಾತರಿಯಿಲ್ಲ. ಸಮಾಜವಾದಿ ಪೂರ್ವಜರ್ಮನಿಯಲ್ಲಿ ಸರಕಾರವೇ ಏಕೈಕ ಉದ್ಯೋಗದಾತನಾಗಿದ್ದು ಏಕೀಕರಣದ ನಂತರ ಅಲ್ಲಿ ನೂರಾರು ಸಾವಿರ ಜನರು ಕೆಲಸ ಕಳೆದುಕೊಳ್ಳಲಿದ್ದಾರೆ.

-ಇಂಡಿಯನ್ ಎಕ್ಸ್‌ಪ್ರೆಸ್.

ಬಾಲಂಗೋಚಿ

★ ರಾಷ್ಟ್ರದ ಆರ್ಥಿಕ ರಂಗ ಪ್ರಗತಿಪಥದಲ್ಲಿ ಪಾದಾರ್ಪಣೆಮಾಡಿ ಮುನ್ನಡೆಯುತ್ತಿರುವ ಸಂದರ್ಭದಲ್ಲಿ ಕಾಂಗ್ರೆಸ್(ಐ)ಯೇತರ ಸರಕಾರ ಕೇಂದ್ರದಲ್ಲಿ ಅಧಿಕಾರಕ್ಕೆ ಬರುವ ಮೂಲಕ ಆರ್ಥಿಕ ಕ್ಷೇತ್ರವನ್ನು ಹದಗೆಡಿಸುತ್ತಿದೆ.

- ಎ.ಐ.ಸಿ.ಸಿ.(ಐ) ಅಧಿವೇಶನದಲ್ಲಿ ಮಾಜಿ ಕೇಂದ್ರ ಸಚಿವ ಪ್ರಣವಕುಮಾರ್ ಮುಖರ್ಜಿ ಉವಾಚ.

★ ಅತ್ಯದ್ಭುತವಾದ ಈ ಥೀಸಿಸ್‌ಗೆ ಇಂದಿರಾಗಾಂಧಿ ಮುಕ್ತ ವಿ.ವಿ. ಡಾಕ್ಟರೇಟ್ ಕೊಡಬೇಕೆಂದು ಮರಿಕಾಂಗ್ರೆಗಳು ದೇಶಾದ್ಯಂತ ಚಳವಳಿ ಹೂಡಲು ಸನ್ನಾಹ ಹೂಡುತ್ತಿದ್ದಾರೆಂದು ಡಿಟೆಕ್ಟಿವ್ 'ಪಿ' ಇಂಟೆಲಿಜೆನ್ಸ್ ಬ್ಯೂರೋಗೆ ಗುಪ್ತವರದಿ ಕಳಿಸಿದ್ದಾನೆ.

ಎತ್ತ ಸಾಗಿದೆ?

ಪುಟ 5 ರಿಂದ

ಇದು 73.69 ಲಕ್ಷಕ್ಕೆ ಇಳಿಯಿತು. ಇದು ಸಹಜವೇ. ಏಕೆಂದರೆ ದೇಶದ ಆರ್ಥಿಕತೆಯ, ದೇಶದ ಜನರ ಜೀವನ ಪರಿಸ್ಥಿತಿಯ ಸುಧಾರಣೆ ಖಾಸಗೀ ಬಂಡವಾಳದ ಉದ್ದೇಶವಲ್ಲ. ಖಾಸಗೀ ಲಾಭವಷ್ಟೇ ಅದರ ಉದ್ದೇಶ. ಆದ್ದರಿಂದ ಅವರಿಗೆ ಹೆಚ್ಚೆಚ್ಚು ರಿಯಾಯ್ತಿ ನೀಡುವ ನೀತಿ ಎಂದೂ ಉದ್ಯೋಗಾವಕಾಶ ಹೆಚ್ಚಿಸದು. ಜನಸಾಮಾನ್ಯರ ಬಳಕೆಯ ವಸ್ತುಗಳ ಉತ್ಪಾದನೆಯತ್ತ ಗಮನ ಹರಿಸದು.

ರಾಷ್ಟ್ರೀಯ ರಂಗ ಸರ್ಕಾರಕ್ಕೆ ಇದು ಗೊತ್ತಿಲ್ಲವೇ? ಅಮೆರಿಕನ್ ಸಾಮ್ರಾಜ್ಯಶಾಹಿಗಳ ಸುಪರ್ 301 ಬೆದರಿಕೆಗೆ ಮಣಿದ ಹೇಳಿಕೆಯಲ್ಲವೇ ಇದು?

ಪಾಕಿಸ್ತಾನದ ಪ್ರಜಾಪ್ರಭುತ್ವ ಚಳುವಳಿಗೊಂದು ಹಿನ್ನಡೆ

ಪಾಕಿಸ್ತಾನದ ಬೆಳವಣಿಗೆಗಳ ಬಗ್ಗೆ ಪಿ.ಬಿ.

ಪಾಕಿಸ್ತಾನೀ ಅಧ್ಯಕ್ಷ ಬೆನ್‌ಝಿರ್ ಭುಟ್ಟೋ ಸರಕಾರವನ್ನು ವಜಾಮಾಡಿರುವುದನ್ನು ಸಿ.ಪಿ.ಐ. (ಎಂ) ಪೊಲಿಟ್‌ಬ್ಯುರೋ ಖಂಡಿಸಿದೆ. ಪಾಕಿಸ್ತಾನೀ ಜನತೆ ವರ್ಷಾನುಗಟ್ಟಲೆ ಕಷ್ಟಪಟ್ಟು ಹೋರಾಡಿ ಒಂದು ಪ್ರಜಾಸತ್ತಾತ್ಮಕವಾಗಿ ಚುನಾಯಿತವಾದ ಸರ್ಕಾರವನ್ನು ಸ್ಥಾಪಿಸಿದರು. 10 ತಿಂಗಳಾದ ಈ ಸರಕಾರದ ವಜಾ ಹಾಗೂ ಶ್ರೀಮತಿ ಭುಟ್ಟೋರವರ ಗೃಹಬಂಧನ ಪಾಕಿಸ್ತಾನದಲ್ಲಿ ಪ್ರಜಾಪ್ರಭುತ್ವಕ್ಕಾಗಿ ಜನತೆಯ ಹೋರಾಟಕ್ಕೊಂದು ಹಿನ್ನಡೆ ಎಂದು ಪಿ.ಬಿ. ಹೇಳಿದೆ. ಈ ಬಗ್ಗೆ ಆಗಸ್ಟ್ 7 ರಂದು ಅದು ಒಂದು ಹೇಳಿಕೆ ನೀಡಿದೆ.

ಪಾಕಿಸ್ತಾನದ ರಾಷ್ಟ್ರೀಯ ಅಸೆಂಬ್ಲಿ ಸಭೆ ಸೇರಿ ಶ್ರೀಮತಿ ಭುಟ್ಟೋ ಸರಕಾರದಲ್ಲಿ ವಿಶ್ವಾಸ ವ್ಯಕ್ತಪಡಿಸುವ ನಿರ್ಣಯವೊಂದನ್ನು ಚರ್ಚಿಸಿ, ಅಂಗೀಕರಿಸಲಿತ್ತು. ಅದರ ಹಿಂದಿನ ದಿನವೇ ಈ ವಜಾ ನಡೆದಿದೆ. ಈ ಕ್ರಮದಿಂದ ಪ್ರಜಾಪ್ರಭುತ್ವ ಪ್ರಕ್ರಿಯೆ ಅಪಾಯದಲ್ಲಿ ಸಿಲುಕಿದೆ. ಪಾಕಿಸ್ತಾನದೊಳಗಿನ ಸಾಮ್ರಾಜ್ಯಶಾಹಿ - ಪರ, ಮಿಲಿಟರಿ - ಪರ ಶಕ್ತಿಗಳ ಕೈ ಮೇಲಾಗಿದೆ ಎಂದಿರುವ ಪಿ.ಬಿ. ಹೇಳಿಕೆ ಈ ಬೆಳವಣಿಗೆಗಳು ಭಾರತ - ಪಾಕಿಸ್ತಾನೀ ಸಂಬಂಧಗಳ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ ಎಂದಿದೆ.

ಪ್ರಜಾಪ್ರಭುತ್ವ 'ಮತ್ತು ನಾಗರೀಕ ಹಕ್ಕುಗಳಿಗಾಗಿ ಪಾಕಿಸ್ತಾನೀ ಜನತೆ ಮುಂದುವರಿಸಲಿರುವ ಹೋರಾಟಕ್ಕೆ ಸಿ.ಪಿ.ಐ. (ಎಂ) ಬೆಂಬಲವನ್ನು ಪಿ.ಬಿ. ಹೇಳಿಕೆ ವ್ಯಕ್ತಪಡಿಸಿದೆ.

ಸಾಲಮನ್ನಾಕ್ಕಾಗಿ ರೈತರ ಧರಣಿ

ದಿನಾಂಕ 30-7-90 ರಂದು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿಯ ಕರೆಯ ಮೇರೆಗೆ ರಾಯಚೂರ ಜಿಲ್ಲಾ ಕುಷ್ಟಗಿ ತಾಲೂಕಿನ ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್ ಶಾಖೆ ಮತ್ತು ಹನಮನಗರ ಶಾಖೆಗಳ ಮುಂದೆ ಧರಣಿ ಸತ್ಯಾಗ್ರಹ ನಡೆಸಲಾಯಿತು.

ಕುಷ್ಟಗಿಯಲ್ಲಿ ರೈತ ಸಂಘದ ಕಛೇರಿಯಿಂದ ಕೆಂಪು ಬಾವುಟ ಹಿಡಿದ ರೈತ - ಕೃಷಿಕಾರ್ಮಿಕರು ಘೋಷಣೆಗಳನ್ನು ಕೂಗುತ್ತಾ ಮೆರವಣಿಗೆ ಮೂಲಕ ನಗರದಲ್ಲಿರುವ ಎಲ್ಲಾ ಬ್ಯಾಂಕ್‌ಗಳಿಗೆ ಹೋಗಿ ರೈತ ಸಾಲ ವಸೂಲಾತಿಗಾಗಿ ರೈತರ ಬಂಧನ, ಆಸ್ತಿಯ ಮುಟ್ಟುಗೋಲು ಮುಂತಾದವುಗಳ ಬಗ್ಗೆ ಪ್ರತಿಭಟನೆ ವ್ಯಕ್ತಪಡಿಸಿ, ಸ್ಟೇಟ್ ಬ್ಯಾಂಕ್ ಆಫ್. ಹೈದರಾಬಾದ್ ಶಾಖೆಯ ಎದುರು ಧರಣಿ ಸತ್ಯಾಗ್ರಹ ನಡೆಸಲಾಯಿತು.

ಸತ್ಯಾಗ್ರಹಿಗಳನ್ನು ಉದ್ದೇಶಿಸಿ ಪ್ರಾಂತ ರೈತ ಸಂಘದ ಅಧ್ಯಕ್ಷರಾದ ಕಾಂ. ಆರ್.ಕೆ. ದೇಸಾಯಿ ಅವರು ಮಾತನಾಡಿ. ರೈತ - ಕೃಷಿ ಕೂಲಿಗಾರರು ಸಂಘಟಿತರಾಗಿ ಜಮೀನ್ದಾರೀ - ಬಂಡವಾಳಶಾಹಿ ಸರಕಾರಗಳನ್ನು ಕಿತ್ತೊಗೆದು ರೈತ - ಕಾರ್ಮಿಕರ ಸರಕಾರವನ್ನು ಸ್ಥಾಪಿಸಬೇಕೆಂದು ಕರೆ ಇತ್ತರು.

ದಿನಾಂಕ 27-8-90 ರಂದು, ಕುಷ್ಟಗಿ ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್ ಶಾಖೆಯಿಂದ ಸಾಲ ಪಡೆದಿದ್ದ ರೈತ. ಭರೋರಮಪ್ಪ ಮಂಡಲಮರಿ ಇವರನ್ನು ಕುಷ್ಟಗಿ ಮುನ್ಸಿಫ್ ನ್ಯಾಯಾಲಯ ಸಾಲ ವಸೂಲಾತಿಗಾಗಿ ಬಂಧನ ಮಾಡುವ ಬಗ್ಗೆ ಪ್ರಾಂತ ರೈತ ಸಂಘದವರು ಪ್ರತಿಭಟಿಸಿ, ಆ ಬ್ಯಾಂಕಿನ ಮೇನೇಜರ್‌ರವರನ್ನು ಘೇರಾವ್ ಮಾಡುವುದಾಗಿ ತಿಳಿಸಿದಾಗ, ಮೇನೇಜರರು ಭರಮಪ್ಪನವರನ್ನು ಬಂಧನ ಮಾಡದಂತೆ ತಡೆದಿದ್ದಾರೆ.

ದಿನಾಂಕ 6-8-1990 ರಂದು ಸಭೆ ಸೇರಿದ್ದ ತಾಲೂಕು ಪ್ರಾಂತ ರೈತ ಸಂಘವು ತಮ್ಮ ತಾಲೂಕಿನ ತುರ್ತು ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ, ದಿನಾಂಕ 22-8-90 ರಿಂದ ಅನಿರ್ಧಿಷ್ಟ ಕಾಲ ಧರಣಿ ನಡೆಸಲು ತೀರ್ಮಾನಿಸಿದೆ.

ಅವಕಾಶ ಬಂತು

ಪುಟ 1 ರಿಂದ

ಸೇರಿಸುವುದಾದರೆ ನಾನು ಪಕ್ಷಕ್ಕೆ ಸೇರಲು ತಯಾರು" ಎಂದೆ.

ಕಾಂ। ಲಿಂಗಪ್ಪ ಸುವರ್ಣರು 1952 ರಲ್ಲಿ ಚುನಾವಣೆಯ ನಂತರ ನಮ್ಮ ಊರಿನ ಕಮ್ಯುನಿಸ್ಟ್ ಸೆಲ್‌ನಲ್ಲಿ ನನ್ನನ್ನು ಉಮೇದುವಾರ ಸದಸ್ಯರಾಗಿ ಸೇರಿಸಿದರು. ನನ್ನ ಜೀವನದಲ್ಲಿ ಒಂದು ಆದರ್ಶಕ್ಕಾಗಿ ಜನ ಸಾಮಾನ್ಯರ ಏಳಿಗೆಗಾಗಿ ದುಡಿಯುವ ಅವಕಾಶ ಒದಗಿ ಬಂತು.

ನಾನು ಅಂದು ಮಾಡಿದ ತೀರ್ಮಾನಕ್ಕಾಗಿ ಹಾಗೂ ಮುಂದೆ 1961 ರಲ್ಲಿ ನಾನು ಪೂರ್ಣ ಕಾಲ ಕಾರ್ಯಕರ್ತನಾಗಿ ದುಡಿಯುವ ತೀರ್ಮಾನಕ್ಕಾಗಿ ಹಾಗೂ ಮುಂದೆ 1961 ರಲ್ಲಿ ನಾನು ಪೂರ್ಣಕಾಲ ಕಾರ್ಯಕರ್ತನಾಗಿ ದುಡಿಯುವ ತೀರ್ಮಾನ ಮಾಡಿದುದಕ್ಕಾಗಿ ನಾನು ಇಂದು 1990 ರಲ್ಲಿ ಪಶ್ಚಾತ್ತಾಪ ಪಡುತ್ತಿಲ್ಲ..ಬದಲು ಹೆಮ್ಮೆ ಪಡುತ್ತಿದ್ದೇನೆ.

ಚಂದಾದಾರರ, ಏಜೆನ್ಸಿದಾರರ ಗಮನಕ್ಕೆ

ಚಂದಾ ಹಣ ಅಥವಾ ಏಜೆನ್ಸಿ ಬಿಲ್ಲನ್ನು ಮನಿಯಾರ್ಡರ್ ಮೂಲಕ ಪಾವತಿ ಮಾಡುವಾಗ ಚಂದಾದಾರರು/ಏಜೆನ್ಸಿದಾರರು ತಾವು ಪಾವತಿಮಾಡುವ ಹಣ ಯಾವುದಕ್ಕೆ (ಚಂದಾವೋ, ಏಜೆನ್ಸಿಬಿಲ್ಲೋ) ಎಂದೂ, ಹಾಗೂ ಹಣ ಕಳುಹಿಸುತ್ತಿರುವ ಚಂದಾಗಾರರ/ ಏಜೆಂಟರ ಹೆಸರನ್ನು ಸ್ಪಷ್ಟವಾಗಿ ನಮೂದಿಸಬೇಕೆಂದು ಕೋರುತ್ತೇವೆ.

ನಮಗೆ ಬರುತ್ತಿರುವ ಬಹುಪಾಲು ಎಂ.ಓ. ಗಳಲ್ಲಿ ಇವು ಇರುವುದಿಲ್ಲವಾದ್ದರಿಂದ ಹಣವನ್ನು ಸೂಕ್ತರೀತಿಯಲ್ಲಿ ಜಮಾ ಮಾಡಿಕೊಳ್ಳಲು ನಮಗೆ ಬಹಳ ತೊಂದರೆಯಾಗುತ್ತಿದೆ.

ಆದ್ದರಿಂದ ಇದರಲ್ಲಿ ಚಂದಾಗಾರರ/ಏಜೆಂಟರ ಸಹಕಾರ ಕೋರುತ್ತೇವೆ.

ವ್ಯವಸ್ಥಾಪಕರು

Printed and Published by P.Ramachandra Rao on behalf of Communist Party of India(Marxist), Karnataka State Committee,
2nd cross, Munis... Block, palace Guttahalli, Bangalore-560003, Editor P.RAMACHANDRA...